

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 26 ಮಂಗಳವಾರ 2023

ಸಂಪುಟ: 44 | ಸಂಚಿಕೆ: 161 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕಾವೇರಿಯ ವಾಸ್ತವ ಸ್ಥಿತಿ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡಲು ಪ್ರಧಾನಿ ಮೋದಿ ಅವರಿಗೆ ಮಾಜಿ ಪ್ರಧಾನಿ ದೇವೇಗೌಡರ ಮನವಿ

ನೀವು ಮಧ್ಯ ಪ್ರವೇಶಿಸಿ

■ ತಕ್ಷಣ ವಾಸ್ತವಾಂಶ ಆಧರಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಜಲಶಕ್ತಿ ಇಲಾಖೆಗೆ ಸೂಚನೆ ನೀಡುವಂತೆ ಕೋರಿಕೆ ■ ತಮಿಳ್ನಾಡಿನ ಸಂಸದರಲ್ಲಿರುವಂತೆ ನಮ್ಮ ರಾಜ್ಯದ ಸಂಸದರಲ್ಲಿ ಒಗ್ಗಟ್ಟಿಲ್ಲ ■ ಪ್ರಧಾನಿಗೆ ಐದು ಪುಟಗಳ ಪತ್ರ ಬರೆದ ಮಾಜಿ ಪ್ರಧಾನಿ




ಬೆಂಗಳೂರು,ಸೆ.25(ಕೆಎಂಶಿ)–ಕರ್ನಾಟಕ–ತಮಿಳುನಾಡು ಕಾವೇರಿ ಜಲ ವಿವಾದ ಬಗೆಹರಿಸಲು ಮಧ್ಯ ಪ್ರವೇಶ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಇಂದಿಲ್ಲಿ ಮನವಿ ಮಾಡಿದ್ದಾರೆ.

ಮಳೆ ಇಲ್ಲದೆ ರೈತರು ಕಂಗಾಲಾಗಿದ್ದು, ನೀವು ವಾಸ್ತವಾಂಶ ಆಧರಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಕೇಂದ್ರ ಜಲಶಕ್ತಿ ಇಲಾಖೆಗೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ. ಪ್ರಧಾನಿ ಅವರಿಗೆ ಬರೆದಿರುವ 5 ಪುಟಗಳ ಪತ್ರದಲ್ಲಿ ಪ್ರಸ್ತುತ ಕರ್ನಾಟಕದ ಕಾವೇರಿ ಸ್ಥಿತಿಗತಿಯ ವಾಸ್ತವಾಂಶವನ್ನು ದಾಖಲೆ ಸಮೇತ ನೀಡಿದ್ದಾರೆ.

ವಿವಾದಕ್ಕೆ ಸಂಬಂಧಿಸಿದಂತೆ ಏನು ವಾಸ್ತವ ಇದೆಯೋ ಅದರ ಆಧಾರದ ಮೇಲೆ ಜಲಶಕ್ತಿ ಇಲಾಖೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೆ, ರಾಜ್ಯದ ಜನರಿಗೆ ಕುಡಿಯುವ ನೀರಾದರೂ ದೊರೆಯುತ್ತದೆ. ತಕ್ಷಣವೇ ವಾಸ್ತವಾಂಶ ತಿಳಿಯಲು ಕಾವೇರಿ ಜಲಾನಯನ ಪ್ರದೇಶದಲ್ಲಿನ ಜಲಾಶಯಗಳಲ್ಲಿ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಲು ಈ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ಸ್ವತಂತ್ರವಾದ ಬಾಹ್ಯ ಏಜೆನ್ಸಿಯನ್ನು ತಕ್ಷಣವೇ ನೇಮಿಸಬೇಕು.

ಮಳೆಯ ಕೊರತೆ, ಒಳಹರಿವು, ಜಲಾಶಯದ ಮಟ್ಟ, ಶೇಖರಣಾ ಸಾಮರ್ಥ್ಯ,



ಬೆಳೆ ಮತ್ತು ಕುಡಿಯುವ ನೀರಿನ ಅಗತ್ಯತೆಗಳು, ಉಭಯ ರಾಜ್ಯಗಳ ವಿವಿಧ ಮಳೆ ಋತುಗಳು ಸೇರಿದಂತೆ ವಾಸ್ತವಿಕವಾಗಿ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತವಾದ ಸಂಕಷ್ಟ ಸೂತ್ರವನ್ನು ರಚಿಸುವ ಜವಾಬ್ದಾರಿಯನ್ನು ಈ ಸಂಸ್ಥೆಗೆ ವಹಿಸಬೇಕು ಎಂದಿದ್ದಾರೆ.

ಐದು ಸದಸ್ಯರ ತಜ್ಞರ ಸಮಿತಿ ರಚಿಸುವಂತೆ ಕೋರಿರುವ ಅವರು, ಸಮಿತಿಯು ಉಭಯ ರಾಜ್ಯಗಳಿಗೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಬೇಕು. ಸಮಿತಿಯು ಸೂಕ್ತ ಕ್ರಮಕೈಗೊಳ್ಳಲು ಸಿಡಬ್ಲ್ಯೂಎಂಎಗೆ ಮಾತ್ರವಲ್ಲದೆ, ಸುಪ್ರೀಂ ಕೋರ್ಟ್‌ಗೆ ತಕ್ಷಣದ ಪರಿಹಾರದ ಕ್ರಮವಾಗಿ ವರದಿ ಮಾಡಬೇಕೆಂದು ಸಲಹೆ ನೀಡಿದ್ದಾರೆ. ಈ ಸಮಿತಿಯು ನಿಯಮಿತವಾಗಿ ಜಲಾನಯನ ಪ್ರದೇಶದಲ್ಲಿನ ಜಲಾಶಯಗಳಿಗೆ ಭೇಟಿ ನೀಡಬೇಕು. ಅಷ್ಟೇ ಅಲ್ಲದೆ, 15 ದಿನಗಳಿಗೊಮ್ಮೆ ವಾಸ್ತವ ದಾಖಲೆಗಳನ್ನು ನಿಮ್ಮ ಮುಂದಿಡಬೇಕು. ಕರ್ನಾಟಕದಲ್ಲಿ ಈ ವರ್ಷ ಆಗಸ್ಟ್ ಮತ್ತು ▶ 9ನೇ ಪುಟಕ್ಕೆ



ಅರಮನೆ ಆವರಣಕ್ಕೆ ಆಗಮಿಸಿದ ದಸರಾ ಗಜಪಡೆಯ ಎರಡನೇ ತಂಡದ ಐವರು ಸದಸ್ಯರು

ಮೈಸೂರು,ಸೆ.25 (ಎಂಟಿವೈ)–ದಸರಾದಲ್ಲಿ ಪಾಲ್ಗೊಳ್ಳಲು ಎರಡನೇ ತಂಡದಲ್ಲಿ ಐದು ಆನೆಗಳು ಸೋಮವಾರ ಸಂಜೆ ಅರಮನೆ ಆವರಣಕ್ಕೆ ಆಗಮಿಸಿದ್ದು, ಅವುಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಸ್ವಾಗತಿಸಲಾಯಿತು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವಕ್ಕೆ 14 ಆನೆಗಳ ಆಯ್ಕೆ ಮಾಡಲಾಗಿದ್ದು, ಮೊದಲ ತಂಡದಲ್ಲಿ ಗಜಪಡೆ ನಾಯಕ, ಅಂಬಾರಿ ಆನೆ ಅಭಿಮನ್ಯು ಸೇರಿದಂತೆ 9 ಆನೆಗಳನ್ನು ಸೆ.1ರಂದು ಕರೆತರಲಾಗಿತ್ತು. ಎರಡನೇ ತಂಡದಲ್ಲಿ ಮೂರು ಹೊಸ ಆನೆ ಸೇರಿದಂತೆ 5 ಆನೆಗಳನ್ನು ಕರೆತರಲಾಗಿದೆ. ಇನ್ನು ಮುಂದೆ ಮೊದಲ ತಂಡದ ಆನೆಗಳೊಂದಿಗೆ ಇವು ಸಹ ಜಂಬೂಸವಾರಿ ಮಾರ್ಗದಲ್ಲಿ ತಾಲೀಮಿನಲ್ಲಿ ಪಾಲ್ಗೊಳ್ಳಲಿವೆ.

ಸಾಂಪ್ರದಾಯಿಕ ಪೂಜೆ ಸಲ್ಲಿಕೆಯೊಂದಿಗೆ ಸ್ವಾಗತ

ಎರಡನೇ ತಂಡದ ಆನೆಗಳು: ಸೋಮವಾರ ಸಂಜೆ ಅರಮನೆ ತಲುಪಿದ 2ನೇ ತಂಡದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಮಾಪುರ ಶಿಬಿರದಿಂದ ರೋಹಿತ(21 ವರ್ಷ), ಹೆಣ್ಣಾನೆಗಳಾದ ಹಿರಣ್ಯ (46), ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ದೊಡ್ಡ ಹರವೆ ಆನೆ ಶಿಬಿರದ ಲಕ್ಷ್ಮಿ(52), ದುಬಾರೆ ಶಿಬಿರದ ಪ್ರಶಾಂತ (50) ಹಾಗೂ ಸುಗ್ರೀವ್ (41) ಆಗಮಿಸಿವೆ. ಇವುಗಳೊಂದಿಗೆ ಮಾವುತರು, ಕಾವಾಡಿಗರ ಪರಿವಾರ ಆಗಮಿಸಿದೆ. ಈ ಆನೆಗಳಲ್ಲಿ ರೋಹಿತ, ಹಿರಣ್ಯ ಹಾಗೂ ದೊಡ್ಡಹರವೆಯ ಲಕ್ಷ್ಮಿ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿವೆ. ಮೊದಲ ತಂಡದಲ್ಲಿ ಬಂದಿರುವ ಕಂಜನ್ ಸೇರಿದಂತೆ ಈ ಬಾರಿ 4 ಆನೆಗಳು ಇದೇ ಮೊದಲ ಬಾರಿ ದಸರಾದಲ್ಲಿ ಪಾಲ್ಗೊಳ್ಳುತ್ತಿವೆ. ಮೊದಲ ತಂಡದಲ್ಲಿ ಆಗಮಿಸಿದ ಗಜಪಡೆ ನಾಯಕ ಅಭಿಮನ್ಯು, ▶ 10ನೇ ಪುಟಕ್ಕೆ





ಕೋರ್ಟ್ ಆದೇಶದಂತೆ ತಮಿಳ್ನಾಡಿಗೆ ನೀರು ಹರಿಸುವುದು ಇಂದು ಅಂತ್ಯ

ಇಂದು ಸುಪ್ರೀಂಕೋರ್ಟ್ ಮುಂದೆ ಎರಡೂ ರಾಜ್ಯಗಳ ಅರ್ಜಿ ವಿಚಾರಣೆ



ಬೆಂಗಳೂರು,ಸೆ.25(ಕೆಎಂಶಿ)–ತಮಿಳು ನಾಡಿಗೆ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರು ಹರಿಸುವುದು ಮಂಗಳವಾರ ಕಡೆಯ ದಿನ. ಕಳೆದ 15 ದಿನಗಳಿಂದ ರಾಜ್ಯದ ಕಾವೇರಿ ಜಲಾನಯನ ಪ್ರದೇಶ ದಿಂದ ತಮಿಳುನಾಡಿಗೆ ಈ ಪ್ರಮಾಣದ ನೀರನ್ನು ಹರಿಸಲಾಗುತ್ತಿತ್ತು. ನಮ್ಮ ಜಲಾಶಯಗಳಲ್ಲಿ ನೀರಿನ ಕೊರತೆಯಿಂದ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಲಿದೆ ಎಂಬುದು ಗಮನದಲ್ಲಿದ್ದರೂ ರಾಜ್ಯ ಸರ್ಕಾರ ಕಾನೂನು ಪಾಲನೆ ಮಾಡಿತ್ತು. ತಮಿಳುನಾಡು ಮತ್ತು ಕರ್ನಾಟಕ ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟಿನ ತ್ರಿಸದಸ್ಯ ವಿಶೇಷ ಪೀಠದ ಮುಂದೆ ಸಲ್ಲಿಸಿರುವ ಅರ್ಜಿಯು ವಿಚಾರಣೆಗೆ ಬರಲಿದೆ.

ರಾಜ್ಯದಿಂದ ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ಮಂಡ್ಯ–ಮದ್ದೂರು ಈಗಾಗಲೇ ಬಂದ್ ಆಚರಿಸಿದವು. ಕೆಲವು ಸಂಘಟನೆಗಳು ಕರೆ ನೀಡಿರುವ ಬೆಂಗಳೂರು ಬಂದ್‌ಗೆ ಬಿಜೆಪಿ ಮತ್ತು ಜೆಡಿಎಸ್ ಬೆಂಬಲ ವ್ಯಕ್ತಪಡಿಸಿವೆ. ▶ 9ನೇ ಪುಟಕ್ಕೆ

‘ಕಾವೇರಿ’ಗಾಗಿ ಮಂಡ್ಯದಲ್ಲಿ ಮುಂದುವರೆದ ಹಿತರಕ್ಷಣಾ ಸಮಿತಿ ಹೋರಾಟ

ಬಿಜೆಪಿ ಪಟಾಪಟಿ ಚಡ್ಡಿ ಚಳವಳಿ

ಮಾಜಿ ಡಿಸಿಎಂ ಅಶ್ವತ್ಥ್ ನಾರಾಯಣ್, ಶಾಸಕ ವಿಜಯೇಂದ್ರ ಸಾಥ್

● ರಾಜ್ಯದ ಜನತೆಗೆ ಮದ್ಯ ಬೇಡ: ಕಾವೇರಿ ಭಾಗ್ಯ ಕಲ್ಪಿಸಿ
● ನಮ್ಮದು ರೈತಪರ ಹೋರಾಟವೇ ಹೊರತು ರಾಜಕಾರಣವಲ್ಲ



ಮಂಡ್ಯ, ಸೆ.25(ಮೋಹನ್‌ರಾಜ್)–ಕಾವೇರಿ ಜಲಾನಯನ ಪ್ರದೇಶದಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸುವಂತೆ ಹೋರಾಟ ಮುಂದುವರೆಸಿರುವ ರೈತ ಹಿತರಕ್ಷಣಾ ಸಮಿತಿ ಪ್ರತಿಭಟನೆಗೆ ಸೋಮವಾರ ಬಿಜೆಪಿ ಸಾಥ್ ನೀಡಿದ್ದು, ಪಕ್ಷದ ಕಾರ್ಯಕರ್ತರು ಚಡ್ಡಿ ಮೆರವಣಿಗೆ ನಡೆಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಿಂದ ಶಾಸಕರಾದ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಹಾಗೂ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ರಾಸುಗಳ ಜೊತೆ ಚಡ್ಡಿ ಮೆರವಣಿಗೆ ಹೊರಟ ಬಿಜೆಪಿ ಕಾರ್ಯಕರ್ತರು, ಸರ್‌ಎಂವಿ ಪುತ್ಥಳಿ ಬಳಿ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟದಲ್ಲಿ ಭಾಗಿಯಾದರು. ಬಳಿಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್ ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿರುವಂತೆ ಸಂಕಷ್ಟ ಸಮಯದಲ್ಲಿ ತಮಿಳುನಾಡಿನ ▶ 9ನೇ ಪುಟಕ್ಕೆ

ಇಂದು ‘ಬೆಂಗಳೂರು ಬಂದ್’

ಶಾಲಾ–ಕಾಲೇಜುಗಳಿಗೆ ರಜೆ, ಪರೀಕ್ಷೆ ಮುಂದೂಡಿಕೆ, ಸಾರಿಗೆ ವ್ಯವಸ್ಥೆ ಅನುಮಾನ; ಮೆಟ್ರೋ ಇರುತ್ತೆ



ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ವಿರೋಧಿಸಿ ಈಗಾಗಲೇ ರಾಜ್ಯಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳ ನಡುವೆ, ಮಂಗಳವಾರ ಬೆಂಗಳೂರು ಬಂದ್‌ಗೆ ಕರೆ ನೀಡಲಾಗಿದೆ. ಅಲ್ಲದೆ ಶುಕ್ರವಾರ ಕರ್ನಾಟಕ ಬಂದ್‌ಗೂ ಕರೆ ನೀಡಲಾಗಿದೆ. ರೈತ ಮುಖಂಡ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಬೆಂಗಳೂರು ಬಂದ್‌ಗೆ ಕರೆ ನೀಡಲಾಗಿದ್ದು, ಹಲವು ರೈತ ಮತ್ತು ಕನ್ನಡಪರ ಸಂಘಟನೆಗಳು ಇದಕ್ಕೆ ಬೆಂಬಲ ನೀಡಿವೆ.

ಬಂದ್ ಹಿನ್ನಲೆಯಲ್ಲಿ ಬೆಂಗಳೂರು ನಗರದ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮಕ್ಕಳ ಸುರಕ್ಷತೆ, ರಕ್ಷಣೆ ದೃಷ್ಟಿಯಿಂದ ರಜೆ ಘೋಷಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಸೋಮವಾರ ಆದೇಶ ಹೊರಡಿಸಿದ್ದಾರೆ. ಅದೇ ರೀತಿ ಖಾಸಗಿ ಶಾಲೆಗಳ ಒಕ್ಕೂಟದಿಂದ ಬೆಂಗಳೂರಿನ ಶಾಲೆಗಳಿಗೆ ರಜೆ ನೀಡಲಾಗಿದೆ. ಈ ಕುರಿತಾಗಿ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಮಾಹಿತಿ ನೀಡಿದ್ದಾರೆ. ಎಲ್‌ಕೆಜಿಯಿಂದ 10ನೇ ತರಗತಿವರೆಗಿನ ಶಾಲೆಗಳಿಗೆ ರಜೆ ನೀಡಲಾಗಿದೆ ಎಂದಿದ್ದಾರೆ.

ಪರೀಕ್ಷೆಗಳು ಮುಂದೂಡಿಕೆ: ಬಂದ್ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಿಗದಿಯಾಗಿದ್ದ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಬೆಂಗಳೂರು ವಿವಿಯ ▶ 9ನೇ ಪುಟಕ್ಕೆ

ಇಂದಿನ ಬಂದ್‌ಗೆ ಅನುಮತಿ ನೀಡಿಲ್ಲ



ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಕನ್ನಡ ಪರ ಸಂಘಟನೆಗಳು ಮತ್ತು ರೈತ ಸಂಘಟನೆಗಳು ಮಂಗಳವಾರ ಕರೆ ನೀಡಿರುವ ‘ಬೆಂಗಳೂರು ಬಂದ್’ಗೆ ಸಕಲ ಸಿದ್ಧತೆ ನಡೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 6 ರಿಂದ ಸಂಜೆ 6 ವರೆಗೂ ಬಂದ್ ಕರೆ ಕೊಟ್ಟಿದ್ದಾರೆ. ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಫ್ರೀಡಂ ಪಾರ್ಕ್‌ವರೆಗೂ ರ್‍ಯಾಲಿ ಮಾಡಲು ಅರ್ಜಿ ನೀಡಿದ್ದಾರೆ. ಆದರೆ ನಗರದಲ್ಲಿ ಬಂದ್ ಅಥವಾ ರ್‍ಯಾಲಿಗೆ ಅವಕಾಶ ಇಲ್ಲ. ನ್ಯಾಯಾಲಯದ ಆದೇಶವೂ ಇದೆ ಎಂದರು. ▶ 10ನೇ ಪುಟಕ್ಕೆ

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ

ಮೈಸೂರಲ್ಲಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ



ಕಾಡಾ ಕಚೇರಿ ಬಳಿ ಕನ್ನಡ ಚಳವಳಿಗಾರರ ಪ್ರತಿಭಟನೆ



ರೈತರಿಂದ ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಧರಣಿ



ಕಾವೇರಿ ಕ್ರಿಯಾ ಸಮಿತಿಯಿಂದ ಕೆಆರ್ ಸರ್ಕಲ್‌ನಲ್ಲಿ ಹೋರಾಟ

ಮೈಸೂರು, ಸೆ. 25(ಆರ್‌ಕೆ)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಮೈಸೂರಿನಲ್ಲಿ ರೈತರು, ಕನ್ನಡ ಪರ ಸಂಘಟನೆಗಳು, ಕಾವೇರಿ ಕ್ರಿಯಾ ಸಮಿತಿ ಸೇರಿದಂತೆ ಹಲವು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದವು.

ತಮಿಳುನಾಡಿಗೆ ನಿತ್ಯ 5,000 ಕ್ಯುಸೆಕ್ ನೀರು ಹರಿಸಬೇಕೆಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಆದೇಶಿಸಿರುವುದು ಅವೈಜ್ಞಾನಿಕ ನಿರ್ಧಾರ. ಇತ್ತ ಮಧ್ಯ ಪ್ರವೇಶಿಸಿ ವಿವಾದ ಬಗೆಹರಿಸಲು ಸುಪ್ರೀಂಕೋರ್ಟ್ ನಿರಾಕರಿಸಿರುವುದು ಆಘಾತಕಾರಿ ವಿಷಯ ಎಂದು ಆಕ್ರೋಶ ವ್ಯಕ್ತಪಡಿಸಿರುವ ಪ್ರತಿಭಟನಾಕಾರರು, ತಕ್ಷಣವೇ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿದ್ದಾರೆ.

ಮೈಸೂರು ಕನ್ನಡ ಚಳವಳಿಗಾರರ ಸಂಘ: ಖ್ಯಾತ ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ನೇತೃತ್ವದಲ್ಲಿ ಮೈಸೂರು ಕನ್ನಡ ಚಳವಳಿಗಾರರ ಸಂಘದ ಸದಸ್ಯರು ಸಯ್ಯಾಜಿರಾವ್ ರಸ್ತೆಯ ಕಾಡಾ ಕಚೇರಿ ಬಳಿ ಕಾವೇರಿ ನೀರಿಗಾಗಿ ಎಳನೀರು ಚಿಪ್ಪುಗಳನ್ನು ಪ್ರದರ್ಶಿಸಿ, ಪ್ರತಿಭಟನೆ ನಡೆಸಿದರು. ಮಳೆ ಇಲ್ಲದೇ ಬರ ಬಂದು ಇಡೀ ರಾಜ್ಯದ ಜನರು ಬಳಲುತ್ತಿರುವಾಗ ಇಂತಹ ಸಂಕಷ್ಟ ಪರಿಸ್ಥಿತಿಯಲ್ಲೂ ತಮಿಳುನಾಡಿಗೆ ನೀರು ಬಿಡುತ್ತಿರುವ ಸರ್ಕಾರ ರೈತರು, ಜನರ ಬವಣೆಯನ್ನು ಕಡೆಗಣಿಸಿದೆ ಎಂದು ದೂರಿದರು. ಕೇಂದ್ರದ ಮೇಲೆ ಒತ್ತಡ ತಂದು ಸಂಕಷ್ಟ ಸೂತ್ರದಡಿ ನೀರಿನ ವಿವಾದವನ್ನು ಇತ್ಯರ್ಥಪಡಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಎಂ. ಶಿವಶಂಕರ, ಕನ್ನಡ ಪರ ಹೋರಾಟಗಾರರಾದ ಪ್ರೊ.ನೀ.ಗಿರಿಗೌಡ, ಡಾ.ಲತಾ ರಾಜಶೇಖರ್, ಕೆ.ಎಸ್. ನಾಗರಾಜು, ಸಿ.ಜಿ. ಗಂಗಾಧರ, ಪ್ರೊ. ಕೆ.ಎಸ್.ಭಗವಾನ್, ರಮೇಶ್, ದೂರ ಸುರೇಶ್, ಸೋಗಳ್ಳಿ ತುಂಗಾ, ವೀರನಹಳ್ಳಿ ಕುಮಾರ, ಬಸವರಾಜು, ಕೆಂಪೇಗೌಡ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯ ರೈತ ಸಂಘ: ರೈತ ಮುಖಂಡ ಹೊಸಕೋಟೆ ಬಸವರಾಜು, ಪ್ರಸನ್ನಕುಮಾರ್ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಅದೇ ವೇಳೆ ಜನತಾ ದರ್ಶನ ನಡೆಸಲು ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರನ್ನು ತಡೆದು ಘೇರಾವ್ ಮಾಡಿದ ರೈತರು, ರಾಜ್ಯದ ಜಲಾಶಯಗಳು ಖಾಲಿಯಾಗಿರುವಾಗ ವಸ್ತುಸ್ಥಿತಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸರ್ವೋಚ್ಛ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು, ತಮಿಳುನಾಡಿಗೆ ಹರಿಸುತ್ತಿರುವ ನೀರು ಸ್ಥಗಿತಗೊಳಿಸುವಂತೆ ಒತ್ತಾಯಿಸಿದರು.

ರಾಜ್ಯದ ರೈತರ ಹಿತ ಬಲಿಕೊಟ್ಟು ತಮಿಳುನಾಡಿಗೆ ನೀರು ಬಿಡುತ್ತಿರುವುದು ಘೋರ ಅನ್ಯಾಯವಾಗಿದ್ದು, ಸಂಕಷ್ಟ ಸೂತ್ರದಡಿ ನಮ್ಮ ಜನರ ಹಿತ ▶ 10ನೇ ಪುಟಕ್ಕೆ

ಸಮಾಜಕ್ಕೆ ಸಲ್ಲಿಸುವ ನಿಷ್ಕಾಮ ಕರ್ಮ ದೇವರ ಸೇವೆಗೆ ಸಮ: ಪೇಜಾವರ ಶ್ರೀ

ಮಾತಾ ಅಮೃತಾನಂದಮಯಿ ಜನ್ಮದಿನದ ಪ್ರಯುಕ್ತ ಉಚಿತ ಆರೋಗ್ಯ ಶಿಬಿರ



ಮೈಸೂರು,ಸೆ.25–ಮನುಷ್ಯನಾದವನು ಸೇವೆಯ ರೂಪದಲ್ಲಿ ತನ್ನ ಕರ್ತವ್ಯಗಳನ್ನು ಮಾಡುತ್ತ ಹೋಗಬೇಕು. ಕಷ್ಟದಲ್ಲಿದ್ದವರಿಗೆ, ದುರ್ಬಲರಿಗೆ ಮಾಡುವ ಸೇವೆಯು ನೇರವಾಗಿ ಭಗವಂತನನ್ನು ತಲುಪುತ್ತದೆ. ಸಮಾಜಕ್ಕೆ ಸಲ್ಲಿಸುವ ನಿಷ್ಕಾಮ ಕರ್ಮ, ಸೇವೆ ದೇವರಿಗೆ ಸೇವೆ ಸಲ್ಲಿಸುವುದಕ್ಕೆ ಸಮ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಸದ್ಗುರು ಮಾತಾ ಅಮೃತಾನಂದ ಮಯಿಯವರ 70ನೇ ಜನ್ಮದಿನದ ಪ್ರಯುಕ್ತ ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್, ಅಮೃತಕೃಪ ಆಸ್ಪತ್ರೆ ಹಾಗೂ ಮಾತಾ ಅಮೃತಾನಂದಮಯಿ ಮಠ ಮೈಸೂರು ಸಹಯೋಗದಲ್ಲಿ ನಡೆಯುತ್ತಿರುವ 'ಸೇವನವಾರಂ' ಸಪ್ತಾಹದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನ ಎಲ್ಲ ಪ್ರಯತ್ನಗಳ ಜೊತೆಗೆ ಭಗವಂತನ ಕೃಪೆ ಇದ್ದಾಗ ಮಾತ್ರ ಕೈಗೊಂಡ ಕಾರ್ಯದಲ್ಲಿ ಯಶಸ್ಸು ಸಾಧಿಸಲು ಸಾಧ್ಯ. 'ಸೇವೆಯ ರೂಪದಲ್ಲಿ ಕರ್ತವ್ಯವನ್ನು ಮಾಡುತ್ತ ಹೋಗು. ಅದರ ಫಲವನ್ನು ಕೊಡುವುದು ನನಗೆ ಬಿಟ್ಟದ್ದು ಎಂದು ಭಗವಂತ ಹೇಳುತ್ತಾನೆ. ಹೀಗಾಗಿ ನಾವು ನಮ್ಮ ಕರ್ಮಗಳ ಕಡೆಗೆ ಗಮನ ಹರಿಸಬೇಕೇ ಹೊರತು ಅದಕ್ಕೆ ಸಿಗುವ ಫಲಕ್ಕಾಗಿ ಅಲ್ಲ ಎಂದು ಸ್ವಾಮೀಜಿ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅಮೃತಕೃಪ ಆಸ್ಪತ್ರೆಯ ಡಾ.ವಿಕಾಸ್ ಮೋದಿ, ಆಸ್ಪತ್ರೆ ವತಿಯಿಂದ ನಡೆಯುತ್ತಿರುವ ವಿವಿಧ ಉಚಿತ ವೈದ್ಯಕೀಯ ಸೇವೆಗಳ ವರದಿ ನೀಡಿದರು.

ಕಾರ್ಯಕ್ರಮದಲ್ಲಿ ವಾರ್ಡ್ ನಂ. 44ರ ಕಾರ್ಪೊರೇಟರ್ ಸವಿತಾ ಸುರೇಶ್, ಸ್ವರೂಪಾನಂದ ಯತಿಗಳು, ಅಮೃತಾನಂದಮಯಿ ಮಠದ ಮುಖ್ಯಸ್ಥ ಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ, ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ಸಂಚಾಲಕ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ಅಸೋಸಿಯೇಟ್ ಡೀನ್ ಪ್ರೊ.ಶೇಖರ್ ಬಾಬು, ಪ್ರಾಂಶುಪಾಲ ಪ್ರೊ.ಜಿ. ರವೀಂದ್ರನಾಥ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಮೃತಕೃಪಾ ಆಸ್ಪತ್ರೆ ನಡೆಸುತ್ತಿರುವ ಈ ಉಚಿತ ವೈದ್ಯಕೀಯ ಶಿಬಿರದಲ್ಲಿ 150ಕ್ಕೂ ಹೆಚ್ಚು ಸಾರ್ವಜನಿಕರು ಭಾಗಿಯಾಗಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.

ಈ ಹಿಂದೆಲ್ಲಾ ಫಲ ನೀಡದಿದ್ದರೂ ಮತ್ತೆ ಮೋಡ ಬಿತ್ತನೆಗೆ ರಾಜ್ಯ ಸರ್ಕಾರ ನಿರ್ಧಾರ

● ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ● ಜಲಸಂಪನ್ಮೂಲ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ





ಬೆಂಗಳೂರು,ಸೆ.25(ಕೆಎಂಶಿ)–ಮುಂಗಾರು–ಹಿಂಗಾರು ಮಳೆ ವೈಫಲ್ಯ ಕಂಡಾಗ ಹಿಂದಿನ ಸರ್ಕಾರಗಳು ಮೋಡ ಬಿತ್ತನೆ ಮೊರೆ ಹೋಗಿ ಯಶಸ್ವಿಯಾಗದಿದ್ದರೂ ರಾಜ್ಯ ಸರ್ಕಾರ ಮತ್ತೆ ಮೋಡ ಬಿತ್ತನೆಗೆ ಮುಂದಾಗಿದೆ.

ಮೋಡಬಿತ್ತನೆ ಮಾಡುವ ಸಂಬಂಧ ಹೇಳಿಕೆ ನೀಡಿರುವ ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎರಡು–ಮೂರು ದಿನಗಳಲ್ಲಿ ಸರ್ಕಾರ ಈ ಬಗ್ಗೆ ನಿರ್ಧಾರ ಮಾಡಲಿದೆ ಎಂದರು.

ಎರಡು ದಿನಗಳಿಂದ ಬೆಂಗಳೂರು ನಗರ ಹಾಗೂ ಸುತ್ತಮುತ್ತ ಸುರಿದ ಮಳೆಯಿಂದ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ. ಮೋಡ ಬಿತ್ತನೆಯಿಂದ ಪರಿಸ್ಥಿತಿ ಸುಧಾರಿಸಬಹುದು ಎನ್ನುವ ನಂಬಿಕೆ ಇದೆ. ಸಚಿವ ಸಂಪುಟ ಸಭೆಯಲ್ಲಿ ಮೋಡ ಬಿತ್ತನೆ ಹಾಗೂ ಕಾವೇರಿ ನೀರು ಸಂಕಷ್ಟದ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು.

ವಿರೋಧ ಪಕ್ಷಗಳ ಮೈತ್ರಿಯಿಂದ ಅಸಮಾಧಾನಿತರು ಕಾಂಗ್ರೆಸ್ ಸೇರುವ ಬಗ್ಗೆ ಕೇಳಿದಾಗ, ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರವಾಗಿ ಎರಡೂ ಪಕ್ಷಗಳ ಅಸಮಾಧಾನಿತರು ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಮುಖ್ಯಮಂತ್ರಿಗಳು ಹಾಗೂ ಸಂಪುಟ ಸಹೋದ್ಯೋಗಿಗಳ ಜೊತೆ ಈ ವಿಚಾರ ಚರ್ಚೆ ನಡೆಸಲಾಗುತ್ತದೆ. ಕಾರ್ಯಕರ್ತರ ಮಟ್ಟದಲ್ಲಿ ಪಕ್ಷ ಸೇರ್ಪಡೆ ಮಾಡಿಕೊಳ್ಳಿ ಎಂದು ಸೂಚನೆ ನೀಡಿದ್ದೇವೆ. ಪಕ್ಷಾಂತರ ಕಾಯ್ದೆ ಬಗ್ಗೆಯೂ ನಮಗೆ ಎಚ್ಚರಿಕೆ ಇದೆ.

ಸಚಿವರುಗಳನ್ನು ಲೋಕಸಭೆ ಕ್ಷೇತ್ರಗಳ ವೀಕ್ಷಕರನ್ನಾಗಿ ನೇಮಿಸಿರುವ ಬಗ್ಗೆ ಕೇಳಿದಾಗ, 28 ಲೋಕಸಭಾ ಕ್ಷೇತ್ರಗಳಿಗೆ ಸಚಿವರನ್ನು ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ. ಇಬ್ಬರು –ಮೂವರು ಸಚಿವರನ್ನು ನೇಮಕ ಮಾಡಲು ಆಗಿಲ್ಲ. ಎಂ.ಬಿ. ಪಾಟೀಲರು ವಿದೇಶದಲ್ಲಿ, ಕೆ.ಜೆ.ಜಾರ್ಜ್ ಅವರು ಪಕ್ಷದ ಕೇಂದ್ರ ಸಮಿತಿಯಲ್ಲಿ ಇರುವ ಕಾರಣ ಅವರನ್ನು ನೇಮಕ ಮಾಡಲು ಆಗಲಿಲ್ಲ.

ಪ್ರತಿಭಟನೆಗೆ ಸಹಕಾರ : ಎಲ್ಲಾ ಕ್ಷೇತ್ರಗಳ ವರದಿ 10 ದಿನಗಳಲ್ಲಿ ಕೈ ಸೇರಲಿದ್ದು, ಎರಡು ಅಥವಾ ಮೂರು ಹೆಸರುಗಳನ್ನು ಸೂಚಿಸಬಹುದೆಂದು ನಿರೀಕ್ಷೆಯಿದೆ. ಜನವರಿ ಮುಂಚಿತವಾಗಿ ಮೊದಲ ಪಟ್ಟಿ ಬಿಡುಗಡೆ ಮಾಡುತ್ತೇವೆ ಎಂದು ತಿಳಿಸಿದರು.

ಪ್ರತಿಪಕ್ಷಗಳು ಹಮ್ಮಿಕೊಂಡಿರುವ ಕಾವೇರಿ ನೀರಿನ ವಿಚಾರವಾಗಿ ಬಂದ್ ಹಾಗೂ ಪ್ರತಿಭಟನೆ ಕುರಿತಾಗಿ ರಾಜ್ಯದ ಹಿತರಕ್ಷಣೆಗೆ ಪ್ರತಿಭಟನೆ ಮಾಡಲು ನಾವು ಸಹಕಾರ ನೀಡುತ್ತೇವೆ. ನೆಲ, ಜಲ, ಭಾಷೆಯನ್ನು ಎಲ್ಲರೂ ಉಳಿಸಿಕೊಳ್ಳಬೇಕು. ಯಾರ ಹೋರಾಟಗಳಿಗೂ ಸರ್ಕಾರ ಅಡ್ಡಿಪಡಿಸುವುದಿಲ್ಲ. ಆದರೆ ಇದರಿಂದ ಜನರಿಗೆ ತೊಂದರೆ ಆಗಬಾರದು, ಶಾಂತಿ ಕಾಪಾಡಬೇಕು, ಹೋರಾಟಗಳಿಗೆ ಸರ್ಕಾರದ ಸಹಕಾರ ಇದ್ದೇ ಇರುತ್ತದೆ.

ಪ್ರತಿಭಟಿಸುವುದು ಪ್ರಜಾಪ್ರಭುತ್ವದ ಹಕ್ಕು, ಯಾವ ಪಕ್ಷದವರಿಗೂ ತೊಂದರೆ, ಅಡಚಣೆ ಮಾಡಲು ನಾವು ಮುಂದಾಗುವುದಿಲ್ಲ. ನಾವು ನಮ್ಮ ಹಕ್ಕನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದೇವೆ. ನಮ್ಮ ಪಕ್ಷದವರು ಸಹ ಏನು ಮಾಡುವುದು ಎಂದು ಕೇಳಿದರು, ನಮ್ಮ ಹಕ್ಕನ್ನು ಉಳಿಸಿಕೊಳ್ಳಲು ಹೋರಾಟ ಮಾಡಿ ಎಂದು ಹೇಳಿದ್ದೇವೆ.

ಸುಪ್ರೀಂಕೋರ್ಟ್, ಹೈಕೋರ್ಟ್ ತೀರ್ಪು ಬಾಕಿ ಇದೆ, ಮಾಧ್ಯಮಗಳಲ್ಲಿ ಹೆಸರು ಬರುತ್ತದೆ ಎಂದು ಹೋರಾಟಕ್ಕೆ ಕರೆ ನೀಡಿದರೆ ಲಾಭ ವೇನು? ನ್ಯಾಯಾಲಯದಲ್ಲಿ ನಮ್ಮ ಪರವಾಗಿ ತೀರ್ಪು ಬಂದರೆ ಏನು ಮಾಡುತ್ತಾರೆ.

ಹೋರಾಟಗಳಿಂದ ಕಾನೂನಾತ್ಮಕ ತೊಂದರೆ ಆಗುವುದಿಲ್ಲವೇ ಎನ್ನುವ ಪ್ರಶ್ನೆಗೆ ಮಂತ್ರಿಯಾಗಿ ಇದಕ್ಕೆ ಉತ್ತರ ನೀಡಲು ಆಗುವುದಿಲ್ಲ. ನ್ಯಾಯಾಲಯಕ್ಕೆ ಹಾಗೂ ಜನ ಇಬ್ಬರಿಗೂ ಗೌರವ ಕೊಡಬೇಕು. ಜನ ಸಹಕಾರ ಕೊಡದೆ ಇದ್ದರೆ ಬಂದ್ ಎನ್ನುವ ಹೋರಾಟಕ್ಕೆ ಮರ್ಯಾದೆ ಇರುವುದಿಲ್ಲ. ಈಗ ನಾವು ಸಂಕಷ್ಟ ಪರಿಸ್ಥಿತಿಯಲ್ಲಿ ದ್ದೇವೆ, ಹೇಗೆ ಉತ್ತರಿಸಲಿ ಎಂದರು. ಹೆಚ್ಚುವರಿ ಡಿಸಿಎಂ ವಿಚಾರ ಬಹಿರಂಗವಾಗಿ ಚರ್ಚೆ ಮಾಡುವಂತಿಲ್ಲ ಎಂದು ಹೈಕಮಾಂಡಿನಿಂದ ಪತ್ರ ಬಂದಿದೆ ಎನ್ನುವ ಪ್ರಶ್ನೆಗೆ ಇದಕ್ಕೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಇಂದು ಮೈಸೂರಿಗೆ ಮುಖ್ಯಮಂತ್ರಿ



ಮೈಸೂರು, ಸೆ.25(ಬಿಎಲ್‌ಯು)– ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಮೈಸೂರಿಗೆ ಆಗಮಿಸಲಿದ್ದಾರೆ.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸುವ ಸಿದ್ದರಾಮಯ್ಯ, ಬೆಳಗ್ಗೆ 11.30 ಗಂಟೆಗೆ ಮೈಸೂರು ತಾಲೂಕು ಉತ್ತನಹಳ್ಳಿಯ ಶ್ರೀ ಮಾರಮ್ಮ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆಯಲಿದ್ದಾರೆ.

ತರುವಾಯ ಉತ್ತನಹಳ್ಳಿಯಲ್ಲಿ ನಿರ್ಮಾಣ ಮಾಡಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಉದ್ಘಾಟನೆ ಮಾಡುವ ಸಿದ್ದರಾಮಯ್ಯ, ಕನಕದಾಸರ ಪುತ್ಥಳಿ ಹಾಗೂ ಸಂಗೊಳ್ಳಿ ರಾಯಣ್ಣ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ನಂತರ ಅಲ್ಲೇ ಪಶು ಸಖಿಯರಿಗೆ A-HELP ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ಉದ್ಘಾಟಿಸುವರು. ಈ ವೇಳೆ NADCP ಯೋಜನೆಯಡಿ 4ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಪಶು ಚಿಕಿತ್ಸಾಲಯದ ಪ್ರಾರಂಭೋತ್ಸವ ಸಮಾರಂಭ ಉದ್ಘಾಟಿಸುವರು.

ನಾಳೆ ಸಂಜೆ 4 ಗಂಟೆಗೆ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ 37ನೇ ತಂಡದ ಪ್ರೊಬೆಷನರಿ ಪೊಲೀಸ್ ಉಪಾಧೀಕ್ಷಕರು(ಸಿವಿಲ್) ಮತ್ತು ಅಬಕಾರಿ ಉಪಾಧೀಕ್ಷಕರು ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ, ಗೌರವ ವಂದನೆ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ತರುವಾಯ ರಾತ್ರಿ ಶ್ರೀ ಮಲೈ ಮಹದೇಶ್ವರ ಬೆಟ್ಟಕ್ಕೆ ತೆರಳಿ ವಾಸ್ತವ್ಯ ಹೂಡುವರು.

ಪಿಎಚ್.ಡಿ ಪದವಿ



ಮೈಸೂರು, ಸೆ. 25– ಡಾ. ಎಂ.ಬಿ. ಸುರೇಶ ಅವರ ಮಾರ್ಗದರ್ಶನದಲ್ಲಿ ಎಸ್.ಸಿದ್ದೇಗೌಡ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಅರ್ಜುನಪುರಿ ಅಪ್ಪಾಜಿಗೌಡ ಅವರ ಸಮಗ್ರ ಸಾಹಿತ್ಯ' ಕುರಿತ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವೃದ್ಧಾಶ್ರಮಗಳ ಹೆಚ್ಚಳ ದುರದೃಷ್ಟಕರ

ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ವಿಷಾದ

ದೇವಯ್ಯನಹುಂಡಿ ಮುಖ್ಯರಸ್ತೆಯಲ್ಲಿ ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ ಉದ್ಘಾಟನೆ



ಮೈಸೂರು,ಸೆ.25– ದೇವಾಲಯಗಳ ಜೊತೆಗೆ ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಮನುಷ್ಯ ನೆಮ್ಮದಿಗಾಗಿ ಹುಡುಕಾಟ ನಡೆಸುತ್ತಿದ್ದಾನೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ವಿಷಾದಿಸಿದರು.

ನಗರದ ಶ್ರೀರಾಂಪುರ ಎರಡನೇ ಹಂತದ ದೇವಯ್ಯನಹುಂಡಿ ಮುಖ್ಯ ರಸ್ತೆಯಲ್ಲಿ ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಈ ಪರಿಸ್ಥಿತಿ ಇರಲಿಲ್ಲ. ಈಗ ಈ ರೀತಿಯ ವೈರುಧ್ಯಗಳ ಬಗ್ಗೆ ಪ್ರತಿಯೊಬ್ಬರೂ ಆಲೋಚಿಸಬೇಕು ಎಂದು ಕರೆ ನೀಡಿದರು.

ಹಿರಿಯರನ್ನು ಗೌರವದಿಂದ ನೋಡಿಕೊಳ್ಳಬೇಕು. ಅವರಲ್ಲಿ ಅನಾಥಪ್ರಜ್ಞೆ ಕಾಡಬಾರದು. ಹಿರಿಯರನ್ನು ಚೆನ್ನಾಗಿ ನೋಡಿಕೊಂಡಾಗ ಮಾತ್ರ ಆ ಸಮಾಜ ಉತ್ತಮವಾಗಿರುತ್ತದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಯ್ಯಂಗಾರ್, ಸಮಾಜ ಸೇವಕ ಕೆ.ರಘುರಾಂ ಮಾತನಾಡಿ, ಈ ಕೇಂದ್ರಕ್ಕೆ ಬೇಕಾದ ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದರು.

ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರದ ಸಂಸ್ಥಾಪಕ ಬಿ.ಆರ್.ನಟರಾಜ ಜೋಯಿಸ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಪಾಲಿಕೆ ಸದಸ್ಯೆ ಗೀತಾಶ್ರೀ ಯೋಗಾನಂದ, ಮೈಲ್ಯಾಕ್ ಮಾಜಿ ಅಧ್ಯಕ್ಷ ವೈ.ವಿ.ರವಿಶಂಕರ್, ಬ್ರಾಹ್ಮಣ ಧರ್ಮ ಸಹಾಯ ಸಭಾಧ್ಯಕ್ಷ ಎನ್.ಶ್ರೀನಿವಾಸ್, ಶಿವ ದೇವಸ್ಥಾನದ ಅಧ್ಯಕ್ಷ ಎಚ್.ಜಿ.ಪರಶಿವ ಮೂರ್ತಿ, ನಗರ ಬಿಜೆಪಿ ವಕ್ತಾರ ಎಂ.ಎ. ಮೋಹನ್, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಎಸ್.ಎಂ.ಕೃಷ್ಣ ಅಭಿಮಾನಿಗಳ ಸಂಘದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಎಂ.ಎಸ್. ಅನಂತ ಪ್ರಸಾದ್, ವೈದೇಹಿ ಸೇರಿದಂತೆ ಹಲವಾರು ಮಂದಿ ಪಾಲ್ಗೊಂಡಿದ್ದರು.

ದಸರಾ ಫಲಪುಷ್ಪ ಪ್ರದರ್ಶನ: ಉದ್ಯಮಿಗಳಿಗೆ ಆಹ್ವಾನ

ಮೈಸೂರು.ಸೆ.25– 2023–24ನೇ ಸಾಲಿನ ದಸರಾ ಫಲಪುಷ್ಪ ಪ್ರದರ್ಶನವನ್ನು ತೋಟಗಾರಿಕೆ ಇಲಾಖೆ ಮತ್ತು ಜಿಲ್ಲಾ ತೋಟಗಾರಿಕೆ ಸಂಘ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಅ.15ರಿಂದ 24ರವರೆಗೆ ನಿಶಾದ್ ಬಾಗ್ (ಕುಪ್ಪಣ್ಣ ಪಾರ್ಕ್) ಆವರಣದಲ್ಲಿ ನಡೆಸಲು ತೀರ್ಮಾನಿಸಿದ್ದು, ಜಿಲ್ಲೆಯಲ್ಲಿರುವ ವಿವಿಧ ಬೃಹತ್ ಕೈಗಾರಿಕಾ ಉದ್ಯಮದವರು ಫಲಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಆಸಕ್ತರು ಅ.5ರೊಳಗೆ ಮೈಸೂರಿನ ಕರ್ಜನ್ ಪಾರ್ಕ್‌ನಲ್ಲಿರುವ ಜಿಲ್ಲಾ ತೋಟಗಾರಿಕೆ ಸಂಘದ ಕಚೇರಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ಜಿಲ್ಲಾ ತೋಟಗಾರಿಕೆ ಸಂಘದ ಪದನಿಮಿತ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಅಮ್ಮ ಕೊಡವ ಸಮಾಜದ 2022–2023ನೇ ಸಾಲಿನ ವಾರ್ಷಿಕ ಮಹಾಸಭೆ ಭಾನುವಾರ ನಡೆಯಿತು. ಅಧ್ಯಕ್ಷ ಸಿ.ಬಿ.ಗಿರೀಶ್, ಉಪಾಧ್ಯಕ್ಷ ಹೆಚ್.ಎಂ.ಸುಬ್ಬಮ್ಮಯ್ಯ, ಕಾರ್ಯದರ್ಶಿ ಎನ್.ಯು.ಸಂತೋಷ್ ಹಾಗೂ ಖಜಾಂಚಿ ಸಿ.ಕೆ.ಉಮೇಶ್, ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಮಾಜದ ಬಾಂಧವರು ಭಾಗಿಯಾಗಿದ್ದರು.

ಯುವಶಕ್ತಿಯೇ ರಾಷ್ಟ್ರಶಕ್ತಿಯಾಗಿಸಿದ ರಾಸೇಯೋ



ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾಸೇಯೋ ದಿನಾಚರಣೆಯನ್ನು ಗಿಡಕ್ಕೆ ನೀರುಣಿಸುವ ಮೂಲಕ ಪ್ರೊ.ಮೋಹನ್ ಕುಮಾರ್ ಉದ್ಘಾಟಿಸಿದರು.

ಮೈಸೂರು,ಸೆ.25–ಸಂಘಟಿತ ಸಮಾಜದಲ್ಲಿ ಮನುಷ್ಯ ಸ್ವಾರ್ಥಪರ ನಿಲುವುಗಳನ್ನು ತಳೆಯದೆ ನಿಸ್ವಾರ್ಥ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಬಹುಮುಖ್ಯವಾಗಿದ್ದು, ಸ್ವಾಮಿ ವಿವೇಕಾನಂದರ ಚಿಂತನೆಗಳು ದೇಶದ ಯುವ ವರ್ಗಕ್ಕೆ ಪೂರಕವಾಗಿದೆ. ಈ ನಿಟ್ಟಿನಲ್ಲಿ ಯುವಶಕ್ತಿಯೇ ರಾಷ್ಟ್ರಶಕ್ತಿಯಾಗಿಸಿದ ರಾಸೇಯೋ ಅನ್ನು ಯಾರೂ ಮರೆಯುವಂತಿಲ್ಲ ಎಂದು ಪ್ರೊ.ಎನ್. ಮೋಹನ್‌ಕುಮಾರ್ ಅಭಿಪ್ರಾಯಪಟ್ಟರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾ.ಸೇ.ಯೋ ದಿನಾಚರಣೆದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಗಿಡಕ್ಕೆ ನೀರೆರೆಯುವುದರ ಮೂಲಕ ಉದ್ಘಾಟಿಸಿದ ಕಾಲೇಜಿನ ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಪ್ರೊ.ಎನ್. ಮೋಹನ್‌ಕುಮಾರ್ ತಮ್ಮ ಭಾಷಣದಲ್ಲಿ ರಾಸೇಯೋ ಧ್ಯೇಯೋದ್ದೇಶಗಳನ್ನು ತಿಳಿಸಿಕೊಟ್ಟರಲ್ಲದೆ, ಮಹಾತ್ಮಗಾಂಧಿಯವರ ತಾತ್ವಿಕ ನಿಲುವುಗಳಿಂದ ರಾಷ್ಟ್ರದ ಅಭಿವೃದ್ಧಿ ಹೊಂದುವುದಲ್ಲದೆ ಮನುಷ್ಯ ಸಮಾಜದ ಮೌಲ್ಯಗಳನ್ನು ಹಲವು ನಿದರ್ಶನಗಳ ಮೂಲಕ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟರು.


ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಮರೀಗೌಡ ಅಧ್ಯಕ್ಷತೆ ವಹಿಸಿದ್ದರು. ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಪ್ರೊ ಎಸ್.ಸಿದ್ದರಾಜು ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ವೇದಿಕೆಯಲ್ಲಿ ಪ್ರೊ ಆರ್.ಸಿದ್ದರಾಜು, ಡಾ.ಧನಂಜಯ ಪಾಲಹಳ್ಳಿ ಉಪಸ್ಥಿತರಿದ್ದರು ಪ್ರೊ.ಬಿ.ಕೆ.ವತ್ಸಲಾ ವಂದಿಸಿದರು. ಪ್ರೊಎಸ್.ಲಾವಣ್ಯ ನಿರೂಪಿಸಿದರು.

ನೀರಿನ ಮಟ್ಟ

	ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ	124.80 ಅಡಿ	2,284.00 ಅಡಿ	2,859.00 ಅಡಿ
ಇಂದಿನ ಮಟ್ಟ	96.70 ಅಡಿ	2,274.24 ಅಡಿ	2,855.42 ಅಡಿ
ಹಿಂದಿನ ವರ್ಷದ ಮಟ್ಟ	124.18 ಅಡಿ	2,282.91 ಅಡಿ	2,857.50 ಅಡಿ
ನಿನ್ನೆಯ ಮಟ್ಟ	96.80 ಅಡಿ	2,274.70 ಅಡಿ	2,855.94 ಅಡಿ
ಇಂದಿನ ಒಳಹರಿವು	5,993 ಕ್ಯುಸೆಕ್	2,126 ಕ್ಯುಸೆಕ್	796 ಕ್ಯುಸೆಕ್
ಇಂದಿನ ಹೊರಹರಿವು	6,716 ಕ್ಯುಸೆಕ್	4,890 ಕ್ಯುಸೆಕ್	2,800 ಕ್ಯುಸೆಕ್

ಹೆಂಡತಿಯರಿಗೆ ನೀಡುವ ದುಡ್ಡು ಗಂಡಂದಿರಿಂದ ವಸೂಲಿ ಮಾಡುವ ಮನಿ ರಿಟರ್ನ್ ಪಾಲಿಸಿ

● ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ವ್ಯಂಗ್ಯೋಕ್ತಿ
● ಗೃಹಲಕ್ಷ್ಮಿ ಅಡಿ ಯಜಮಾನಿಗೆ 2000 ರೂ. ನೀಡಿ ಅತ್ತ ಮದ್ಯದ ಮೂಲಕ ಗಂಡಂದಿರಿಂದ ವಸೂಲಿ!




ಬೆಂಗಳೂರು,ಸೆ.25(ಕೆಎಂಶಿ)–ಬರಗಾಲದಲ್ಲಿ ನೀರು ಕೊಡದಿರುವ ಸರ್ಕಾರ ಸಾರಾಯಿ ಕುಡಿಸಲು ಮುಂದಾಗಿರುವುದು ದೊಡ್ಡ ದುರಂತ. ಇದು ಸಾರಾಯಿ ಗ್ಯಾರಂಟಿ ಸರ್ಕಾರ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ರಾಜ್ಯ ಸರ್ಕಾರ ಪಂಚಾಯತಿ ಮಟ್ಟದಲ್ಲಿ ಮದ್ಯದಂಗಡಿ ತೆರೆಯಲು ಮುಂದಾಗಿರುವುದು ಸರ್ಕಾರದ ನೈತಿಕ ದಿವಾಳಿತನವನ್ನು ತೋರಿಸುತ್ತದೆ. ಒಂದೆಡೆ ಗ್ಯಾರಂಟಿ ಹೆಸರಲ್ಲಿ ಮಹಿಳೆಯರಿಗೆ 2000 ರೂ. ನೀಡುವುದಾಗಿ ಹೇಳುವ ಸರ್ಕಾರ ಅದೇ ಹಣವನ್ನು ಅವರ ಗಂಡಂದಿರಿಂದ ವಸೂಲಿ ಮಾಡಲು ಮದ್ಯ ಮಾರಾಟದ ಮಾರ್ಗ ಹುಡುಕಿಕೊಂಡಂತಿದೆ. ಹೆಂಡತಿಯರಿಗೆ ನೀಡುವ ದುಡ್ಡು ಗಂಡಂದಿರಿಂದ ಪಡೆಯುವ ಮನಿ ರಿಟರ್ನ್ ಪಾಲಿಸಿ ಹಾಕಿಕೊಂಡ ಹಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಲು ಸರ್ಕಾರಿ ಮದ್ಯದಂಗಡಿ ತೆರೆಯುತ್ತಿರುವುದಾಗಿ ಅಬಕಾರಿ ಸಚಿವರು ಹೇಳಿರುವುದು ಹಾಸ್ಯಾಸ್ಪದವಾಗಿದೆ. ಅಕ್ರಮ ತಡೆಯಲಾಗದಿದ್ದರೆ ನಿಮ್ಮ ಇಲಾಖೆ ಮಾಡುವುದಾದರೂ ಏನು ಎಂದು ಪ್ರಶ್ನಿಸಿದ್ದಾರೆ.

ಗ್ಯಾರಂಟಿ ಯೋಜನೆಯಲ್ಲಿ ಮನೆ ಯಜಮಾನಿ ಹುಡುಕುವ ಹೆಸರಲ್ಲಿ ಅತ್ತೆ ಸೊಸೆ ನಡುವೆ ಜಗಳ ಹಚ್ಚಿರುವ ಸರ್ಕಾರ, ಇನ್ನು ಸಾರಾಯಿ ಕುಡಿಯಲು ಹಣಕ್ಕಾಗಿ ಗಂಡ ಹೆಂಡಿರ ನಡುವೆ ಜಗಳ ಹಚ್ಚಲು ಮುಂದಾಗಿದೆ. ಸರ್ಕಾರ ಆದಾಯ ಗಳಿಸಲು ಮದ್ಯ ಮಾರಾಟದ ಮೊರೆ ಹೋದರೆ, ಗ್ಯಾರಂಟಿ ಪಡೆಯುವ ಮಹಿಳೆಯರೇ ಇವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಹೇಳಿದ್ದಾರೆ.


ನಿಧನ

ಧರಣಿರಾಜ್



ಹುಣಸೂರು,ಸೆ.25–ಹುಣಸೂರಿನ ಹಿರಿಯ ವಕೀಲರಾದ ಧರಣಿರಾಜ್(71) ಸೋಮವಾರ ಸಂಜೆ ಹುಣಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಸೆ.26) ಮಧ್ಯಾಹ್ನ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಂಕರಪ್ಪ



ಮೈಸೂರು ಸರಸ್ವತಿಪುರಂ ನಿವಾಸಿ ಹಾಗೂ ಶಿಕ್ಷಣ ಇಲಾಖೆ ನಿವೃತ್ತ ಅಧೀಕ್ಷಕ ಶಂಕರಪ್ಪ (74) ಅವರು ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಪಾರ ಬಂಧು ವರ್ಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಇವರ ಪುತ್ರಿ ಅಮೇರಿಕದಿಂದ ವಾಪಸ್ಸಾದ ನಂತರ ಮಂಗಳವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಕುವೆಂಪುನಗರ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ. (ಮಾಹಿತಿಗೆ ಮೊ. 98863 44619).

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.9.2023 ಮಂಗಳವಾರ, ಮಳೆ ನಕ್ಷತ್ರ: ಉತ್ತರಾ 14.09.2023 ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಕರ್ನಾಟಕ ರಾಜ್ಯ ಕಿವುಡರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ಜಿಲ್ಲಾ ಕಿವುಡರ ಸಂಘ :** ವಿಶ್ವ ಕಿವುಡರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಮೂರ್ತಿ, ವಿಶೇಷ ಆಹ್ವಾನಿತರು : ಶಾಸಕರಾದ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಗವರ್ನರ್ ಲಯನ್ ಕೃಷ್ಣೇಗೌಡ, ಕರ್ನಾಟಕ ಅಂಗವಿಕಲರ ಹಕ್ಕುಗಳ ಅಧಿನಿಯಮ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ :** ಪಶು ಸಖಿಯರಿಗೆ ತರಬೇತಿ, 4ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ, ಸರ್ಕಾರಿ ಉತ್ತನಹಳ್ಳಿ ಗ್ರಾಮದಲ್ಲಿ ನೂತನ ಪಶು ಚಿಕಿತ್ಸಾಲಯ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಉದ್ಘಾಟನೆ : ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ. ವೆಂಕಟೇಶ್, ಮುಖ್ಯ ಅತಿಥಿಗಳು : ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಶ್ರೀಮತಿ ಸುಮಲತಾ ಅಂಬರೀಶ್, ಸ್ಥಳ: ಸರ್ಕಾರಿ ಉತ್ತನಹಳ್ಳಿ ಗ್ರಾಮ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 108ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ನುಡಿ ನಮನ : ಸಾಹಿತಿ ಡಾ. ಕಿರಣ್ ಸಿಡ್ಲೇಹಳ್ಳಿ, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಹಳೆಯ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

■ **ರಾಮಕೃಷ್ಣ ವಿದ್ಯಾಕೇಂದ್ರ :** ಹಿಂದಿ ದಿನಾಚರಣೆ, ಅಧ್ಯಕ್ಷತೆ : ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಭಾಷಣಕಾರರು : ಪಯನೀರ್ ಹಿಂದಿ ವಿದ್ಯಾಲಯ ಪ್ರಾಂಶುಪಾಲ ಎಂ.ಎಸ್. ಲಕ್ಷ್ಮೀನಾರಾಯಣ, ಉಪಸ್ಥಿತರು : ಪ್ರೊ. ಜಿ. ಚಂದ್ರಶೇಖರ್, ಶ್ರೀಮತಿ ವೀಣಾ ಕೆ. ಹೆಗಡೆ, ಜಿ.ಎನ್. ವಿಶ್ವನಾಥ್, ಶ್ರೀಮತಿ ಮಹಾಲಕ್ಷ್ಮಿ, ಸ್ಥಳ: ಶಾರದಾ ಸಭಾಂಗಣ, ಮಧ್ಯಾಹ್ನ 3 ರಿಂದ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ವಿದ್ವಾನ್ ಶಿವಶಂಕರಸ್ವಾಮಿ ಮತ್ತು ತಂಡದವರಿಂದ ಲಯವಾದ್ಯ, ಸಂಜೆ 6.45ಕ್ಕೆ ಪಂಡಿತ್ ವೆಂಕಟೇಶ್ ಕುಮಾರ್ ಅವರಿಂದ ಹಿಂದೂಸ್ಥಾನಿ ಗಾಯನ, ಪಂಡಿತ್ ರವೀಂದ್ರ ಕಾಟೋಟಿ–ಹಾರ್ಮೋನಿಯಂ, ಪಂಡಿತ್ ಕೇಶವ ಜೋಶಿ–ತಬಲ, ಸ್ಥಳ: 8ನೇ ಕ್ರಾಸ್, ವಿವಿ.ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀರಾಂಭಟ್, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ, ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಭೀಮ ಪ್ರತಿಜ್ಞೆ–ಡಾ.ಬಿ.ಆರ್.ಅಂಬೇಡ್ಕರ್ ಕುರಿತ ರೂಪಕ. ಪ್ರಾಯೋಜಕರು ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ, 10.00 ಲಲಿತ ಹರಿಪ್ರಿಯ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರ ನಾಮ, 12.45 ಮಹಿಳೆಯರಲ್ಲಿ ಉದ್ಯಮಶೀಲತೆ – ಮೈಸೂರಿನ ಪದ್ಮಾವತಿ ಭಟ್ ಅವರೊಂದಿಗೆ ಸಂದರ್ಶನ, 1.20 ಭಾವಗೀತೆಗಳು– ಕೆ.ಪಿ. ರೇವತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಸ್.ಬಾಲಚಂದರ್–ವೀಣಾವಾದನ, 4.00 ಕಥಾ ಕಾಲಕ್ಷೇಪ "ಹನಮುದ್ ವ್ರತ", ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಅರಗು ಬೇಸಾಯ ಕುರಿತು ಡಾ.ಜಿ.ಕೆ.ರಾಮೇಗೌಡ ಅವರೊಂದಿಗೆ ಸಂದರ್ಶನ, 9.30 ಹರಿಹರನ್ ಎಂ.ಬಿ. ಮತ್ತು ಅಶೋಕ್ ಎಸ್.ವಿ.–ಯುಗಳ ಗಾಯನ, 10.00 ಗಮಕ ವ್ಯಾಖ್ಯಾನ–ವಾಚನ– ಆರ್.ಎಸ್. ಅನ್ನಪೂರ್ಣ, ವ್ಯಾಖ್ಯಾನ– ಎ.ಎಸ್. ನಾಗರಾಜ್, 10.30 ಸವಿನೆನಪು

ಸ್ಮಾರಕ ದತ್ತು ಯೋಜನೆ ಆನ್‌ಲೈನ್ ಪ್ರಕ್ರಿಯೆಗೆ ಚಾಲನೆ

ರಾಜ್ಯದಲ್ಲಿ ಗುರ್ತಿಸಲಾದ 280 ಸ್ಮಾರಕಗಳ ಪೈಕಿ ಮೈಸೂರು ವಿಭಾಗದ 61 ದತ್ತು ಪಡೆಯಲು ಮುಕ್ತ ಆಹ್ವಾನ


ಐಜಿಆರ್‌ಎಂ ವೆಲ್ಲಿಂಗ್ಟನ್ ಹೌಸ್


ಶ್ರೀರಂಗಪಟ್ಟಣದ ಬತೇರಿ


ಶ್ರೀರಂಗಪಟ್ಟಣದ ಕೋಟೆ


ಕೊಡಗಿನ ನಲಕನಾಡು ಅರಮನೆ


ಮಡಿಕೇರಿ ರಾಜಾ ಗದ್ದಿಗೆ

ಮೈಸೂರು/ಬೆಂಗಳೂರು, ಸೆ. 25(ಆರ್‌ಕೆ)– ಪಾರಂಪರಿಕ ಕಟ್ಟಡಗಳು, ಸ್ಮಾರಕಗಳನ್ನು ದತ್ತು ಪಡೆದು ನಿರ್ವಹಣೆ ಮತ್ತು ಸಂರಕ್ಷಣೆ ಮಾಡುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ "ನಮ್ಮ ಸ್ಮಾರಕ–ನಮ್ಮ ಪರಂಪರೆ, ನಮ್ಮ ಗುರುತು–ನಮ್ಮ ಹೆಜ್ಜೆ" ಡಿಜಿಟಲ್ ವೇದಿಕೆಯನ್ನು ಉದ್ಘಾಟಿಸಿದರು.

ಪ್ರವಾಸೋದ್ಯಮ ಹಾಗೂ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಶ್ರಯದಲ್ಲಿ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆನ್‌ಲೈನ್ ಪೋರ್ಟಲ್‌ನಲ್ಲಿ ಪಾರಂಪರಿಕ ಸ್ಮಾರಕಗಳ ದತ್ತು ಪ್ರಕ್ರಿಯೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧ್ಯುಕ್ತ ಚಾಲನೆ ನೀಡಿದರು. ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಮೈಸೂರಿನ ಪಾರಂಪರಿಕ ಆಯುಕ್ತ ಎ. ದೇವರಾಜು, ಪ್ರವಾಸೋದ್ಯಮ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್ ಹಾಗೂ ಇತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ಪ್ರದರ್ಶಿಸಿದ್ದ ಸ್ಮಾರಕವೊಂದರ ಪ್ರತಿರೂಪವನ್ನು ಬ್ರಷ್‌ನಿಂದ ಸ್ವಚ್ಛಗೊಳಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರು ದತ್ತು ಯೋಜನೆ ಪ್ರಕ್ರಿಯೆಗೆ ಸಾಂಕೇತಿಕ ಚಾಲನೆ ನೀಡಿದರು.

ಪಾರಂಪರಿಕ ಸ್ಮಾರಕಗಳಿಗೆ ಸಾರ್ವಜನಿಕ ಶೌಚಾಲಯ, ಕುಡಿಯುವ ನೀರು, ಪಾತ್‌ವೇ, ಅಂಗವಿಕಲರಿಗೆ ಸೌಲಭ್ಯ, ಸ್ವಚ್ಛತೆ, ಪ್ಲಾಸ್ಟಿಕ್ ಬಳಸದಂತೆ ನಿಗಾ ವಹಿಸುವುದು ಸೇರಿದಂತೆ ಮೂಲ ಸೌಕರ್ಯ ಒದಗಿಸಿ ನಿರ್ವಹಣೆ ಮಾಡುವುದು ದತ್ತು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕದ 280 ಸ್ಮಾರಕಗಳನ್ನು ದತ್ತು ಯೋಜನೆಗೆ ಗುರ್ತಿಸಲಾಗಿದ್ದು, ಆ ಪೈಕಿ 61 ಮೈಸೂರು ವಿಭಾಗದಲ್ಲಿವೆ. ಬೆಂಗಳೂರು ವಿಭಾಗದಲ್ಲಿ 59, ಕಲಬುರ್ಗಿಯಲ್ಲಿ 94 ಸ್ಮಾರಕಗಳನ್ನು ಆಯ್ಕೆ ಮಾಡಲಾಗಿದ್ದು, ಕಲ್ಕಿ ಫೌಂಡೇಷನ್ ಡಿಜಿಟಲ್ ವೇದಿಕೆಯನ್ನು ಅಭಿವೃದ್ಧಿಪಡಿಸಿದೆ. ದತ್ತು ಪಡೆಯಲು ಆಸಕ್ತಿ ಇರುವವರಿಗಾಗಿ 34 ಸ್ಮಾರಕಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಮೈಸೂರು ವಿಭಾಗದ ನಂಜನಗೂಡಿನ ಕಳಲೆಯ ಲಕ್ಷ್ಮೀಕಾಂತ ದೇವಾಲಯ, ಸಾತಿ ಟೆಂಪಲ್ ಕಾಂಪ್ಲೆಕ್ಸ್, ಕೆಆರ್‌ನಗರದ ಆದಿನಾಥ ಬಸದಿ, ಕೊಡಗಿನ ಮಡಿಕೇರಿ ರಾಜಾ ಗದ್ದಿಗೆ ಹಾಗೂ ಕಕ್ಕಬ್ಬೆ ಈ ಪ್ರಕ್ರಿಯೆಯಲ್ಲಿ ಸೇರಿವೆ. 2ನೇ ಹಂತದಲ್ಲಿ ವೆಲ್ಲಿಂಗ್ಟನ್ ಮೆಮೋ ರಿಯಲ್ ಸರ್ಕಾರಿ ಸಂಗ್ರಹಾಲಯ, ತಿ.ನರಸೀಪುರದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನ, ಸೋಮನಾಥಪುರದ ಪಂಚಲಿಂಗೇಶ್ವರ ದೇವಸ್ಥಾನ, ಶ್ರೀರಂಗಪಟ್ಟಣದ ಬತೇರಿ, ಮಿರ್ ಸಾದಿಕ್ ಅರಮನೆಗಳನ್ನು ಮೈಸೂರು ವಿಭಾಗದಲ್ಲಿ ದತ್ತು ಪಡೆಯಲು ಗುರುತಿಸಲಾಗಿದೆ. ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಆಯುಕ್ತ ಎ. ದೇವರಾಜು, ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ಸುಸ್ಥಿತಿಯಲ್ಲಿ ನಿರ್ವಹಣೆ ಮಾಡಿ ಸಂರಕ್ಷಿಸಲು ಆಸಕ್ತಿ ಇರುವ ಕಂಪನಿ, ಉದ್ಯಮ, ಸಂಘ–ಸಂಸ್ಥೆ, ವ್ಯಕ್ತಿಗಳು ದತ್ತು ಪಡೆಯಲು ಡಿಜಿಟಲ್ ವೇದಿಕೆ ಮೂಲಕ ಆನ್‌ಲೈನ್ ಪೋರ್ಟಲ್ ಆರಂಭಿಸಲಾಗಿದೆ ಎಂದರು. ಸಿಎಸ್‌ಆರ್ ಅಡಿಯಲ್ಲಿ ಸ್ಮಾರಕಗಳನ್ನು ದತ್ತು ಪಡೆಯಲು ಅವಕಾಶವಿದ್ದು, ಆಸಕ್ತರು, ಆನ್‌ಲೈನ್ ಮೂಲಕ ಪ್ರಕ್ರಿಯೆ ನಡೆಸಬಹುದಾಗಿದೆ. ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಿ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲು ಮುಂದಾದರೆ ಅಂತಹ ಕಂಪನಿಗಳಿಗೆ ಸ್ಮಾರಕಗಳನ್ನು ದತ್ತು ನೀಡಲಾಗುವುದು ಎಂದು ತಿಳಿಸಿದರು.

ನಾಳೆ ಕಲಾದೇವಿ ಬೊಂಬೆ ಸಂಗ್ರಹಾಲಯ ಲೋಕಾರ್ಪಣೆ



ಮೈಸೂರು, ಸೆ.25(ಎಸ್‌ಬಿಡಿ)– ಮೈಸೂರಿನಲ್ಲಿ ಸ್ಥಾಪಿಸಿರುವ 'ಕಲಾದೇವಿ ಬೊಂಬೆ ಸಂಗ್ರಹಾಲಯ' ವಿಶ್ವ ಪ್ರವಾಸೋದ್ಯಮ ದಿನದಂದು ಲೋಕಾರ್ಪಣೆಗೊಳ್ಳಲಿದೆ.

ಮೈಸೂರು ಮೃಗಾಲಯ ಎದುರಿನ ಪ್ರಖ್ಯಾತ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕರಕುಶಲ ಕಲಾಕೃತಿಗಳ ಮಳಿಗೆ 'ಹ್ಯಾಂಡಿಕ್ರಾಫ್ಟ್ಸ್ ಸೇಲ್ಸ್ ಎಂಪೋರಿಯಮ್'ನ ಸುವರ್ಣ ಮಹೋತ್ಸವದ ಪ್ರಯುಕ್ತ ಸ್ಥಾಪಿಸಲಾಗಿರುವ ಈ ಬೊಂಬೆ ಮನೆಯನ್ನು ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಾನಿಧ್ಯದಲ್ಲಿ ಮೈಸೂರು ರಾಜವಂಶಸ್ಥರ ಶ್ರೀಮತಿ ಪ್ರಮೋದಾ ದೇವಿ ಒಡೆಯರ್ ಅವರು ಸೆ.27ರ ಸಂಜೆ 5.30ಕ್ಕೆ ಉದ್ಘಾಟಿಸಲಿದ್ದಾರೆ.

ಇದು ದಕ್ಷಿಣ ಭಾರತದ ಮೊದಲ ಬೊಂಬೆ ಸಂಗ್ರಹಾಲಯವಾಗಿದ್ದು, 2020ರ ಡಿಸೆಂಬರ್‌ನಲ್ಲೇ ಲೋಕಾರ್ಪಣೆಗೆ ಸಿದ್ಧತೆ ನಡೆದಿತ್ತಾದರೂ ಕೊರೊನಾ ಸಂದಿಗ್ಧತೆಯಿಂದ ಮುಂದೂಡಲಾಗಿತ್ತು. ಮೈಸೂರು ಪ್ರವಾಸಿ ತಾಣಗಳ ಪಟ್ಟಿಗೆ ಸೇರಲಿರುವ ಈ ಬೊಂಬೆ ಮನೆಗೆ ಸೆ.28ರಿಂದ ನಿತ್ಯ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ. ಸಿಂಗ್(ಮೊ.ಸಂ.9880111625) ಹಾಗೂ ಕ್ಯೂರೇಟರ್ ರಘು ಧರ್ಮೇಂದ್ರ (ಮೊ.ಸಂ. 9686693625) ಅವರನ್ನು ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ದೇಶದ ಹಲವಾರು ಸಂಗ್ರಹಾಲಯಗಳಲ್ಲಿ ಸಹಜವಾಗಿ ಬೊಂಬೆಗಳಿಗೆಂದು ಒಂದು ಪುಟ್ಟ ವಿಭಾಗವಿರುತ್ತದೆ. ಆದರೆ ಸಂಪೂರ್ಣವಾಗಿ ಬೊಂಬೆಗಳನ್ನೇ ಒಳಗೊಂಡ ಸಂಗ್ರಹಾಲಯ ಗಳಿರುವುದು ಬೆರಳೆಣಿಕೆಯಷ್ಟು ಮಾತ್ರ. ನವದೆಹಲಿಯ ಶಂಕರ್ ಡಾಲ್ ಮ್ಯೂಸಿಯಮ್, ಜೈಪುರದ ಡಾಲ್ ಮ್ಯೂಸಿಯಂ, ರಾಜಕೋಟ್‌ನ ರೋಟರಿ ಇಂಟರ್‌ನ್ಯಾಶನಲ್ ಡಾಲ್ ಮ್ಯೂಸಿಯಂ, ಚಂಡೀಗಢ್‌ನ ಇಂಟರ್ ನ್ಯಾಶನಲ್ ಡಾಲ್ ಮ್ಯೂಸಿಯಂ ಮತ್ತು ಧರ್ಮ ಶಾಲಾದ ಲೋಸೆಲ್ ಡಾಲ್ ಮ್ಯೂಸಿಯಂ ಪಟ್ಟಿಗೆ ದಕ್ಷಿಣ ಭಾರತದ ಮೊದಲ ಡಾಲ್ ಮ್ಯೂಸಿಯಂ ಆಗಿ 'ಕಲಾದೇವಿ ಬೊಂಬೆ ಸಂಗ್ರಹಾಲಯ' ಸೇರ್ಪಡೆಯಾಗಲಿದೆ. ಡಿ.ರಾಮ್ ಸಿಂಗ್ ಅವರು 1970ರಲ್ಲಿ ಮೈಸೂರು ಮೃಗಾಲಯದ ಎದುರು ಕರಕುಶಲ ಕಲಾಕೃತಿಗಳ ಮಳಿಗೆ 'ಹ್ಯಾಂಡಿ ಕ್ರಾಫ್ಟ್ಸ್ ಸೇಲ್ಸ್ ಎಂಪೋರಿಯಮ್' ಸ್ಥಾಪಿಸಿದರು. ಇದರ 25ನೇ ವಾರ್ಷಿಕೋತ್ಸವದ ಸಂದರ್ಭ(1995)ದಲ್ಲಿ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಉದಯವಾಯಿತು. ಈ ಸಂಸ್ಥೆ ನಾಡಿನ ಕರಕುಶಲ ಕಲಾಪ್ರಕಾರಗಳನ್ನು ಗುರುತಿಸಿ ಬೆಂಬಲಿಸುವ ಉದ್ದೇಶದೊಂದಿಗೆ ಹಲವು ಕಾರ್ಯಕ್ರಮ ನಡೆಸಿಕೊಂಡು ಬಂದಿದೆ.

2005ರಿಂದ ದಸರಾ ಬೊಂಬೆ ಮನೆ ಆಯೋಜಿಸಿಕೊಂಡು ಬರಲಾಗುತ್ತಿದೆ. 2000ನೇ ಇಸವಿಯಿಂದ ಭಾರತೀಯ ಸಾಂಪ್ರದಾಯಿಕ ಹಾಸು ಆಟಗಳ ಬಗ್ಗೆ ಸಂಶೋಧನೆ, ದಾಖಲೀಕರಣ, ವಿಶ್ಲೇಷಣೆಯಲ್ಲಿ ತೊಡಗಿದ್ದು, ಇದರ ಪ್ರತಿಫಲವಾಗಿ 'ಕ್ರೀಡಾ ಕೌಶಲ್ಯ' ಭಾರತೀಯ ಪಾರಂಪರಿಕ ಹಾಸು ಆಟಗಳ ಪ್ರದರ್ಶನ ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾರಾಜಿಸುತ್ತಿದೆ. ಕರ್ನಾಟಕ ಶಿಲ್ಪ ಕಲಾ ಅಕಾಡೆಮಿಯು ವಾರ್ಷಿಕವಾಗಿ ನಡೆಸುವ ಶಿಲ್ಪಕಲಾ ಸ್ಪರ್ಧೆಯಲ್ಲಿ ವಿಜೇತ ಶಿಲ್ಪಿಗೆ 25,000 ರೂ. ನಗದು ಸಹಿತ ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತಿದೆ.

ವಿಶ್ವ ಪ್ರವಾಸೋದ್ಯಮ ದಿನ: ವಿವಿಧ ಕಾರ್ಯಕ್ರಮಗಳು

ಮೈಸೂರು: ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಸೆ.26ರಂದು ಮಹಾಜನ ಕಾಲೇಜಿನ ಪ್ರವಾಸೋದ್ಯಮ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು, ಸೆ.27ರಂದು ಮೈಸೂರು ಅರಮನೆಯ ವರಹ ದ್ವಾರದಿಂದ ಮೆರವಣಿಗೆ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಮೆರವಣಿಗೆಯಲ್ಲಿ 15ರಿಂದ 20 ಕಲಾತಂಡಗಳು ಹಾಗೂ ವಿದ್ಯಾವಿಕಾಸ್, ಸದ್ವಿದ್ಯಾ, ಮಹಾಜನಾಸ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸುವರು. ಸೆ.29ರಂದು ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಹಾಗೂ ರಾಜ್ಯ ಸ್ವಯಂ ಸೇವಕರಿಂದ ಸೋಮನಾಥಪುರ ಚನ್ನಕೇಶವ ದೇವಾಲಯದಲ್ಲಿ ಸ್ವಚ್ಛತಾ ಪಕ್ವಡ ಕಾರ್ಯಕ್ರಮ ಹಾಗೂ ಚಾಮುಂಡಿಬೆಟ್ಟದ ಮೆಟ್ಟಿಲುಗಳಲ್ಲಿ ತ್ಯಾಜ್ಯ ಸಂಗ್ರಹಣೆ ಮತ್ತು ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸೆ.30ರಂದು ತೋಟಗಾರಿಕೆ ಇಲಾಖೆ ಹಾಗೂ ನಗರಪಾಲಿಕೆ ಸಹಯೋಗದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲೇಷ್ಯಾದ ವರ್ಲ್ಡ್ ಎಜುಕೇಶನ್ ಸಮ್ಮಿಟ್‌ಗೆ ಡಾ.ಸೆಲ್ವಕುಮಾರ್



ಮೈಸೂರು: ನಗರದ ಪ್ರೊಫೆಸರ್ ಮತ್ತು ಆರಂಭಿಕ ಬಾಲ್ಯ ಶಿಕ್ಷಣತಜ್ಞ, ಡಾ.ಎಸ್.ಸೆಲ್ವಕುಮಾರ್ ಅವರನ್ನು ವರ್ಲ್ಡ್ ಎಜುಕೇಶನ್ ಸಮ್ಮಿಟ್, ಮಲೇಷ್ಯಾದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ, ಶಿಕ್ಷಣದಲ್ಲಿ ನಾವೀನ್ಯತೆ ಕುರಿತ ಏಷ್ಯಾದ ಪ್ರೀಮಿಯರ್ ಸಮ್ಮಿಟ್ ಮಲೇಷ್ಯಾದಲ್ಲಿ 2, 3ನೇ ಅಕ್ಟೋಬರ್‌ನಲ್ಲಿ ಅತಿಥಿ ಭಾಷಣಕಾರರಾಗಿ ಪಾಲ್ಗೊಳ್ಳಲಿದ್ದಾರೆ.

ಇಂದು, ನಾಳೆ ವಿದ್ಯುತ್ ಜನ ಸಂಪರ್ಕ ಸಭೆ

ಮೈಸೂರು,ಸೆ.25– ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ಬಗ್ಗೆ ಎರಡನೇ ತ್ರೈಮಾಸಿಕ ಜನ ಸಂಪರ್ಕ ಸಭೆಯನ್ನು ಸೆ.26 ಮತ್ತು 27ರಂದು ಹಮ್ಮಿಕೊಳ್ಳಲಾಗಿದೆ. ಸೆ.26ರಂದು ಬೆಳಗ್ಗೆ 11 ಗಂಟೆಗೆ ಹೂಟಗಳ್ಳಿ ಉಪವಿಭಾಗ ಕಚೇರಿಯಲ್ಲಿ, ಮಧ್ಯಾಹ್ನ 3 ಗಂಟೆಗೆ ವಿವಿ ಮೊಹಲ್ಲಾ ಉಪವಿಭಾಗ ಕಚೇರಿಯಲ್ಲಿ ಹಾಗೂ ಸೆ.27ರಂದು ಬೆಳಗ್ಗೆ 11ಕ್ಕೆ ಕುವೆಂಪುನಗರ ಉಪವಿಭಾಗ ಕಚೇರಿಯಲ್ಲಿ, ಮಧ್ಯಾಹ್ನ 3 ಗಂಟೆಗೆ ಆರ್ ಕೆ ನಗರ ಉಪವಿಭಾಗ ಕಚೇರಿಯಲ್ಲಿ ವಿದ್ಯುತ್ ಜನ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ವಿದ್ಯುತ್ ಸಮಸ್ಯೆ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ ಅರ್ಜಿ ನೀಡುವುದರ ಮುಖಾಂತರ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಕಟಣೆ ತಿಳಿಸಿದೆ.



ಮೈಸೂರಿನ ವಿವಿ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಎಸ್‌ಪಿವಿಜಿಎಂಸಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ 62ನೇ ಪಾರಂಪರಿಕ ಸಂಗೀತೋತ್ಸವದಲ್ಲಿ 8ನೇ ದಿನವಾದ ಸೋಮವಾರ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯ, ಪಂಡಿತ್ ರಾಕೇಶ್ ಚೌರಾಷಿಯ ಜೊಡಿಯು ಕೊಳಲು ಮತ್ತು ಬಾನ್ಸುರಿ ಜುಗಲ್‌ಬಂದಿ ಕಾರ್ಯಕ್ರಮ ನಡೆಸಿಕೊಟ್ಟಿತು. ಹಿಮ್ಮೇಳದಲ್ಲಿ ವಿದ್ವಾನ್ ಗಿರಿಧರ ಉಡುಪ (ಘಟಂ), ಪಂಡಿತ್ ಓಜಸ್ (ತಬಲ) ಸಹಕಾರ ನೀಡಿದರು.

ಕಾವೇರಿ ಹೋರಾಟ ಹಿನ್ನೆಲೆ; ಮುಕ್ತ ವಿವಿ ವಿವಿಧ ಕೋರ್ಸ್‌ಗಳ ಪರೀಕ್ಷೆ ಮುಂದೂಡಿಕೆ

ಮೈಸೂರು, ಸೆ.25 (ಪಿಎಂ)– ಕಾವೇರಿ ನದಿ ನೀರು ಹಂಚಿಕೆ ಸಂಬಂಧ ನಡೆಯುತ್ತಿರುವ ಹೋರಾಟದ ಹಿನ್ನೆಲೆಯಲ್ಲಿ ಸೆ.26, 29 ಮತ್ತು 28ರಂದು ನಿಗದಿಪಡಿಸಿದ್ದ ಮುಕ್ತ ವಿವಿಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಅಕ್ಟೋಬರ್ ತಿಂಗಳಿಗೆ ಮುಂದೂಡಲಾಗಿದೆ ಎಂದು ವಿಶ್ವವಿದ್ಯಾನಿಲಯದ ಪ್ರಕಟಣೆ ತಿಳಿಸಿದೆ. ಬಿಎ ಮತ್ತು ಬಿ.ಕಾಂ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅ.11, 12 ಮತ್ತು 13ರಂದು ಪರೀಕ್ಷೆಗಳು ನಡೆಯಲಿವೆ. ಅಂತೆಯೇ ಪ್ರಥಮ ಎಂ.ಎ ಮತ್ತು ಎಂ.ಕಾಂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅ.11 ಮತ್ತು 12ರಂದು ಪರೀಕ್ಷೆಗಳು ನಡೆಯಲಿವೆ. ಮಾಹಿತಿಗೆ ವಿವಿಯ ವೆಬ್‌ಸೈಟ್‌ಗೆ (https://ksoumysuru. ac.in/) ಭೇಟಿ ನೀಡಬಹುದು ಎಂದು ಮುಕ್ತ ವಿವಿ ಪರೀಕ್ಷಾಂಗ ಕುಲಸಚಿವರು ತಿಳಿಸಿದ್ದಾರೆ.

ಎನ್‌ಡಿಎ ಕೂಟದಿಂದ ಎಐಎಡಿಎಂಕೆ ಹೊರಕ್ಕೆ

ಲೋಕಸಭೆ ಚುನಾವಣೆಗೂ ಮೊದಲು ಬಿಜೆಪಿಗೆ ಶಾಕ್, ತೃತೀಯ ರಂಗದ ನೇತೃತ್ವ?

ನವದೆಹಲಿ: ಮುಂದಿನ ಲೋಕಸಭೆ ಚುನಾವಣೆಗೆ ಕಾಂಗ್ರೆಸ್, ಆಪ್, ಆರ್‌ಜೆಡಿ ಸೇರಿದಂತೆ ಎಲ್ಲ ವಿಪಕ್ಷಗಳು 'ಇಂಡಿಯಾ' ಕೂಟ ಕಟ್ಟಿಕೊಂಡು ಬಿಜೆಪಿ ನೇತೃತ್ವದ ಎನ್‌ಡಿಎ ಬಣದ ವಿರುದ್ಧ ಹೋರಾಡಲು ಸಿದ್ಧತೆ ನಡೆಸುತ್ತಿದ್ದರೆ, ಇತ್ತ ಬಿಜೆಪಿಗೆ ಮಿತ್ರ ಪಕ್ಷವೊಂದರ ನಿರ್ಧಾರ ಅಚ್ಚರಿ ಮೂಡಿಸಿದೆ.

ಈ ಹಿಂದೆ ಎನ್‌ಡಿಎ (ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ) ಬಣದಲ್ಲಿದ್ದ ಎಐಎಡಿಎಂಕೆ (ಆಲ್ ಇಂಡಿಯಾ ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಒಕ್ಕೂಟದಿಂದ ಹೊರಬರುವುದಾಗಿ ಅಧಿಕೃತವಾಗಿ ಘೋಷಿಸಿದೆ. ಇಂಥದ್ದೊಂದು ನಿರ್ಧಾರವನ್ನು ಸೋಮವಾರ ನಡೆದ ಪಕ್ಷದ ಸಭೆಯಲ್ಲಿ ಅಂಗೀಕರಿಸಲಾಗಿದೆ. ಇದು ಇಂಡಿಯಾ ಕೂಟದ ವಿರುದ್ಧ ಉಳಿದ ಪಕ್ಷಗಳನ್ನು ಒಟ್ಟುಗೂಡಿಸುತ್ತಿದ್ದ ಬಿಜೆಪಿಗೆ ಹಿನ್ನಡೆ ಉಂಟು ಮಾಡಿದಂತಾಗಿದೆ.

ಬಿಜೆಪಿ ಜತೆ ಎಲ್ಲ ಸಂಬಂಧ ಕಟ್: ಈ ಬಗ್ಗೆ ಅಧಿಕೃತವಾಗಿ ಹೇಳಿಕೆ ನೀಡಿರುವ ಎಐಎಡಿಎಂಕೆ ಉಪಸಂಯೋಜಕ ಕೆ.ಪಿ.ಮುನುಸಾಮಿ, ಇಂದಿನಿಂದ ಎಐಎಡಿಎಂಕೆ ಪಕ್ಷವು ಬಿಜೆಪಿ ಮತ್ತು ಅದರ ನೇತೃತ್ವದ ಎನ್‌ಡಿಎ ಜೊತೆಗಿನ ಸಂಬಂಧವನ್ನು ಮುರಿದುಕೊಂಡಿದೆ. ಈ ನಿರ್ಣಯವನ್ನು ಪಕ್ಷದ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ ಎಂದರು.

ತಮಿಳುನಾಡು ರಾಜ್ಯ ಬಿಜೆಪಿ ನಾಯಕರು ನಮ್ಮ ಪಕ್ಷದ ನಾಯಕಿ, ಮಾಜಿ ಸಿಎಂ ಜಯಲಲಿತಾ, ಅಣ್ಣಾ, ಪೆರಿಯಾರ್ ಅವರ ಮೇಲೆ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಇದನ್ನು ಪಕ್ಷ ಸಂಪೂರ್ಣವಾಗಿ ನಿರಾಕರಿಸುತ್ತದೆ. ಈ ಎಲ್ಲಾ ಆರೋಪಗಳನ್ನು ನಮ್ಮ ಪಕ್ಷದ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳುವುದಿಲ್ಲ. ನಾವು ಮುಂದೆ ಜನರ ಬಳಿ ತೆರಳಿ ಕೆಲಸ ಮಾಡಬೇಕು. ಆದ್ದರಿಂದ ಯಾವುದೇ ಆಯ್ಕೆ ಇಲ್ಲದೆ ಈ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ ಎಂದು ತಿಳಿಸಿದರು.

ತೃತೀಯ ರಂಗದ ನೇತೃತ್ವ : ಎಐಎಡಿಎಂಕೆ ಪ್ರಧಾನ ಕಚೇರಿಯಲ್ಲಿ ಪಕ್ಷದ ಅಧ್ಯಕ್ಷ ಎಡಪ್ಪಾಡಿ ಕೆ ಪಳನಿ ಸ್ವಾಮಿ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಎನ್‌ಡಿಎಯಿಂದ ಹೊರಬರುವ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಜೊತೆಗೆ 2024ರ ಲೋಕಸಭೆ ಚುನಾವಣೆಗೆ ತೃತೀಯ ರಂಗವನ್ನು ಮುನ್ನಡೆಸುವುದಾಗಿ ತೀರ್ಮಾನಿಸಿದೆ. ಮುಂದಿನ ವರ್ಷದ ಚುನಾವಣೆಯಲ್ಲಿ ಎನ್‌ಡಿಎಯಿಂದ ದೂರ ಸರಿಯಲು ಮತ್ತು ಸಮಾನ ಮನಸ್ಕ ಪಕ್ಷಗಳ ಒಕ್ಕೂಟವನ್ನು ಮುನ್ನಡೆಸಲು ಪಕ್ಷವು ಸರ್ವಾನುಮತದಿಂದ ನಿರ್ಧರಿಸಿದೆ ಎಂದು ಮುನುಸಾಮಿ ಹೇಳಿದರು.

ಅಣ್ಣಾಮಲೈ ವಿರುದ್ಧ ಗುಡುಗು: ಡಿಎಂಕೆ, ಎಐಎಡಿಎಂಕೆ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ನಿರಂತರ ಟೀಕಾಪ್ರಹಾರ ನಡೆಸುತ್ತಿದ್ದು, ಗಂಭೀರ ಭ್ರಷ್ಟಾಚಾರ ಆರೋಪ ಹೊರಿಸಿದ್ದಾರೆ. ಹೀಗಾಗಿ ದ್ರಾವಿಡ ಪಕ್ಷವು ಬಿಜೆಪಿ ಜೊತೆ ಮುನಿಸಿಕೊಂಡಿದೆ. ಅಣ್ಣಾಮಲೈ ವಿರುದ್ಧವೂ ಅಸಮಾಧಾನಗೊಂಡಿರುವುದು ಇದು ಸ್ಪಷ್ಟಪಡಿಸುತ್ತದೆ.

ಏಷ್ಯನ್ ಗೇಮ್ಸ್ ಮಹಿಳಾ ಟಿ20 ಕ್ರಿಕೆಟ್ ಫೈನಲ್: ಶ್ರೀಲಂಕಾ ವಿರುದ್ಧ ಚಿನ್ನ ಗೆದ್ದ ಭಾರತ ತಂಡ



ಹ್ಯಾಂಗ್ ಝೌ: ಏಷ್ಯನ್ ಗೇಮ್ಸ್ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಮಣಿಸಿದ ಭಾರತ ಮಹಿಳಾ ತಂಡ ಚಿನ್ನದ ಪದಕಕ್ಕೆ ಮುತ್ತಿಟ್ಟಿದೆ.

ಇದೇ ಮೊದಲ ಬಾರಿಗೆ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ನಡೆದ ಮಹಿಳಾ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಭಾರತ ತಂಡ 19 ರನ್‌ಗಳ ಅಂತರದಲ್ಲಿ ಮಣಿಸಿ ಮೊದಲ ಬಾರಿಗೆ ಚಿನ್ನದ ಪದಕ ಬಾಚಿ ಕೊಂಡಿದೆ.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ಶ್ರೀಲಂಕಾಗೆ ಗೆಲ್ಲಲು ಕೇವಲ 117 ರನ್‌ಗಳ ಸಾಧಾರಣ ಗುರಿ ನೀಡಿತ್ತು ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ವನಿತೆಯರ ತಂಡ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ ಕೇವಲ 116 ರನ್‌ಗಳನ್ನಷ್ಟೇ ಕಲೆಹಾಕಿತು. ಭಾರತದ ಪರ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ (46 ರನ್, 45 ಎಸೆತ) ಮತ್ತು ಜೆಮಿಮಾ ರೋಡ್ರಿಗಸ್ (42 ರನ್, 40 ಎಸೆತ) ಅವರನ್ನು ಹೊರತುಪಡಿಸಿದರೆ ಉಳಿದವರಾರೂ ಕೂಡ ಎರಡಂಕಿ ಮೊತ್ತ ದಾಟಲಿಲ್ಲ. ಶಫಾಲಿ ವರ್ಮಾ 9 ರನ್ ಗಳಿಸಿ ಔಟಾದರೆ, ರಿಚಾ ಘೋಷ್ 9, ನಾಯಕಿ ಹರ್ಮನ್ ಪ್ರೀತ್ ಕೌರ್ 2, ಪೂಜಾ ವಸ್ತ್ರಾಕರ್ 2 ರನ್‌ಗಳನ್ನು ಮಾತ್ರಗಳಿಸಿ ನಿರಾಸೆ ಮೂಡಿಸಿದರು. ಶ್ರೀಲಂಕಾ ಪರ ಉದೇಶಿಕ ಪ್ರಬೋಧಿನಿ, ಸೌಗಂದಿಕಾ ಕುಮಾರಿ, ಇನೋಕಾ ರಣವೀರಾ ತಲಾ ಎರಡು ವಿಕೆಟ್ ಪಡೆದು ಮಿಂಚಿದರು.

ಭಾರತ ನೀಡಿದ 117 ರನ್‌ಗಳ ಗುರಿ ಬೆನ್ನತ್ತಿದ ಶ್ರೀಲಂಕಾ ವನಿತೆಯರ ತಂಡ ನಿಗದಿತ 20 ಓವರ್‌ನಲ್ಲಿ 8 ವಿಕೆಟ್ ನಷ್ಟಕ್ಕೆ ಕೇವಲ 97 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು. ಆ ಮೂಲಕ 19 ರನ್‌ಗಳ ಸೋಲು ಕಂಡಿತು. ಆರಂಭಿಕ ಹಂತದಲ್ಲಿ ಬಿದ್ದ ಸತತ ವಿಕೆಟ್‌ಗಳು ಶ್ರೀಲಂಕಾ ತಂಡಕ್ಕೆ ಮುಳುವಾಯಿತು. ಭಾರತ ಪರ ಟಿಟಾಸ್ ಸಧು 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿಕೊಂಡರೆ, ರಾಜೇಶ್ವರಿ ಗಾಯಕ್ವಾಡ್ 2, ದೀಪ್ತಿ ಶರ್ಮಾ, ಪೂಜಾ ವಸ್ತ್ರಾಕರ್ ಮತ್ತು ದೇವಿಕಾ ವೈದ್ಯ ತಲಾ 1 ವಿಕೆಟ್ ಪಡೆದರು. ಶ್ರೀಲಂಕಾ ಪರ ಹಸಿನಿ ಪರೇರಾ 25ರನ್, ನಿಲಾಕ್ಷಿ ಡಿಸಿಲ್ವಾ 23ರನ್ ಮತ್ತು ಒಶಾಧಿ ರಣಸಿಂಘೆ 19ರನ್ ಗಳಿಸಿದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ನಾನು ಅಳುತ್ತಾ ಇದ್ರೆ ಯಾಕೆ ಅಂತ ಕೂಡ ಕೇಳಲ್ಲ ನೀವು

ಪತಿ : ಇತ್ತೀಚೆಗೆ ಇಂಥ ಅಳು ತುಂಬಾ ದುಬಾರಿ, ಒಂದು ರೇಷ್ಮೆ ಸೀರೆ ಕನಿಷ್ಠ ಐದು ಸಾವಿರ ರೂಪಾಯಿ!

ಮೈಸೂರು ಮಿತ್ರ

ಮಂಗಳವಾರ, 26 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೀತಿ ಎಂಬುದು ವ್ಯಕ್ತಿಗತವಾದ ಬಹು ಬೆಲೆಯುಳ್ಳ ವಸ್ತು –ಆಡಮ್ಸ್


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳಗಾನ ದುಡಿದರೂ ಬೇಳೆ ಕಾಸಿನ ಆದಾಯವಿಲ್ಲ

ನಿಮ್ಮ ಪತ್ರಗಳು

ಆದಿಚುಂಚನಗಿರಿ ರಸ್ತೆ ಕಾಮಗಾರಿ ಬಗ್ಗೆ ಅನುಮಾನ..!?

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ಮುಖ್ಯ ರಸ್ತೆಯ ಅಗರವಾಲ್ ಕಣ್ಣಿನ ಆಸ್ಪತ್ರೆಯಿಂದ ಅರವಿಂದನಗರದ ಮಹದೇಶ್ವರ ದೇವಸ್ಥಾನದವರೆಗಿನ ಕೇವಲ ಒಂದು ಫರ್ಲಾಂಗ್ ದೂರದ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ ಬರೋಬ್ಬರಿ ವರ್ಷದಿಂದ ನಡೆಯುತ್ತಿದೆ.



ಅದರೂ ಇದು ಇನ್ನೂ ಪೂರ್ಣಗೊಂಡಿಲ್ಲ. ಇದಕ್ಕೆ ಕಾರಣ ಏನೆಂದು ತಿಳಿಯದು. ಸಂಬಂಧಿಸಿದವರಿಗೆ ಇನ್ನೂ ಕಮಿಷನ್ ಸಂದಾಯವಾಗಿಲ್ಲವೇ...!?

ಕೇವಲ ಒಂದು ಫರ್ಲಾಂಗ್ ದೂರದ ಒಳ ಚರಂಡಿ ವ್ಯವಸ್ಥೆ ಪೂರ್ಣಗೊಳ್ಳಲು ಒಂದು ವರ್ಷ ಕಾಲ ಬೇಕಾ? ಇದು ಕುಂಟುತ್ತಾ ಸಾಗಲು ಕಾರಣ ತಿಳಿಯದು. ಈ ಅಪೂರ್ಣಗೊಂಡ ಕಾಮಗಾರಿಯ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಈಗಾಗಲೇ ಎರಡು ಬಾರಿ ಮನವಿ ಮಾಡಿದ್ದೇನೆ. ಪತ್ರಿಕೆಯಲ್ಲಿ ಬಂದ ತಕ್ಷಣವೇ ಎರಡು ಮೂರು ದಿನಗಳ ಕಾಲ ಎರಡು ಇಟಾಚಿಗಳಿಂದ ಕೆಲಸ ಮಾಡಲು ಪ್ರಾರಂಭಿಸುತ್ತಾರೆ. ನಾಲ್ಕನೇ ದಿನಕ್ಕೆ ಮತ್ತೆ ಕೆಲಸ ನಿಂತಿರುತ್ತದೆ.

ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ನಗರ ಪಾಲಿಕೆಗೆ ಹಿಡಿ ಶಾಪ ಹಾಕುತ್ತಿದ್ದಾರೆ. ದಯಮಾಡಿ ಈ ಕಾಮಗಾರಿ ಪೂರ್ಣಗೊಂಡು ಡಾಂಬರೀಕರಣವಾಗುವ ತನಕವಾದರೂ, ಧೂಳು ಹರಡದಂತೆ ಲಾರಿಗಳಲ್ಲಿ ನೀರು ಹಾಕಿ ಜನರ ಆರೋಗ್ಯ ಕಾಪಾಡುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಕಾವೇರಿ ಹೊಸ ಒಡಂಬಡಿಕೆಯಾಗಲಿ

ಮಾನ್ಯರೆ,

ತಮಿಳುನಾಡು ಹಾಗೂ ಕರ್ನಾಟಕದ ಮಧ್ಯೆ ಕಾವೇರಿ ನೀರಿಗಾಗಿ ಎಂದೋ ಮದರಾಸು ಸರಕಾರದೊಂದಿಗೆ ಮಾಡಿಕೊಂಡ ಓಬೀರಾಯನ ಕಾಲದ ಒಪ್ಪಂದಕ್ಕೇ ಜೋತು ಬೀಳದೆ ಕರ್ನಾಟಕ ಸರಕಾರದೊಂದಿಗೆ ತಮಿಳುನಾಡು ಸರಕಾರವು ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಒಪ್ಪಂದ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ. ನಮ್ಮ ಜನರ ಹಣದಲ್ಲಿ ಕಟ್ಟಿದ ಕೃಷ್ಣರಾಜಸಾಗರದ ಮೇಲೆ ತಮಿಳುನಾಡಿಗೆ ಯಾವ ಹಕ್ಕೂ ಇಲ್ಲದ ಕಾರಣ ಮದರಾಸ್ ಸರಕಾರವಿದ್ದಾಗ ಆದ ಒಪ್ಪಂದವನ್ನು ರದ್ದುಮಾಡಲಾಗಿದೆಯೆಂಬ ನೋಟೀಸನ್ನು ಕರ್ನಾಟಕ ಸರಕಾರ ತಮಿಳುನಾಡಿಗೆ ಜಾರಿ ಮಾಡಲಿ. ತಮಿಳುನಾಡಿಗೆ ಅಗತ್ಯವಿದ್ದರೆ ಕರ್ನಾಟಕದ ಜೊತೆ ಹೊಸದಾಗಿ ಒಪ್ಪಂದ ಮಾಡಿಕೊಳ್ಳಲಿ.

– ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು

ಜಂಬೂಸವಾರಿ ಪ್ರಯಾಣದ ದಾರಿಯಲ್ಲಿ ಶೌಚಾಲಯಗಳು ಇರಲಿ

ಮಾನ್ಯರೆ,

ವಿಶ್ವವಿಖ್ಯಾತ ನಾಡಹಬ್ಬವಾದ ಮೈಸೂರಿನ ದಸರಾ ಹಬ್ಬದ ಪ್ರಯುಕ್ತ ತಾಯಿ ಚಾಮುಂಡೇಶ್ವರಿ ಕೃಪೆಯೊಂದಿಗೆ ನಡೆಯುವ "ಜಂಬೂಸವಾರಿ" ಮಾರ್ಗವು ಸುಮಾರು ಮೈಸೂರಿನ ಅರಮನೆ ಆವರಣದಿಂದ ಬನ್ನಿಮಂಟಪದವರೆಗೆ ಸುಮಾರು 4.5 ಕೀ ಮಿ ರಿಂದ 5 ಕೀಲೋಮಿಟರ್‌ಗಳಿದ್ದು ಜಂಬೂಸವಾರಿ ನೋಡಲು ದೇಶ–ವಿದೇಶಗಳಿಂದ ಲಕ್ಷಾಂತರ ಜನರು ಆಗಮಿಸಿ ಬೆಳಿಗ್ಗೆಯಿಂದ ಜಂಬೂಸವಾರಿ ಬರುವವರೆಗೂ ಕಾಯುತ್ತಿರುತ್ತಾರೆ. ಈ ಸಮಯಗಳಲ್ಲಿ ಶೌಚಾಲಯದ ಅನಿವಾರ್ಯ ಹೆಚ್ಚಾಗಿರುತ್ತದೆ. ಆದ್ದರಿಂದ ಜಂಬೂಸವಾರಿ ಹೋಗುವ ದಾರಿಯಲ್ಲಿ ಸಾರ್ವಜನಿಕರಿಗೆ ವೀಕ್ಷಿಸಲು ನಿರ್ಮಾಣ ಮಾಡುವ ಆಸನಗಳ ಜೊತೆಗೆ ಪ್ರತಿ 0.5 ಕಿಲೋಮೀಟರ್ ದೂರದಲ್ಲಿ 'ಕಾಯಿನ್' ಹಾಕಿ ಬಳಸುವ ಶೌಚಾಲಯ ಗಳನ್ನು ನಿರ್ಮಾಣ ಮಾಡುವುದರ ಮೂಲಕ ಮಹಿಳೆಯರು, ಮಕ್ಕಳು, ಪುರುಷರು ಹಾಗೂ ಹಿರಿಯರನ್ನೂ ಒಳಗೊಂಡಂತೆ ಇತರರು ಸೇರಿ ಜಂಬೂಸವಾರಿ ನೋಡಲು ಬರುವವರಿಗೆ ಅನುಕೂಲ ಕಲ್ಪಿಸಲು ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಶಾಸಕರು ಸೇರಿದಂತೆ ರಾಜ್ಯ ಸರ್ಕಾರವು ಚಿಂತಿಸುವಂತೆ ಈ ಮೂಲಕ ಮನವಿ.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ದತ್ತನಗರದಲ್ಲಿ ಡಾಂಬರೀಕರಣ ಮಾಡಿ

ಮಾನ್ಯರೆ,

ಮೈಸೂರಿನ ಊಟಿ ರಸ್ತೆ ದತ್ತನಗರ ಕೃಷ್ಣ ಬೇಕರಿ ಬಳಿ ರಸ್ತೆ (ವಾರ್ಡ್ ನಂ. 55) ಡಾಂಬರು ಕಂಡು ಸುಮಾರು 10 ವರ್ಷಗಳಾಗಿದೆ. ಇದುವರೆಗೂ ಯಾರೂ ಇತ್ತ ಗಮನ ಹರಿಸಿಲ್ಲ. ಜೊತೆಗೆ ಚೇಂಬರ್ ಸಹ ಹಾಳಾಗಿದ್ದು, ವಾಹನ ಸವಾರರು ಮತ್ತು ವೃದ್ಧರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಸಂಬಂಧಪಟ್ಟ ಶಾಸಕರು, ಮೇಯರ್ ಇತ್ತ ಗಮನಹರಿಸಿ, ಡಾಂಬರ್ ಹಾಕಿಸಿ, ಚೇಂಬರ್ ಸರಿಪಡಿಸಿ ಪುಣ್ಯ ಕಟ್ಟಿಕೊಳ್ಳಬೇಕೆಂದು ಕೋರಿಕೆ. **–ದತ್ತನಗರ ನಿವಾಸಿಗಳು, ಮೈಸೂರು.**

ಇಮ್ಮಡಿ ಸಾಧನೆ

ಮಾನ್ಯರೆ,

ಜೀವನದಲ್ಲಿ ಸಾಧನೆ ಮುಖ್ಯ; ವಯಸ್ಸಲ್ಲ. ಒಪ್ಪೋಣ. ಆದರೆ ಸಾಧನೆಯೊಡನೆ ವಯಸ್ಸೂ ಮಿಳಿತವಾದಾಗ, ಅದು ಇಮ್ಮಡಿ ಸಾಧನೆಯಾಗುವುದಿಲ್ಲವೆ? (ಒಂದು ಕಾಲದಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಸಹೃದಯ ವಿದ್ವಾಂಸ ಎಂ. ಕರೀಮುದ್ದೀನ್ ತಮ್ಮ 94ರ ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ. ಅವರಿಗೆ ಸರ್ಕಾರ ಅಥವಾ ಸಮಾಜ ಕೊಟ್ಟಿದ್ದೇನು!)

ಆತ್ಮಕಥೆ: ಈಚಿನ ಸಮಾರಂಭವೊಂದರಲ್ಲಿ ನಾನು "ಆತ್ಮಕಥೆ ಬರೆಯುವುದಿಲ್ಲ" ಎಂದು ಭರವಸೆ ಕೊಟ್ಟೆ. ಈಗ ಅದನ್ನು ಹಿಂತೆಗೆದುಕೊಂಡು, ಬರೆಯಬೇಕೆಂದಿದ್ದೇನೆ! ಆದಿ ಸಿದ್ಧವಾಗಿದೆ; ಮಧ್ಯಾಂತರಗಳದೇ ಅನುಮಾನ. (ಇತರ ಅನೇಕ ಕೃತಿಗಳಂತೆ ಅಪೂರ್ಣವಾಗಬಹುದೇ!)

ಸಾಧನೆ: ಬರಗಾಲದ ಘೋಷಣೆಯಂತೆ. ಆಗಲಿ, ಅದೂ ಒಂದು ಸಾಧನೆ! (ಗ್ಯಾರಂಟಿ?)

ಪೂಜೆ : ಚಳವಳಿಗಾರರು ಕಾವೇರಿ ಮಾತೆಯ ಪ್ರತಿಮೆಯನ್ನು ಪೂಜಿಸಿ, ಅಪ್ಪಿಕೊಂಡರಂತೆ! ಒಳ್ಳೆಯದು. ಸದ್ಯ ಯಾರೂ ಜೀವಂತ ಕಾವೇರಿಯನ್ನು ಅಪ್ಪಿಕೊಳ್ಳಲಿಲ್ಲವಲ್ಲ! (ಆಗ ಅವರಿಗೇ 'ಪೂಜೆ' ಯಾಗುತ್ತಿತ್ತು).

–ಸಿಪಿಕೆ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಕರುನಾಡಲ್ಲಿ 'ಕಾವೇರಿ'ದ ತಳಮಳ



ಯಾವುದೇ ವಿರೋಧಗಳಿಲ್ಲದೆ ಒಕ್ಕೊರಲ ದನಿಯಾಗಿ ನಾಡಿನಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬುವ ಒಂದೇ ಒಂದು ಹೋರಾಟವೆಂದರೆ ಅದು **ನೆಲ, ಜಲ, ಭಾಷೆಗೆ** ಸಂಬಂಧಪಟ್ಟ ಹೋರಾಟಗಳು. ಗೋಕಾಕ್ ಚಳುವಳಿ, ಕರ್ನಾಟಕದ ಏಕೀಕರಣ, ಕಾವೇರಿ ಜಲ ವಿವಾದ, ಸರೋಜಿನಿ ಮಹಿಷಿ ವರದಿ, ಶಾಸ್ತ್ರೀಯ ಭಾಷಾ ಸ್ಥಾನಮಾನದ ವಿಚಾರ–ಹೀಗೆ ಹತ್ತಾರು ಹೋರಾಟಗಳಲ್ಲಿ ಕರುನಾಡು ಒಂದಾಗಿದೆ. ಈಗ ಅಂಥದೇ ಒಂದು ವಿಷಯ ನಾಡಿನಾದ್ಯಂತ ಸದ್ದು ಮಾಡುತ್ತಿದೆ. ಈಗಾಗಲೇ ಸುಪ್ರೀಂಕೋರ್ಟ್ ನೀಡಿದ ತೀರ್ಪಿನನ್ವಯ ಕಾವೇರಿ ನೀರು ನಿರ್ವಹಣಾ ಮಂಡಳಿಯ ರಚನೆಯಾಗಿದೆ. ಕುಡಿವ ನೀರಿಗೆ, ಬೆಳೆವ ಪೈರಿಗೆ ಜೀವ ಜಲದಂತೆ ಹರಿಯುತ್ತಿದ್ದ ಕಾವೇರಿ ನದಿ ನೀರನ್ನು ಹಂಚಿಕೊಳ್ಳಲು ಕಾವೇರಿ ನೀರು ನಿರ್ವಹಣಾ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಆದರೆ ಅದರ ರೂಪುರೇಷೆಗಳಿಗೆ ಸುಪ್ರೀಂಕೋರ್ಟ್ ಈಗಾಗಲೇ ಒಂದು ಸ್ಪಷ್ಟ ರೂಪ ಕೊಟ್ಟು ಕಾರ್ಯ ಬಾಹುಳ್ಯದ ಹಂಚಿಕೆ ಮಾಡಿದೆ. ಆದರೆ ಮಳೆ ಬಾರದೇ ಕಾವೇರಿ ತುಂಬದೆ ಕಾವೇರಿ ಕೊಳ್ಳದಲ್ಲಿ ಕೋಲಾಹಲವೇ ಎದ್ದಿದೆ. ಕಾವೇರಿಯ ವಿಚಾರವೇ ಕಾವೇರಿಕೊಳ್ಳದ ಜನರಲ್ಲಿ ತಳಮಳ ಸೃಷ್ಟಿಸಿದೆ.

ಕಾವೇರಿ ಜಲ ವಿವಾದ ಇಂದೂ ನೆನ್ನೆಯದಲ್ಲ. ಕಾವೇರಿ ವಿವಾದ ಕುರಿತಂತೆ ಪುಸ್ತಕಗಳು, ವಿಚಾರ ಸಂಕಿರಣಗಳು, ಚಳುವಳಿಗಳು, ಹೋರಾಟಗಳು ಎಡೆಬಿಡದೆ ನಡೆದಿವೆ. ಇಂದು ಅದರ ಮುಂದುವರಿದ ಭಾಗ. ಕಾವೇರಿ ಮಕ್ಕಳ ದಣಿವು ಮತ್ತು ದುಡಿಮೆ ಎರಡಕ್ಕೂ ತಂಪೆರೆಯುವ ಜೀವನದಿ ಮೈದುಂಬಿ ಹರಿಯುತ್ತಿಲ್ಲ. ಸತತ 215 ವರ್ಷಗಳ ಕಾವೇರಿ ವಿವಾದದ ಕಾರಣಗಳು ಮತ್ತು ಸಮಸ್ಯೆಗಳ ಕುರಿತಂತೆ ಸುದೀರ್ಘ ಚರ್ಚೆಯ ಮಧ್ಯದಲ್ಲೇ ಮೇಕೆದಾಟು ನೀರಾವರಿ ಯೋಜನೆಗಳ ಬಗ್ಗೆ ಪ್ರತಿಯೊಬ್ಬರೂ ಯೋಚಿಸಲೇಬೇಕಾದ ಸಕಾಲವಿದು. ಕಾರಣ ಮಳೆ, ಮೈದುಂಬಿ ಹರಿವ ಹೊಳೆ, ಬೆಳೆ, ರೈತರ ಮುಖದಲ್ಲಿ ಹೊಸ ಕಳೆ ಇವುಗಳನ್ನೇ ನಿರೀಕ್ಷಿಸುತ್ತಾ ಬದುಕುವ ದಿನಗಳು ಇನ್ನು ಬರಲಾರವು. ನಿಸರ್ಗ ಮುನಿಸಿಕೊಂಡಿದೆ! ಮನುಷ್ಯ ನಿಸರ್ಗದ ಮುನಿಸಿಗೆ ಮುಂಜಾಗ್ರತೆಯಾಗಿ ಸದೃಢನಾಗದಿದ್ದರೆ ಮುಂದಿನ ದಿನಮಾನಗಳಲ್ಲಿ ಹೋರಾಟ ನಿರಂತರವೇ ಆಗಬಹುದು. ಅದಾಗಬಾರದು ಎಂದಾದರೆ ನಿಮಗೆ ಗೊತ್ತಿರಬೇಕು! ಬೆಂಗಳೂರಿನಿಂದ ನೂರು ಕಿಲೋಮೀಟರ್ ದೂರದಲ್ಲಿ ಕಾವೇರಿ ಹರಿಯುವ ಸುಂದರ ಪ್ರವಾಸಿ ತಾಣ ಮೇಕೆದಾಟು. ದಿನನಿತ್ಯ ನೂರಾರು ಪ್ರವಾಸಿಗರು ಇಲ್ಲಿ ಮಿಂದೆದ್ದು ಮೈಮರೆಯುತ್ತಾರೆ. ಇಂಥ ಮೇಕೆದಾಟುವಿನ ಕಾವೇರಿ ಕೊಳ್ಳದಲ್ಲಿ ಅಣೆಕಟ್ಟು ಕಟ್ಟುವ ಸಲುವಾಗಿ ಕರ್ನಾಟಕ ಸರ್ಕಾರದಿಂದ ಸ್ಥಳ ಪರಿಶೀಲನೆ ನಡೆಸಲಾಗಿತ್ತು. ಅದರ ಪರಿಪೂರ್ಣ ಯೋಜನಾ ವರದಿ ತಯಾರಿಸಲು (ಡಿಪಿಆರ್) ಜಾಗತಿಕ ಟೆಂಡರ್ ಕರೆದಿತ್ತು. ಸರ್ಕಾರ ಈ ಸಂಬಂಧ ಡಿ.ಪಿ.ಆರ್.ಗೆ 25 ಕೋಟಿ ರೂ. ಕೊಟ್ಟಿತ್ತು. ಅದರ ವರದಿ ಬಂದ ನಂತರವಷ್ಟೇ ಮೇಕೆದಾಟು ಅಣೆಕಟ್ಟು ಯೋಜನೆಯ ರೂಪುರೇಷೆಗಳು ಗೊತ್ತಾಗುತ್ತಿತ್ತು.

ಆದರೆ ಅದು ಗೊತ್ತಾಗುವ ಮುನ್ನವೇ ತಮಿಳುನಾಡಿನಲ್ಲಿ ರಾಜಕೀಯ ದೊಂಬರಾಟ ಶುರುವಾಗಿತ್ತು. ಅದು ಯಾವ ಮಟ್ಟಕ್ಕೆ ಹೋಗಿತ್ತು ಎಂದರೆ! ತಮಿಳ್ನಾಡಿನ ರೈತ ಸಂಘಟನೆಗಳು ತಮಿಳ್ನಾಡು ಬಂದ್‌ಗೆ ಕರೆಕೊಟ್ಟು ಸುಪ್ರೀಂಕೋರ್ಟಿನ ಮೆಟ್ಟಿಲೇರಿ ವಿನಾಕಾರಣ ತಗಾದೆ ತೆಗೆದಿದ್ದವು.

ಆದರೆ ಸುಪ್ರೀಂಕೋರ್ಟ್ ನೀಡಿದ ನೀರು ನಿರ್ವಹಣ ಮಂಡಳಿಯ ತೀರ್ಪಿನ ಬಗ್ಗೆ ಕರ್ನಾಟಕದ ಜನ ಏನು ಮಾಡಬೇಕು? ಈಗಾಗಲೇ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕಾವೇರಿ ನ್ಯಾಯ ಮಂಡಳಿಯ ತೀರ್ಪು ಬಂದಾಗಿದೆ. ಆ ತೀರ್ಪಿನ ಅನ್ವಯವೇ ಕರ್ನಾಟಕ ಪ್ರತಿವರ್ಷ ಅದರ ಪಾಲಿನ 192 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡುತ್ತಿದೆ. ನ್ಯಾಯಾಧೀಕರಣದ ತೀರ್ಪಿನಂತೆ ಅವರ ಪಾಲಿನ ನೀರು ಅವರಿಗೆ ಸಿಗುತ್ತಿದೆ ಎಂದ ಮೇಲೆ ಅದಕ್ಕೆ ಅವರ ಯಾವ ಅಭ್ಯಂತರವೂ ಇಲ್ಲ ಎಂದು ಅಂದುಕೊಳ್ಳುವ ಹಾಗಿಲ್ಲ! ಕಾರಣ ಕೆಲವೊಮ್ಮೆ ಮಾನ್ಸೂನ್ ಮಾರುತಗಳು ವಿಪರೀತವಾಗಿ ಬಿಸಿ ಪ್ರವಾಹದ ರೂಪದಲ್ಲಿ ಕಾವೇರಿ ಮೈದುಂಬಿ ಹರಿದುಬಿಡುತ್ತಾಳೆ. ಇಂಥ ಸಂದರ್ಭದಲ್ಲಿ ಉಂಟಾದ ನೀರಿನ ಅತಿಯಾದ ಸಂಗ್ರಹವನ್ನು ತಡೆದಿಟ್ಟುಕೊಳ್ಳಲಾಗದೆ ಆ ಹೆಚ್ಚುವರಿ ನೀರನ್ನು ಕೂಡ ಕರ್ನಾಟಕ ನದಿಗೆ ಬಿಡುತ್ತಿದೆ. ಆ ಹೆಚ್ಚುವರಿ ನೀರು ನೇರ ತಮಿಳ್ನಾಡಿನ ಮೆಟ್ಟೂರು ಡ್ಯಾಂ ಸೇರುತ್ತಿದೆ. ಈ ಹೆಚ್ಚುವರಿ ನೀರಿಗೆ ಯಾವ ಲೆಕ್ಕವೂ ಇಲ್ಲ ಬುಕ್ಕವೂ ಇಲ್ಲ. ನ್ಯಾಯಾಧೀಕರಣದ ತೀರ್ಪಿನಂತೆ ಅವರಿಗೆ 192 ಟಿ.ಎಂ.ಸಿ. ನೀರು ಸಿಕ್ಕುತ್ತಿದೆ. ನಾವು ಇಟ್ಟುಕೊಳ್ಳಲಾಗದೆ ಹರಿಸಿದ ಹೆಚ್ಚುವರಿ ನೀರಿನ ಬೋನಸ್ ಕೂಡ ಅವರಿಗೇ ದಕ್ಕುತ್ತಿದೆ. ಅಂದ ಮೇಲೆ ಹೆಚ್ಚುವರಿಯಾಗಿ ಹರಿಯುವ ಈ ನೀರಿನ ಪ್ರಮಾಣವೆಷ್ಟು? ಅದು ಎಲ್ಲಿಂದ ಎಲ್ಲಿಗೆ ಯಾವಾಗ ಹರಿಯುತ್ತದೆ ಎಂಬ ಲೆಕ್ಕ ಯಾರಿಗಿದೆ? ಅದರ ವಿಸ್ತೃತ ವರದಿಗಾಗಿಯೇ ಸರ್ಕಾರ ಟೆಂಡರ್ ಕರೆದಿತ್ತು. ಅದರ ಸವಿಸ್ತಾರ ವರದಿ ಬಂದ ನಂತರ ನಮ್ಮ ಹೆಚ್ಚುವರಿ ನೀರನ್ನು ನಮ್ಮಲ್ಲೇ ಶೇಖರಿಸಿಕೊಳ್ಳುವ ಸಲುವಾಗಿ ಕಾವೇರಿಕೊಳ್ಳದ ಮೇಕೆದಾಟುವಿನಲ್ಲಿ ಎರಡು ಅಥವಾ ಮೂರು ಚೆಕ್ ಡ್ಯಾಂಗಳನ್ನು ನಿರ್ಮಿಸಿ ಆ ಹೆಚ್ಚುವರಿ ನೀರನ್ನು ಬೆಂಗಳೂರು ನಗರ, ಹಾಗೂ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರಿನ ಪೂರೈಕೆಗಾಗಿ ಬಳಸುವ ಉದ್ದೇಶವಿತ್ತು, ಅದೇ ಮೇಕೆದಾಟು ಜಲ ಯೋಜನೆ.

ಈಗಿನ ಅಂದಾಜಿನ ಪ್ರಕಾರ ಹೆಚ್ಚುವರಿ ನೀರಿನ ಅಂದಾಜು ಪ್ರಮಾಣ ಸುಮಾರು 20 ಟಿ.ಎಂ.ಸಿ. ಈ ನೀರು ಮೂರು ಜಿಲ್ಲೆಗಳಿಗೆ ಕುಡಿಯಲು ಒಂದು ವರ್ಷಕ್ಕೆ ಸಾಕಾಗುತ್ತದೆ. ಹೀಗೆ ಶೇಖರಿಸಿದ ನೀರನ್ನೇ ಬೆಂಗಳೂರಿನ ತಿಪ್ಪಗೊಂಡನಹಳ್ಳಿ, ಚನ್ನಪಟ್ಟಣದ ಕಣ್ವ, ಹೆಸರಘಟ್ಟ, ಮಂಚನಬೆಲೆ ಮುಂತಾದ ಕೆರೆ ಮತ್ತು ಜಲಾಶಯಗಳಿಗೆ ತುಂಬಿಸಿ ವರ್ಷಪೂರ್ತಿ ಬಳಸಲು ಯೋಜನೆ ರೂಪಿಸಲಾಗಿತ್ತು. ಇವಿಷ್ಟೂ ಇನ್ನೂ ಆರಂಭದ ಪರಿಕಲ್ಪನೆಯಷ್ಟೇ. ಆದರೆ ಅಲ್ಲಿ ಇನ್ನೂ ಡ್ಯಾಂ ಅನ್ನೂ ಕಟ್ಟಲಿಲ್ಲ, ನೀರನ್ನೂ ಶೇಖರಿಸಲಿಲ್ಲ, ಅಷ್ಟರಲ್ಲಾಗಲೇ ತಮಿಳುನಾಡು ಕರುನಾಡಿನ ರೈತ ಮಕ್ಕಳ ಮೇಲೆ ಹೆಚ್ಚುವರಿ ನೀರಿನ ಶೇಖರಣೆಗಾಗಿ ರೂಪಿಸಿದ ಕಾವೇರಿ ವಿವಾದಕ್ಕೆ ನ್ಯಾಯ ಮಂಡಳಿ ಅಂತಿಮ ತೀರ್ಪು ಪ್ರಕಟಿಸುವ ಮುನ್ನ ನ್ಯಾಯ ಮಂಡಳಿಯ ಮುಂದೆ ಮೇಕೆದಾಟು ಯೋಜನೆ ಪ್ರಸ್ತಾಪವಾಗಿರಲಿಲ್ಲ ಎಂದು ಕೂಗೆಬ್ಬಿಸಿದರು. ಹಾಗಾಗಿ ಈ ಯೋಜನೆಯನ್ನು ಈಗ ಕೈಗೆತ್ತಿಕೊಂಡರೆ ನ್ಯಾಯ ಮಂಡಳಿಯ ತೀರ್ಪನ್ನು ಉಲ್ಲಂಘಿಸಿದಂತಾಗುತ್ತದೆ. ಮೇಲಾಗಿ ಕರ್ನಾಟಕ ಸರ್ಕಾರ ತಮಿಳುನಾಡಿಗೆ ಈ ಬಗ್ಗೆ ಮಾಹಿತಿ ನೀಡದೆ ಯೋಜನೆಯನ್ನು ಕೈಗೆತ್ತಿಕೊಂಡಿದೆ ಎಂಬುದು ಅವರ ಪ್ರಬಲ ಆಕ್ಷೇಪವಾಗಿತ್ತು. ನ್ಯಾಯ ಮಂಡಳಿ ತೀರ್ಪಿನ 13ನೇ ಪರಿಚ್ಛೇದದ ಪ್ರಕಾರ ತಗ್ಗು ಪ್ರದೇಶದ ಕೃಷಿಗೆ ಕೊರತೆಯಾಗದಂತೆ ನೀರು ಬಿಡಬೇಕು. ಈ ಯೋಜನೆ ಪೂರ್ಣಗೊಂಡರೆ ತಮಿಳ್ನಾಡಿನ ಕೃಷಿಗೆ ಜೂನ್‌ನಿಂದ ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ಬಿಡಬೇಕಾದ ನೀರಿಗೆ ಖೋತಾ ಆಗುವ ಸಾಧ್ಯತೆ ಇದೆ ಎಂಬುದು ಅವರ ವಾದ. ಈ ನೆಲೆಯಲ್ಲಿ ತಮಿಳ್ನಾಡಿಗೆ ನಿಸರ್ಗದತ್ತವಾಗಿ ಸೇರಬೇಕಾದ ಹೆಚ್ಚುವರಿ ನೀರನ್ನು ಕರ್ನಾಟಕ ಹಿಡಿದಿಟ್ಟುಕೊಂಡಂತಾಗುತ್ತದೆ, ಹಾಗೂ ಕರ್ನಾಟಕ ಈವರೆಗೂ ಹರಿಸಿರುವ ಹೆಚ್ಚುವರಿ ನೀರು ನೈಸರ್ಗಿಕವಾಗಿ ತಮಿಳುನಾಡಿಗೆ ಸೇರಬೇಕಾದ ಪಾಲೇ ಹೊರತು ಅದು ಕರ್ನಾಟಕ ಹೆಚ್ಚುವರಿಯಾಗಿ ಕೊಟ್ಟ ಕೊಡುಗೆಯೇನಲ್ಲ ಎಂಬಂತೆ ಅವರ ವಕೀಲರು ಸುಪ್ರೀಂಕೋರ್ಟ್‌ನಲ್ಲಿ ವಾದಿಸಿದರು. ಹೀಗೆ ಬೆಳೆಯುತ್ತಾ ಹೋಗಿವೆ ಅವರ ಆಕ್ಷೇಪಣೆಗಳು.

ಬಹಳ ಸೂಕ್ಷ್ಮವಾಗಿ ಗಮನಿಸಿದರೆ; ಕಾವೇರಿ ನ್ಯಾಯ ಮಂಡಳಿಯ ತೀರ್ಪಿನಂತೆ 192 ಟಿ.ಎಂ.ಸಿ ನೀರು ಕೊಟ್ಟ ಮೇಲೆ ನ್ಯಾಯ ಮಂಡಳಿಯ ತೀರ್ಪನ್ನು ಹೇಗೆ ಉಲ್ಲಂಘಿಸಿದಂತಾಗುತ್ತದೆ? ಮೇಲಾಗಿ ಕರ್ನಾಟಕ ಸರ್ಕಾರ ತನ್ನ ಜಲಾನಯನ ಯೋಜನೆಗಳ ಮಾಹಿತಿಗಳನ್ನು ನೆರೆಯ ತಮಿಳುನಾಡು ಸರಕಾರಕ್ಕೆ ನೀಡಲೇಬೇಕೆಂಬ ಷರತ್ತು ಮಧ್ಯಂತರ ತೀರ್ಪಿನಲ್ಲಿತ್ತೇ ವಿನಃ ಅಂತಿಮ ತೀರ್ಪಿನಲ್ಲಿ ಎಲ್ಲಿದೆ? ಅಂದ ಮೇಲೆ ಮಾಹಿತಿ ಕೊಡುವ ಅಗತ್ಯವಾದರೂ ಏನು? ಇನ್ನು 13ನೇ ಪರಿಚ್ಛೇದದ ಪ್ರಕಾರ ಜೂನ್‌ನಿಂದ ಸೆಪ್ಟೆಂಬರ್ ವರೆಗೆ ಕೊಡಬೇಕಾದ ನೀರಿನ ಬಾಕಿಗೆ ನಮ್ಮವರು ಯೋಚಿಸಬೇಕೇ ಹೊರತು ಅವರಲ್ಲ! ಮಳೆಯಾಗದೇನೆ ಬೆಳೆಯಾಗದೇನೆ ಭವಿಷ್ಯ ನುಡಿಯುತ್ತಾ ಆರೋಪಿಸುವುದು ಎಷ್ಟರ ಮಟ್ಟಿಗೆ ಸರಿ? ಕುಡಿಯುವ ನೀರಿಗೆ ತತ್ವಾರವಿದ್ದಾಗಲೂ ರಾತ್ರೋರಾತ್ರಿ ನದಿಗೆ ನೀರು ಬಿಟ್ಟು ಇವರ ಕೃಷಿಗೆ ನೀರು ಕೊಟ್ಟ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟಿವೆ.

ತಮಿಳುನಾಡಿನ ಈ ಯಾವ ವಾದದಲ್ಲೂ ಹುರುಳಿಲ್ಲ. ಅವರು ಹೇಳಲೇಬೇಕೆಂದು ಹೊರಟಿರುವುದು ಅವರ ಕೊನೆಯ ಆಕ್ಷೇಪಣೆಯಲ್ಲಿ ಸ್ಪಷ್ಟವಾಗಿದೆ. ಅದೇನೆಂದರೆ ನಿಸರ್ಗದತ್ತವಾಗಿ ತಮಿಳುನಾಡಿಗೆ ಸೇರಬೇಕಾದ ನೀರನ್ನು ಕರ್ನಾಟಕ ಹಿಡಿದಿಟ್ಟುಕೊಂಡಂತಾಗುತ್ತದೆ ಎಂಬುದೇ ಅವರ ನೇರ ಆಕ್ಷೇಪಣೆ. ಅಂದರೆ ಇಲ್ಲಿಯವರೆಗೂ ಬಿಟ್ಟ ಹೆಚ್ಚುವರಿ ನೀರು ಏನಿದೆ ಅದು ನೀವು ಇಟ್ಟುಕೊಳ್ಳಲಾಗದೆ ಕೆ.ಆರ್.ಎಸ್.ಡ್ಯಾಂನ ಸಂಗ್ರಹಣಾ ಸಾಮರ್ಥ್ಯದ ಕೊರತೆಯ ಕಾರಣದಿಂದ ಬಿಟ್ಟ ನೀರೇ ಹೊರತು ನೀವಾಗಿಯೇ ಬಿಟ್ಟ ನೀರಲ್ಲವೆಂಬುದು ಇಲ್ಲಿ ಗಮನಿಸಬೇಕಾದ ವಿಚಾರ. ಅದು ನಿಸರ್ಗದತ್ತವಾಗಿ ತಮಿಳ್ನಾಡಿಗೆ ಸೇರಬೇಕಾದ ಹೆಚ್ಚುವರಿ ನೀರಿನ ವಿಷಯವನ್ನು ಅವರ ಹಕ್ಕು ಎಂತಲೇ ಘೋಷಿಸಿ ತಮಿಳ್ನಾಡಿನ ರೈತಹೋರಾಟಗಾರರು, ಮೀಡಿಯಾ ಗಳು, ರಾಜಕಾರಣಿಗಳು ಒಂದು ಸಾರ್ವಜನಿಕ ಅಭಿಪ್ರಾಯವನ್ನೇ ರೂಪಿಸಿದವು.


ಆದರೆ ಈಗ ಸೆಪ್ಟೆಂಬರ್–ಅಕ್ಟೋಬರ್ ತಿಂಗಳ ನೀರಿನ ಕೋಟಾವನ್ನು ಕೇಳುತ್ತಿರುವ ತಮಿಳುನಾಡು ಕಾವೇರಿಕೊಳ್ಳದಲ್ಲಿ ಮಳೆಯಾಗದೆ ಕಾವೇರಿ ತುಂಬದೆ ಕುಡಿಯುವ ನೀರಿಗೂ ತತ್ವಾರವಾಗಿರುವ ಪರಿಸ್ಥಿತಿಯನ್ನು ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸುವಾಗ ಮಾನವೀಯ ಕನಿಕರಕ್ಕೂ ಯೋಚಿಸಲಿಲ್ಲ. ವಸ್ತುಸ್ಥಿತಿ ಕಣ್ಣಿಗೆ ಕಂಡಾಗಲೂ ಆಲೋಚಿಸಲಿಲ್ಲ. ವಿನಾಕಾರಣ ತಗಾದೆ ತೆಗೆದು ನೀರು ಕೇಳುವ ಪರಿಪಾಠ ಮುಂದುವರಿಸಿದೆ. ಹಾಗಾದರೆ ನದಿಯಲ್ಲಿ ನೀರಿದ್ದಾಗ ನ್ಯಾಯ ಮಂಡಳಿಯ ತೀರ್ಪಿಗೆ ಬದ್ಧರಾಗಿ 192 ಟಿ.ಎಂ.ಸಿ. ನೀರು ಕೊಟ್ಟ ಮೇಲೂ ಅಲ್ಲಿಯವರೆವಿಗೂ ಬಿಟ್ಟ 20 ಟಿ.ಎಂ.ಸಿ. ಹೆಚ್ಚುವರಿ ನೀರಿಗೆ ಲೆಕ್ಕ ಕೇಳದ ಕರ್ನಾಟಕ, ಈಗ ಸುಪ್ರೀಂಕೋರ್ಟ್ ನೀಡಿದ ನೀರು ನಿರ್ವಹಣಾ ಮಂಡಳಿಯ ರಚನೆ ಮತ್ತು ಷರತ್ತುಗಳಿಗೆ ಕರ್ನಾಟಕದ ಕಾವೇರಿಕೊಳ್ಳದ ಜನ ಹೇಗೆ ಪ್ರತಿಕ್ರಿಯಿಸಬೇಕು? ಅಷ್ಟಕ್ಕೂ ರಾಷ್ಟ್ರೀಯ ಜಲನೀತಿ ಕೂಡ ಕುಡಿಯುವ ನೀರಿಗೆ ಮೊದಲ ಆದ್ಯತೆ ಕೊಡುವುದರಿಂದ ಇದು ನ್ಯಾಯ ಸಮ್ಮತ ಹಾಗೂ ಕುಡಿಯುವ ನೀರಿನ ಜನಹಿತ. ಅಂದ ಮೇಲೆ ಕಾವೇರಿ ನೀರು ನಿರ್ವಹಣಾ ಮಂಡಳಿ ನದಿ ಪಾತ್ರದ ಕನ್ನಡದ ರೈತರ ಪರವಾಗಿ ಈಗಲೂ ಯೋಚಿಸಬಹುದಲ್ಲ! ಆದರೆ ಅದು ಸಾಧ್ಯವೇ? ಈ ಸಂಬಂಧ ಡಿ.ಪಿ.ಆರ್.ನ ಸಾದ್ಯಂತವಾದ ವರದಿ ಬಂದ ಮೇಲೆ ಸುಪ್ರೀಂ ಕೋರ್ಟ್ ಹಾಗೂ ನದಿ ಪ್ರಾಧಿಕಾರದ ಮುಂದೆ ಆ ವರದಿಯನ್ನು ಮಂಡಿಸಿ ಅದರ ಅನುಮೋದನೆ ಪಡೆದ ಮೇಲೆಯೇ ಮೇಕೆದಾಟು ಯೋಜನೆಯನ್ನು ಪ್ರಾರಂಭಿಸುತ್ತೇವೆಂದು ಕರ್ನಾಟಕ ಸ್ಪಷ್ಟವಾಗಿಯೇ ಹೇಳಿತ್ತು. ಆದಾಗ್ಯೂ ತಮಿಳುನಾಡು ಈ ಹಿಂದೆಯೇ ಆತುರಾತುರವಾಗಿ ಕಾವೇರಿ ಕ್ಯಾತೆಯನ್ನು ತೆಗೆದದ್ದು ಮಾತ್ರ ಪಕ್ಕಾ ರಾಜಕಾರಣವೇ ಹೊರತು ಬೇರೇನಲ್ಲ ಎಂಬುದು ಎಲ್ಲರಿಗೂ ಗೊತ್ತು!

ಇಡೀ ದೇಶಕ್ಕೇ ಗೊತ್ತಿರುವ ಹಾಗೆ ಕಾವೇರಿ ನದಿ ನೀರಿನ ಹಂಚಿಕೆಯ ವಿಷಯ ತಮಿಳುನಾಡಿನ ರಾಜಕಾರಣದಲ್ಲಿ ಅಧಿಕಾರಗಳನ್ನೇ ಹಸ್ತಾಂತರ ಮಾಡಿಕೊಂಡಿದೆ. ಇಂಥ ಸೂಕ್ಷ್ಮ ವಿಷಯಕ್ಕೆ ಕಾವೇರಿ ನ್ಯಾಯಾಧೀಕರಣ ತೀರ್ಪುಕೊಟ್ಟ ಮೇಲೆ ಆ ವಿವಾದ ಬಗೆಹರಿದಿತ್ತು ಎಂದುಕೊಳ್ಳುತ್ತಿರುವಾಗಲೇ ಈಗ ಮತ್ತೊಂದು ಸಂಕಷ್ಟ ಎದುರಾಗಿದೆ ಅದೇ ನೀರು ನಿರ್ವಹಣಾ ಮಂಡಳಿಯ ತೀರ್ಪು. ಹಾಗೆ ನೋಡಿದರೆ ಇದು ಕುಡಿಯುವ ನೀರಿನ ಯೋಜನೆ. ಕೃಷಿಗೆ 192 ಟಿ.ಎಂ.ಸಿ. ನೀರು ಕೊಟ್ಟರೆ, ಕುಡಿಯುವ ನೀರಿಗಾಗಿ ಚೆನ್ನೈ ಒಂದಕ್ಕೆ 5 ಟಿ.ಎಂ.ಸಿ. ನೀರನ್ನು ಕರ್ನಾಟಕ ಕೊಡಬೇಕು, ನಮ್ಮ ನೆರೆಯ ಆಂಧ್ರಪ್ರದೇಶ, ಕೃಷ್ಣಾ ನದಿಯ ನೀರು ಹರಿಸಲು ಮಡಕಶಿರಾದಿಂದ ತುಮಕೂರಿನ ಪಾವಗಡದ ಮಾರ್ಗದಲ್ಲಿ ಪೈಪ್‌ಲೈನ್ ಹಾಕಿದೆ. ಇದೇ ತಮಿಳುನಾಡು! ಕನ್ನಡಿಗರ ವಿರೋಧದ ನಡುವೆಯೂ ಹೊಗೇನಕಲ್‌ನಿಂದ ಕೃಷ್ಣಗಿರಿಗೆ ನೀರು ತೆಗೆದುಕೊಂಡು ಹೋಗಿದೆ. ಇಷ್ಟೆಲ್ಲಾ ನಡೆದರೂ ಇವರಿಗೆ ಕೊಡುವುದನ್ನು ಕೊಟ್ಟು ನಮ್ಮ ಕಾವೇರಿ ಜಲಾನಯನ ಪ್ರದೇಶದಲ್ಲಿ ನಮ್ಮ ನೀರಿಗೆ ನಾವು ಚೆಕ್‌ಡ್ಯಾಂ ಕಟ್ಟಿಕೊಂಡರೆ, ಇವರು ಆಕ್ಷೇಪಿಸುತ್ತಾರಲ್ಲ? ಹಾಗೆ ನೋಡಿದರೆ ಕಾವೇರಿ ವಿವಾದ ಇತ್ಯರ್ಥವಾಗುವ ಮೊದಲೇ ಚೆಕ್‌ಡ್ಯಾಂಗಳನ್ನು ನಿರ್ಮಿಸಿ ಕಿರು ಜಲವಿದ್ಯುತ್ ಯೋಜನೆಗಳನ್ನು ಪ್ರಾರಂಭಿಸಬೇಕೆನ್ನುವ ಪ್ರಸ್ತಾವನೆಯನ್ನು ಈ ಹಿಂದೆಯೇ ಮಂಡಿಸಲಾಗಿತ್ತು. ಬಿಳಿಗೊಂಡ್ಲು ಮಾಪನ ಕೇಂದ್ರಕ್ಕಿಂತ ಮುಂಚೆಯೇ ಸಿಗುವ ಜಾಗದಲ್ಲಿ ಎರಡು ಡ್ಯಾಂಗಳನ್ನು ನಿರ್ಮಿಸಿ ಅದರಿಂದ ಸುಮಾರು 500 ಮೆಗಾವ್ಯಾಟ್‌ನಷ್ಟು ವಿದ್ಯುತ್ ತಯಾರಿಸಿಕೊಂಡು ಆ ನೀರನ್ನು ನದಿಗೆ ಬಿಡುವ ಸದುದ್ದೇಶವಿತ್ತು. ಆದರೆ ತಮಿಳುನಾಡು ಆಗಲೇ ಪ್ರಾಧಿಕಾರದ ಮುಂದೆ ತಕರಾರು ಅರ್ಜಿ ಸಲ್ಲಿಸಿ 1996ರಲ್ಲೇ ನಮ್ಮ ಪ್ರಸ್ತಾವನೆಯನ್ನು ಬೀಳಿಸಿತ್ತು. ಹಾಗೆ ನೋಡಿದರೆ ಬಿಳಿಗೊಂಡ್ಲು ಮಾಪನ ಕೇಂದ್ರದಿಂದ ಮುಂದಕ್ಕೆ ಕಾವೇರಿ ಅಗಲವಾಗಿ ಹರಿಯುತ್ತಾಳೆ. ಅದು ತಮಿಳುನಾಡಿಗೆ ಲಾಭವೆ. ಆದರೆ ಅದೇ ತಮಿಳುನಾಡು 1998ರಲ್ಲಿ ಕರ್ನಾಟಕ ಹಾಗೂ ತಮಿಳ್ನಾಡಿನ ಆಯ್ದ ಗಡಿಭಾಗಗಳನ್ನು ಗುರುತಿಸಿ ಕರ್ನಾಟಕದ ಶಿವನಸಮುದ್ರ ಮೇಕೆದಾಟು, ತಮಿಳುನಾಡಿನ ರಾಸಿಮಲಾರ್, ಹೊಗೇನಕಲ್‌ಗಳಲ್ಲಿ ಜಲ ವಿದ್ಯುತ್ ಯೋಜನೆಗೆ ಪ್ರಸ್ತಾವನೆ ಸಲ್ಲಿಸಿತ್ತು. ಆದರೆ ಅವರು ಗುರುತಿಸಿದ ಸ್ಥಳಗಳು ಗಡಿಭಾಗದಲ್ಲಿ ಅದರಲ್ಲೂ ಕರ್ನಾಟಕಕ್ಕೆ ಸೇರಿದ ಪ್ರದೇಶಗಳು ಮುಳುಗಡೆಯಾಗುತ್ತಿದ್ದುದರಿಂದ ಈ ಯೋಜನೆಗೆ ಕರ್ನಾಟಕ ಕೂಡ ಆಕ್ಷೇಪಣೆ ಸಲ್ಲಿಸಿ ಅದನ್ನು ನಿಲ್ಲಿಸಿತ್ತು.

ಇದಕ್ಕೂ ಮೊದಲು ಸಿದ್ಧಪಡಿಸಿದ್ದ ಮೇಕೆದಾಟು ಚೆಕ್‌ಡ್ಯಾಂಗಳು 40/50 ಟಿ.ಎಂ.ಸಿ ಸಾಮರ್ಥ್ಯದ ಅಣೆಕಟ್ಟುಗಳ ಸ್ವರೂಪದಲ್ಲಿದ್ದವು. ಆದರೆ ಅದನ್ನು ನಿರ್ಮಿಸಿದರೆ 4500 ಎಕರೆ ಅರಣ್ಯ ಮುಳುಗಡೆಯಾಗಿ ಬಿಡುತ್ತಿತ್ತು. ಹಾಗಾಗಿಯೇ 10ರಿಂದ 20 ಟಿ.ಎಂ.ಸಿ. ಸಾಮರ್ಥ್ಯದ ಚೆಕ್ ಡ್ಯಾಂಗಳಿಗೆ ಅದನ್ನು ಇಳಿಸಲಾಯಿತು. ಆ ಜಾಗವನ್ನೂ ಉಳಿಸಿಕೊಂಡು, ತಮಿಳುನಾಡಿನ ಕೃಷಿಯ ಪಾಲನ್ನೂ ಕೊಟ್ಟುಕೊಂಡು 'ಸರ್ವೇ ಜನ ಸುಖಿನೋ ಭವಂತು' ? ಎಂಬಂತೆ ಈ ಯೋಜನೆ ರೂಪಿಸಿದರೆ ತಪ್ಪಾ? ಹಾಗೆ ನೋಡಿದರೆ, ನೈಸರ್ಗಿಕ ಸಂಪನ್ಮೂಲಗಳನ್ನು ಎಲ್ಲ ರಾಜ್ಯದ ಜನ ಲಭ್ಯತೆಯ ಆಧಾರದ ಮೇಲೆ ಕಾನೂನಿನ ಚೌಕಟ್ಟಿನಲ್ಲಿ ಪರಸ್ಪರ ಹೊಂದಾಣಿಕೆಯಿಂದ ಹಂಚಿಕೊಳ್ಳಬೇಕೆಂಬ ನಿಯಮವಿದೆ. ಆದರೆ ಇದು ಸರ್ವೋದಯದ ಕಾಲವಲ್ಲ; ವಿವಾದಗಳ ಕಾಲ, ಎಲ್ಲವನ್ನು ವಿವಾದ ಸೃಷ್ಟಿಸಿಕೊಂಡೇ ಪರಿಹರಿಸಿಕೊಳ್ಳುವ ಪರಿಸ್ಥಿತಿಯಲ್ಲಿರುವ ಕಾವೇರಿಕೊಳ್ಳದ ಜನತೆಗೆ ಈ ನೀರು ನಿರ್ವಹಣಾ ಮಂಡಳಿಯ ರಚನೆ ಒಂದು ತಗೊಂಡರೆ ಒಂದು ಫ್ರೀ ಎನ್ನುವ ಹಾಗೆ ಈಗ ಕಾವೇರಿಯ ಜೊತೆಗೆ ಕಬಿನಿಯನ್ನೂ, ಹೇಮಾವತಿಯನ್ನೂ, ಹಾರಂಗಿಯನ್ನೂ ಸೇರಿಸಿಕೊಂಡು ಹಿಡಿತ ಸಾಧಿಸಲು ಹೊರಟಿದೆ. ಹರಿಯೊ ನೀರಿಗೆ........ ಎನ್ನುವಂಥ ಪರಿಸ್ಥಿತಿ ನಮ್ಮದಾಗಿದೆ.

ನಮ್ಮ ಕೃಷ್ಣರಾಜಸಾಗರದ ಗರಿಷ್ಠ ಮಟ್ಟ 124 ಅಡಿ. ಆದರೆ 124 ಅಡಿ ಆಳವನ್ನು ಮೀಟರ್ ಇಟ್ಟು ಚೆಕ್ ಮಾಡಿದ್ದು ಯಾವಾಗ? ನಮ್ಮ ನೀರಾವರಿ ತಜ್ಞರೇ ಕೆ.ಆರ್.ಎಸ್‌ನಲ್ಲಿ ಸಾಕಷ್ಟು ಹೂಳು ತುಂಬಿದೆ. ಹೂಳು ತೆಗೆದರೆ ನೀರಿನ ಸಂಗ್ರಹ ಜಾಸ್ತಿಯಾಗುತ್ತೆ ಆ ಮೂಲಕ ಕರ್ನಾಟಕ ತಮಿಳ್ನಾಡು ಎರಡು ರಾಜ್ಯಗಳಿಗೂ ಅನುಕೂಲಗಳಿವೆ ಎಂದು ಹೇಳುತ್ತಾರೆ. ಆದರೆ ಹಾಗೆ ಆ ಹೂಳೆತ್ತಲು ಕರ್ನಾಟಕ ಸಿದ್ಧವಾದರೆ ಸಾಕು, ತಮಿಳ್ನಾಡಿನಲ್ಲೊಂದು ತಕರಾರು ಅರ್ಜಿ ರೆಡಿಯಾಗಿರುತ್ತದೆ. ಮೇಕೆದಾಟಿನಲ್ಲಿ ಆದದ್ದೂ ಅದೇ. ಕಾವೇರಿ ಕೊಳ್ಳದ ರೈತರು ರೈತರೇ! ತಮಿಳುನಾಡಿನ ರೈತರೂ ರೈತರೆ! ತಗ್ಗು ಪ್ರದೇಶಕ್ಕೆ ನೀರು ಬಿಟ್ಟ ಮೇಲೆ ಜಲಾಶಯಗಳ ಹೂಳೆತ್ತಿ ನೀರು ಸಂಗ್ರಹಿಸಿದರೆ ತಪ್ಪಾ? ಹರಿದುಹೋಗುವ ಹೆಚ್ಚುವರಿ ನೀರಿಗೆ ಚೆಕ್ ಡ್ಯಾಂ ಕಟ್ಟಿದರೆ ತಪ್ಪಾ? ಕಟ್ಟಿದ ಚೆಕ್ ಡ್ಯಾಂನಿಂದ ವಿದ್ಯುತ್ ಉತ್ಪಾದಿಸಿದರೆ ತಪ್ಪಾ? ಬೇಸಿಗೆಯಲ್ಲಿ ಕುಡಿವ ನೀರಿಗೆ ತತ್ವಾರವಾದಾಗ ದಾಹ ತೀರಿಸಿದರೆ ತಪ್ಪಾ?

ಕಾವೇರಿಯೆಂದರೆ ಕನ್ನಡನಾಡಿನ ಜನಕ್ಕೆ 'ಕನ್ನಡ ನಾಡಿನ ಜೀವನದಿ ಕಾವೇರಿ .... ಓಹೋಹೋ ಜೀವನದಿ ಕಾವೇರಿ ಈ ತಾಯಿಯೂ ನಕ್ಕರೆ, ಸಂತೋಷದಾ ಸಕ್ಕರೇ ಮಮತೆಯ ಮಾತೆಯೇ ಭಾಗ್ಯದಾ ದಾತೆಯೇ ಮಾಡುವೇ ಭಕ್ತಿಯ ವಂದನೇ .... ಕಾವೇರಿ ಹರಿವಳೂ ನಮ್ಮ ಮನೆಯ ಅಂಗಳದಲ್ಲಿ .... ಹೀಗೆ ಶಾಲಾ ಮಕ್ಕಳ ಬಾಯಲ್ಲಿ ಹಾಡಿಸುತ್ತಾ ಹಾಡಿಗೆ ಹೆಜ್ಜೆ ಹಾಕಿಸುತ್ತಾ ರಂಜನೆಯೊಂದಕ್ಕೇ ಸೀಮಿತವಾ ಕನ್ನಡ ಕುಲ? ಕಾವೇರಿಯ ನದಿ ಬಯಲಿನಲ್ಲಿ ಬದುಕು ಕಟ್ಟಿಕೊಂಡವರು ನಾವು. ಕಟ್ಟಿಕೊಂಡ ಗಂಡ ಅಗಸ್ತ್ಯರೇ ಕಾವೇರಿಯ ಹರಿವನ್ನ ತಡೆಯಲಾಗಲಿಲ್ಲ. ಮಕ್ಕಳ ಪ್ರೀತಿಗೆ ನಿಂತವಳು ಆ ತಾಯಿ, ಇದು ನಮ್ಮಲ್ಲಿ ಭಾವನಾತ್ಮಕ ವಿಷಯವಾಗಿ ಬದಲಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ನೀರು ನಿರ್ವಹಣೆಯ ಒಪ್ಪಂದಗಳು, ಆದೇಶಗಳು, ಸೂಚನೆಗಳು ಆಯಾಯ ಕಾಲಕ್ಕೆ ನಿಸರ್ಗದ ನಿಯಮಗಳಂತೆ ನೀರಿನ ಲಭ್ಯತೆ ಆಧರಿಸಿ ಬದಲಾಗಬೇಕಾಗುತ್ತದೆ. ಆದರೆ ಈವತ್ತಿನ ಪರಿಸ್ಥಿತಿ ಹಾಗಿಲ್ಲ. ನೀರಿಲ್ಲದೆ ಬರದ ಛಾಯೆ ಆವರಿಸಿರುವ ಕಾವೇರಿ ಕೊಳ್ಳದ ಬದುಕಿಗೆ ಕೊಳ್ಳಿ ಇಡುವ ಪರಿಸ್ಥಿತಿ ಎದುರಾಗಿದೆ. ಪ್ರಾಧಿಕಾರದ ತೀರ್ಪಿನ ವಿರುದ್ಧ ಈಗ ಎಲ್ಲೆಡೆ ಜನಾಂದೋಲನವಾಗುತ್ತಿದೆ. ಇಂಥಾ ಪ್ರಸಂಗಗಳು ಎದುರಾದಾಗಲೆಲ್ಲ ಮಾನವಪರ ಆಲೋಚನೆ ಇದ್ದವರೆಲ್ಲಾ ಪಕ್ಷಭೇದ ಮರೆತು ಎಲ್ಲಾ ನಾಯಕರೂ, ಸಾರ್ವಜನಿಕರು, ರೈತರು, ಚಳುವಳಿಗಾರರು, ಕಾವೇರಿಕೊಳ್ಳದ ರೈತರ ಪರ, ನೀರಿನ ಪರ, ನ್ಯಾಯದ ಪರವೇ ನಿಲ್ಲಬೇಕು! ಇದು ನೀರಿನ ವಿಷಯ, ಯಾರೂ ಇಲ್ಲಿ ಚೌಕಾಶಿ ಮಾಡಬಾರದು. ಏನಂತೀರಿ?



ಮೈಸೂರು ನಗರದಲ್ಲಿ ಸೋಮವಾರ ವಿಶ್ವ ಫಾರ್ಮಸಿಸ್ಟ್ ದಿನದ ಪ್ರಯುಕ್ತ ಸುವರ್ಣ ಕರ್ನಾಟಕ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಹಾಗೂ ಮೈಸೂರು ಡಿಸ್ಟ್ರಿಕ್ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಫಾರ್ಮಾ ವಾಕಥಾನ್ 2023ಕ್ಕೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಚಾಲನೆ ನೀಡಿದರು. ಸಮಾಜ ಸೇವಕರೂ ಆದ ರಘುಲಾಲ್ ಫಾರ್ಮಸ್ಸಿ ಕಂಪನಿ ಮಾಲೀಕ ಎನ್.ರಾಘವನ್, ಮೈಸೂರು ಡಿಸ್ಟ್ರಿಕ್ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಮಂಜುನಾಥ್ ಇತರರು ಉಪಸ್ಥಿತರಿದ್ದರು.

ಚುನಾವಣಾ ಅಫಿಡವಿಟ್‌ನಲ್ಲಿ ತಪ್ಪು ಮಾಹಿತಿ: ಶಾಸಕ ಸತೀಶ್ ಸೈಲ್ ವಿರುದ್ಧ ದೂರು ದಾಖಲು


ಬೆಂಗಳೂರು: ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆ ವೇಳೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಕೆಲ ಆಸ್ತಿ ವಿವರಗಳನ್ನು ಮರೆಮಾಚಿದ್ದಾರೆ ಎಂಬ ಆರೋಪದ ಮೇಲೆ ಕಾರವಾರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ. ಬೆಂಗಳೂರಿನ ಶೇಷಾದ್ರಿಪುರಂ ನಿವಾಸಿ ಶ್ರೀನಿವಾಸ ಎಂಬುವವರು ಈ ಸಂಬಂಧ ಚುನಾವಣಾ ಆಯೋಗಕ್ಕೆ ಸೆ.20ರಂದು ದೂರು ದಾಖಲಿಸಿದ್ದಾರೆ. ದೂರುದಾರರ ಪ್ರಕಾರ, ಸತೀಶ್ ಸೈಲ್, ಅವರ ಪತ್ನಿ ಕಲ್ಪನಾ ಒಡೆತನದಲ್ಲಿರುವ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿ. ಕಂಪನಿ ಕುರಿತು ಯಾವುದೇ ಮಾಹಿತಿಯನ್ನು ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ. ಅಲ್ಲದೆ, ಅಫಿಡವಿಟ್‌ನಲ್ಲಿ ಕಂಪನಿಯ ಬ್ಯಾಂಕ್ ವಹಿವಾಟುಗಳನ್ನು ನಮೂದಿಸದಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ದೂರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಲ್ಲಿ ನಡೆದ ಜನತಾ ದರ್ಶನದಲ್ಲಿ ಮುಖ್ಯಮಂತ್ರಿಯ ತವರು ಜಿಲ್ಲೆಯ ಅಧಿಕಾರಿಗಳಿಂದ ನಲುಗಿದ ಜನರ ಗೋಳು

ಸರ್ಕಾರಿ ಕಚೇರಿಗೆ ಅಲೆದು... ಅಲೆದು... ನಮ್ಮದೊಂದು ರೀತಿ 'ತಬರನ ಕಥೆ'! ಮನವಿ ಹೋಗಲಿ ಕೋರ್ಟ್ ಆದೇಶಕ್ಕೂ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ!! ಜನತಾ ದರ್ಶನದಲ್ಲೂ 'ಪ್ರಭಾವ' ನಡೆಯುತ್ತೆ!!!

ಅಧಿಕಾರಿಗಳಿಗೆ ಸ್ವಲ್ಪವೂ ಕನಿಕರವಿಲ್ಲವೆ; ದೇಶಸೇವೆ ಮಾಡಿದ ಸೈನಿಕರಿಗೂ ಗೌರವವಿಲ್ಲವೆ; 40 ವರ್ಷವಾದರೂ ಬಗೆಹರಿಯದ ಹಲವಾರು ಸಮಸ್ಯೆ; ತಾಳಿ, ಓಲೆ ಗಿರವಿ ಇಟ್ಟು ಸರ್ಕಾರದ ಸವಲತ್ತು ಪಡೆಯುವ ದುರ್ಗತಿ!



ನಮ್ಮ ಸಮಸ್ಯೆ ಬಗೆಹರಿಯದಿದ್ರೆ ನಿಮ್ಮ ಆಫೀಸ್‌ಗೆ ಬಂದು ಧರಣಿ ಕೂರ್ತೇವೆ...!

ಮೈಸೂರಿನ ವಿಕಲಚೇತನರ ಶಾಲೆಯಲ್ಲಿ ಶತಮಾನೋತ್ಸವ ಭವನ ನಿರ್ಮಾಣ ಮಾಡಿ 20 ವರ್ಷವಾದರೂ ಬಳಕೆಯಾಗಿಲ್ಲ. ಜೊತೆಗೆ ಶಾಲಾ ಆವರಣ ಅನೈತಿಕ ಚಟುವಟಿಕೆಯ ತಾಣವಾಗಿದೆ. ಇದೂ ಸೇರಿದಂತೆ ನಮ್ಮ ಹಲವು ಸಮಸ್ಯೆಗಳು ಬಗೆಹರಿದಿಲ್ಲ ಎಂದು ವಿಕಲಚೇತನರಾದ ಸರಿತಾ ದೂರಿದರು.

ಕೂರಿ... ಕೂರಿ... ಮುಂದಿನ ಎಲೆಕ್ಷನ್‌ನಲ್ಲಿ ನನ್ನ ಸೋಲಿಸಿ...!

ನಗರಪಾಲಿಕೆ ವತಿಯಿಂದ ಕಾಂಪೌಂಡ್ ನಿರ್ಮಾಣ ಮಾಡಿ. ಶತಮಾನೋತ್ಸವ ಭವನ ಬಳಕೆ ಮಾಡಿ ಎಂದು ಡಾ.ಮಹದೇವಪ್ಪ ನಗರ ಪಾಲಿಕೆ ಆಯುಕ್ತ ಡಾ.ಅಶಾದ್ ಉರ್ ರೆಹಮಾನ್ ಷರೀಫ್‌ಗೆ ಆದೇಶಿಸಿದರು. ಇನ್ನು ಹಲವು ಸಮಸ್ಯೆಗಳಿದ್ದು, ಮನವಿ ನೀಡಿದ್ದೇವೆ. ಕೂಡಲೇ ಸಮಸ್ಯೆ ಪರಿಹಾರ ಮಾಡದಿದ್ದರೆ ನಿಮ್ಮ ಆಫೀಸ್‌ಗೆ ಬಂದು ಕೂರುತ್ತೇವೆ ಎಂದು ಸರಿತಾ ಎಚ್ಚರಿಕೆ ನೀಡಿದರು.

'ನಮ್ಮ ಆಫೀಸ್‌ಗೆ ಬಂದು ಕೂರುತ್ತೀರಾ ಕೂರಿ. ಬೇಕಾದ್ರೆ ಮುಂದಿನ ಎಲೆಕ್ಷನ್‌ನಲ್ಲಿ ನನ್ನ ಸೋಲಿಸಿ' ಎಂದು ಡಾ.ಮಹದೇವಪ್ಪ ಈ ವೇಳೆ ನಗುತ್ತಾ ಸವಾಲು ಹಾಕಿದರು.

ಸೈನಿಕನನ್ನು ಸತಾಯಿಸುತ್ತಿರುವ ಅಧಿಕಾರಿಗಳಿಗೆ ಸಚಿವರ ತರಾಟೆ

ಸೇನೆಯಲ್ಲಿ ಸೇವೆ ಸಲ್ಲಿಸಿರುವ ನನಗೆ ಸರ್ಕಾರದಿಂದ ಆಶ್ರಯ ಮನೆ ಮಂಜೂರಾಗಿದೆ. ಆದರೆ ಮನೆ ನೀಡದೆ ಅಧಿಕಾರಿಗಳು ಸತಾಯಿಸುತ್ತಿದ್ದಾರೆ ಎಂದು ಕಡಕೊಳ ವಾಸಿ ಸಿದ್ದಣ್ಣಯ್ಯ ಎಂಬುವರು ನೋವು ತೋಡಿಕೊಂಡರು.

ಜಮ್ಮು ಮತ್ತು ಕಾಶ್ಮೀರದಲ್ಲಿ ನಮ್ಮ ಯೋಧರು ದೇಶ ರಕ್ಷಣೆ ಮಾಡುತ್ತಿದ್ದಾರೆ. ಲಡಾಕ್ ಸೇರಿದಂತೆ ಇತರೆಡೆ ಆಕ್ಸಿಜನ್ ಕೂಡ ಸಿಗುವುದಿಲ್ಲ. ನಮ್ಮ-ನಿಮ್ಮಂತಹವರು ಅಲ್ಲಿ ಹೋದರೆ ವಾರಕ್ಕೆ ಸತ್ತು ಹೋಗುತ್ತೇವೆ. ಅಂತಹ ಸ್ಥಳದಲ್ಲಿ ಯೋಧರು ಜೀವ ಮುಡುಪಾಗಿಟ್ಟು ದೇಶ ಸೇವೆ ಮಾಡುತ್ತಿದ್ದಾರೆ. ಇಂತಹ ಯೋಧರನ್ನು ಸತಾಯಿಸುತ್ತಿದ್ದೀರಲ್ಲ ಎಂದು ಡಾ.ಮಹದೇವಪ್ಪ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಮಾಜಿ ಸೈನಿಕರ ಬಗ್ಗೆ ಗೌರವ ಇರಬೇಕು, ಇವರಿಗೆ ಕೂಡಲೇ ಮನೆ ನೀಡಿ ಎಂದು ಅಧಿಕಾರಿಗಳಿಗೆ ಈ ವೇಳೆ ತಾಕೀತು ಮಾಡಿದರು. ಬಡ ಜನರು ತಾಳಿ, ಓಲೆ ಗಿರವಿ ಇಟ್ಟು ಸರ್ಕಾರದ ಸವಲತ್ತು ಪಡೆಯುವ ನಿದರ್ಶನಗಳನ್ನು ನೋಡಿದ್ದೇವೆ. ಮುಂದೆ ಇಂತಹ ಸಂದರ್ಭಕ್ಕೆ ಅವಕಾಶ ನೀಡದೆ ಜನಸಾಮಾನ್ಯರ ಸಮಸ್ಯೆ ಪರಿಹಾರ ಮಾಡಿ ಎಂದು ಉಸ್ತುವಾರಿ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರು, ಸೆ.25(ಬಿಎಲ್‌ಯು)– **ಸರ್ಕಾರಿ ಕಚೇರಿಗೆ ಅಲೆದು... ಅಲೆದು... ನಮ್ಮದೊಂದು ರೀತಿ ತಬರನ ಕಥೆಯಾಗಿದೆ; ಅಧಿಕಾರಿಗಳಿಗೆ ಮನವಿ ಕೊಟ್ಟು ಸುಸ್ತಾಗಿದ್ದೇನೆ; ಕೈ ಮುಗಿತೀನಿ ನನಗೆ ಮನೆ ಬೇಡ ನಾನು ಕಟ್ಟಿರುವ ದುಡ್ಡು ವಾಪಸ್ಸು ಕೊಡಿಸಿ ಸಾಕು; ಕೋರ್ಟ್ ಆದೇಶಕ್ಕೂ ಈ ನಿಮ್ಮ ಅಧಿಕಾರಿಗಳು ಕಿಮ್ಮತ್ತು ಕೊಡುತ್ತಿಲ್ಲವಲ್ಲ ಸ್ವಾಮಿ; ಜನತಾ ದರ್ಶನದಲ್ಲೂ ಪ್ರಭಾವ ನಡೆಯುತ್ತೆ ನಮ್ಮ ಸಮಸ್ಯೆ ಬಗಹರಿದಿಲ್ಲ ಅಂದ್ರೆ ನಿಮ್ಮ ಆಫೀಸ್‌ಗೆ ಬಂದು ಕೂರುತ್ತೇವೆ; ರಸ್ತೆಗಳೇ ಮಾಯ, ಕಾಲುವೆಗಳನ್ನೇ ನುಂಗಿದ್ದಾರೆ; ದೇಶ ರಕ್ಷಣೆ ಮಾಡಿದ ಯೋಧರಿಗೂ ಅಧಿಕಾರಿಗಳು ಸತಾಯಿಸ್ತವ್ರೆ; ತಾಳಿ, ಓಲೆ ಗಿರವಿ ಇಟ್ಟು ಸರ್ಕಾರದ ಸವಲತ್ತು ಪಡೆಯುವ ದುರ್ಗತಿ!!!**

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮ್ಮುಖದಲ್ಲಿ ನಡೆದ ಜನತಾ ದರ್ಶನದಲ್ಲಿ ಜನಸಾಮಾನ್ಯರ ಗೋಳಿದು. ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯತ್ರಿ ಸೇರಿದಂತೆ ವಿವಿಧ ಇಲಾಖಾ ಜಿಲ್ಲೆಯ ಅಧಿಕಾರಿಗಳು ಭಾಗಿಯಾಗಿದ್ದ ಜನತಾ ದರ್ಶನದಲ್ಲಿ ಸಮಸ್ಯೆಗಳ ಸರಮಾಲೆಯನ್ನೇ ಜನರು ಬಿಚ್ಚಿಟ್ಟರು.

40 ವರ್ಷದಿಂದ ಬಗೆಹರಿಯದ ನಮ್ಮ ಸಮಸ್ಯೆಗಳನ್ನು ಈಗಲಾದರೂ ಪರಿಹರಿಸಿ ಎಂದು ಅಂಗಲಾಚಿದರು. ನಮ್ಮ ಸಣ್ಣಪುಟ್ಟ ಸಮಸ್ಯೆಗಳನ್ನು ಅಧಿಕಾರಿಗಳು ಬಗಹರಿಸದೆ ಅಲೆಸುತ್ತಿದ್ದಾರೆ ಎಂಬ ಆಕ್ರೋಶವೂ ವ್ಯಕ್ತವಾಯಿತು.

ಹಿರಿಯ ನಾಗರಿಕರು, ಅಂಗವಿಕಲರು, ಮಹಿಳೆಯರು ವರ್ಷಾನುಗಟ್ಟಲೆ ಸರ್ಕಾರಿ ಕಚೇರಿಗೆ ಅಲೆದು ಅಲೆದೆ ಬೇಸತ್ತಿರುವುದು ಬಯಲಾಯಿತು. ಜನರನ್ನು ಇಷ್ಟೊಂದು ಅಯ್ಯೋ ಅನ್ನಿಸಿರುವ ಅಧಿಕಾರಿಗಳಿಗೆ ಕಿಂಚಿತ್ತಾದರೂ ಕರುಣೆ ಇಲ್ಲವೆ, ಹಾಗಾದರೆ ಸರ್ಕಾರ ಕಣ್ಮುಚ್ಚಿ ಕುಳಿತಿದೆಯೇ ಎಂಬ ಪ್ರಶ್ನೆ ಎದುರಾಯಿತು.

ಮನೆ ಇರಲಿ ಪತಿಗೆ ಚಿಕಿತ್ಸೆ ಕೊಡಿಸಬೇಕು ನನ್ನ ದುಡ್ಡು ಕೊಡಿಸಿ: ಆಶ್ರಯ ಯೋಜನೆಯಲ್ಲಿ ನನಗೆ ಮನೆ ಮಂಜೂರಾಗಿದೆ. ಈಗಾಗಲೇ 25 ಸಾವಿರ ರೂಪಾಯಿ ಪಾವತಿಸಿದ್ದೇನೆ. ಈಗ ನನ್ನ ಪತಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದು, ಉಳಿದ 50 ಸಾವಿರ ಪಾವತಿ ಮಾಡಲು ಸಾಧ್ಯವಿಲ್ಲ. ಈಗ ನಾನು ಕಟ್ಟಿರುವ 25 ಸಾವಿರ ರೂ. ವಾಪಸು ಕೊಡುವಂತೆ ನಗರಪಾಲಿಕೆಗೆ ಅಲೆದು ಅಲೆದು ಸಾಕಾಗಿದೆ. ನೀವಾದರೂ ಹೇಳಿ ಸ್ವಾಮಿ, ನಾನು ಪಾವತಿ ಮಾಡಿರುವ ಹಣ ಕೊಡಿಸಿಕೊಡಿ ಎಂದು ರಾಧಾಮಣಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಬಳಿ ಗೋಗರೆದರು.

ಈ ಸಂಬಂಧ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಡಾ.ಮಹದೇವಪ್ಪ, ಕೂಡಲೇ ಆಕೆ ಪಾವತಿ ಮಾಡಿರುವ ಹಣ ಕೊಡಿಸಿ ಎಂದು ಆದೇಶ ನೀಡಿದರು. ಹೇಗಾದರೂ ಮಾಡಿ 50 ಸಾವಿರ ಪಾವತಿ ಮಾಡಿ ಮನೆಯನ್ನೇ ಕೊಡಿಸುತ್ತೇನೆ ಎಂದು ಡಾ.ಮಹದೇವಪ್ಪ ರಾಧಾಮಣಿಗೆ ಸಲಹೆ ನೀಡಿದರು. ಆದರೆ, ನಾನು ಕಟ್ಟಿರುವ 25 ಸಾವಿರ ಕೊಡಲು ಇಷ್ಟು ದಿನ ಅಲೆಸಿದ್ದಾರೆ. ಇನ್ನು ಮನೆ ಕೊಡುತ್ತಾರೆ ಎಂಬುದು ಯಾವ ಗ್ಯಾರಂಟಿ. ನನಗೆ ಅಲೆದು ಅಲೆದು ಸಾಕಾಗಿ ಹೋಗಿದೆ. ಮನೇನೂ ಬೇಡ, ಏನೂ ಬೇಡ, ನಾನು ಕಟ್ಟಿರುವ ಹಣ ಕೊಡಿಸಿ ಸಾಕು ಎಂದು ಆಕೆ ಗೋಗರೆದರು.

ನನ್ನದು 'ತಬರನ ಕಥೆ' ಸ್ವಾಮಿ: ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆ ನಿರ್ಮಿಸಿಕೊಡುವ ಯೋಜನೆಗೆ ನನ್ನ ನಿವೇಶನ ಆಯ್ಕೆಯಾಗಿದೆ. ಇದಕ್ಕಾಗಿ ನನ್ನ ಬಾಬ್ತು ಹಣ ಕೂಡ ಪಾವತಿ ಮಾಡಿದ್ದೇನೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ಮನೆ ನಿರ್ಮಾಣ ಮಾಡಿಕೊಟ್ಟಿಲ್ಲ. ನಾನು ಪಾವತಿ ಮಾಡಿರುವ ಹಣವನ್ನು ಕೊಟ್ಟಿಲ್ಲ. ಕೊಳಚೆ ನಿರ್ಮೂಲನಾ ಮಂಡಳಿಗೆ ಅಲೆದು ಅಲೆದು ನನ್ನದು 'ತಬರನ ಕಥೆ'ಯಾಗಿದೆ ಸ್ವಾಮಿ. ನೀವು ಸಚಿವರಿದ್ದೀರಾ, ಅಧಿಕಾರಿಗಳಿಗೆ ಆದೇಶ ಮಾಡಿ ನನ್ನ ಹಣವನ್ನು ನನಗೆ ಕೊಡಿಸಿ ಎಂದು ಅಶೋಕ ಪುರಂ ವಾಸಿ ವೆಂಕಟಸ್ವಾಮಿ ಪರಿಪರಿ ಮನವಿ ಮಾಡಿದರು.

ಈ ಸಂಬಂಧ ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿಗಳನ್ನು ಕರೆದು ಡಾ.ಮಹದೇವಪ್ಪ ವಿವರ ಕೇಳಿದರು. ವೆಂಕಟಸ್ವಾಮಿ ಪಾವತಿ ಮಾಡಿರುವ ಹಣ ವಾಪಸು ನೀಡಲು ಮುಖ್ಯ ಕಚೇರಿಗೆ ಕಡತ ಕಳುಹಿಸಲಾಗಿದೆ ಎಂದು ಆ ಅಧಿಕಾರಿ ಸ್ಪಷ್ಟನೆ ನೀಡಿದರು. ನೋಡಪ್ಪಾ, ನೀನು ಹಣ ವಾಪಸು ತೆಗೆದುಕೊಳ್ಳಬೇಡ, ಮನೆ ನಿರ್ಮಾಣ ಮಾಡಿ ಕೊಡುವಂತೆ ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಆದೇಶ ನೀಡುತ್ತೇನೆ ಎಂದು ಡಾ.ಮಹದೇವಪ್ಪ ಭರವಸೆ ನೀಡಿದಾಗ, "ಬೇಡ ಸ್ವಾಮಿ, ನಾನು ಕಟ್ಟಿರುವ ಹಣ ಕೊಡಲು ಇಷ್ಟು ಸತಾಯಿಸಿದ್ದಾರೆ. ಇನ್ನು ಮನೆ ಕಟ್ಟಿ ಕೊಡಲು ಎಷ್ಟು ವರ್ಷವಾಗುತ್ತೊ ಗೊತ್ತಿಲ್ಲ. ದಯವಿಟ್ಟು ನಾನು ಪಾವತಿ ಮಾಡಿರುವ ಹಣ ವಾಪಸು ಕೊಡಿಸಿ ಸಾಕು" ಎಂದು ವೆಂಕಟಸ್ವಾಮಿ ಮನವಿ ಮಾಡಿದರು.

ನೋಡಪ್ಪಾ ಮನೆ ಕಟ್ಟುವುದು ಒಂದು ಕನಸು, ನಾನು ಆದೇಶ ಮಾಡಿ ಬೇಗ ಮನೆ ಕಟ್ಟಿಸಿಕೊಡಿಸುತ್ತೇನೆ ಎಂದು ಭರವಸೆ ನೀಡಿದಾಗ, ವೆಂಕಟಸ್ವಾಮಿ ಅದಕ್ಕೆ ಸಮ್ಮತಿಸಿದರು.

ಮುಂದಿನ ಸೋಮವಾರವೇ ಮನೆ ನಿರ್ಮಾಣ ಕಾರ್ಯ ಆರಂಭಿಸಬೇಕು ಎಂದು ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜನತಾ ದರ್ಶನದಲ್ಲೂ ಪ್ರಭಾವ: ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ವೆಂಕಟೇಶ್ ಎಂಬುವರು ಈ ವೇಳೆ ಸಲ್ಲಿಸಿದ ಮನವಿ ಪತ್ರ ಹಾಗೂ ಟೋಕನ್ ನಂಬರ್ ನೋಡಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರೇ ಆಶ್ಚರ್ಯ ಚಕಿತರಾದರು. ಜನತಾ ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತು ಮನವಿ ಸಲ್ಲಿಸುವವರಿಗೆ ಟೋಕನ್ ನೀಡಲಾಗಿತ್ತು. ಹಿರಿಯ ನಾಗರಿಕರು ಹಾಗೂ ವಿಕಲಚೇತನರಿಗೆ ಮೊದಲ ಆದ್ಯತೆ. ನಂತರ ಉಳಿದವರಿಗೆ ಅವಕಾಶವಿತ್ತು. ಆದರೆ ಡಾ.ವೆಂಕಟೇಶ್ ಅವರ ಟೋಕನ್ ನೂರರ ಗಡಿ ದಾಟಿದ್ದರೂ ಪ್ರಭಾವ ಬಳಸಿ 22ರ ಒಳಗೆ ನುಸುಳಿದ್ದರು. ಇದನ್ನು ಗಮನಿಸಿದ ಡಾ.ರಾಜೇಂದ್ರ, "ಅಲ್ಲಾ ರೀ, ನೀವು ಜವಾಬ್ದಾರಿ ಸ್ಥಾನದಲ್ಲಿದ್ದೀರಾ, ಹೀಗೆ ಪ್ರಭಾವ ಬಳಸಿ ಓವರ್‌ಟೇಕ್ ಮಾಡಿಕೊಂಡು ಬರಬಹುದೇ" ಎಂದು ಖಾರವಾಗಿಯೇ ಪ್ರಶ್ನಿಸಿದರು.



ಆದರೆ ಜನತಾ ದರ್ಶನದಲ್ಲೇ ಪ್ರಭಾವ ಬಳಸಿ ಬಂದಿದ್ದೀರಾ ಅಂದರೆ, ಇನ್ನು ನಿಮ್ಮ ಅಹವಾಲಿನಲ್ಲಿ ಯಾವ ರೀತಿಯ ಪ್ರಭಾವ ಬೀರಿರಬಹುದು ಎಂದು ಮರು ಪ್ರಶ್ನಿಸಿದರು. ಇದರಿಂದ ಮುಜುಗರಕ್ಕೀಡಾದ ಡಾ.ವೆಂಕಟೇಶ್, ಏನು ಹೇಳಬೇಕು ಅಂತ ತಿಳಿಯದೆ ಪರದಾಡಿದರು. ಇರಲಿ ಬಿಡಿ, ಮುಂದೆ ಹೀಗೆ ಮಾಡಬೇಡಿ ಎಂದು ಆ ವಿಷಯವನ್ನು ಅಷ್ಟಕ್ಕೆ ಕೈಬಿಟ್ಟ ಡಿಸಿ ಡಾ.ರಾಜೇಂದ್ರ ಅವರು ನಿಮ್ಮ ಸಮಸ್ಯೆ ಏನು ಅಂತ ಕೇಳಿದರು.

ಹುಣಸೂರು ಬಳಿ ಇರುವ ನಮ್ಮ ಜಮೀನಿನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಎಸಿ ಕೋರ್ಟ್, ಡಿಸಿ ಕೋರ್ಟ್ ಹಾಗೂ ಸ್ಥಳಿಯ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ತೀರ್ಪು ಬಂದಿದೆ. ಆದರೆ ನಮ್ಮ ಭೂಮಿ ಕಬಳಿಸಿರುವ ವ್ಯಕ್ತಿ ಪ್ರಭಾವ ಬಳಸಿ ತನ್ನ ಹೆಸರಿಗೆ ಪೋಡು ಮಾಡಿಸಿಕೊಂಡಿದ್ದಾನೆ. ನಮ್ಮ ಪರ ತೀರ್ಪು ಇದ್ದರೂ ಅಧಿಕಾರಿಗಳು ಆ ವ್ಯಕ್ತಿಗೆ ಪೋಡು ಮಾಡಿಕೊಟ್ಟಿದ್ದಾರೆ. ಕಾನೂನು ಪ್ರಕಾರ ಎಲ್ಲಾ ರೀತಿಯ ದಾಖಲಾತಿ ನಮ್ಮ ಪರವಾಗಿದ್ದರೂ ನ್ಯಾಯ ಸಿಗುತ್ತಿಲ್ಲ ಎಂದು ಡಾ.ವೆಂಕಟೇಶ್ ನೋವು ತೋಡಿಕೊಂಡರು.

ಹುಣಸೂರು ವಿಭಾಗಾಧಿಕಾರಿಗಳನ್ನು ಈ ಬಗ್ಗೆ ಪ್ರಶ್ನೆ ಮಾಡಿದಾಗ, ಅವರಿಗೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂದು ತಿಳಿಸಿದರು. ಅಧಿಕಾರಿಗಳ ಸ್ಪಷ್ಟನೆ ಕೇಳಿ ಕೋಪೋದ್ರಿಕ್ತರಾದ ಸಿ.ಎನ್.ಮಂಜೇಗೌಡ, ಮೂರು ನ್ಯಾಯಾಲಯದಲ್ಲಿ ತೀರ್ಪು ಬಂದರೂ ಅವರ ಹೆಸರಿಗೆ ಪೋಡು ಮಾಡಿಕೊಟ್ಟಿಲ್ಲ. ಹಾಗಾದರೆ ಅವರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುತ್ತಾ ಹೋಗುವುದೇ, ಇದೆಂತಹ ನ್ಯಾಯ ಎಂದು ಪ್ರಶ್ನಿಸಿದರು. ಮಧ್ಯ ಪ್ರವೇಶಿಸಿದ ಡಾ.ಮಹದೇವಪ್ಪ, ಈ ವಿಚಾರದ ಬಗ್ಗೆ ಪರಿಶೀಲನೆ ನಡೆಸಿ ಕಾನೂನು ಅವರ ಪರವಾಗಿದ್ದರೆ ಕೂಡಲೇ ಅವರ ಹೆಸರಿಗೆ ಪೋಡು ಮಾಡಿಕೊಡಿ ಎಂದು ಸೂಚಿಸಿದರು.

ಕಾಲುವೆ ತೆರವಿಗೆ ಮನವಿ: ಹುಣಸೂರಿನ ಅಣ್ಣೂರು ಗ್ರಾಮದ ಬಳಿ ಚನ್ನಯ್ಯನಕೆರೆಗೆ ನೀರು ಹೋಗದಂತೆ ಕಾಲುವೆ ಮುಚ್ಚಿದ್ದಾರೆ. ಕಾಲುವೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಪ್ರಭಾವಿಗಳು ನೀರನ್ನು ತಮ್ಮ ಜಮೀನಿಗೆ ಹರಿಸಿಕೊಂಡಿದ್ದಾರೆ. ಇಲ್ಲಿ ಕಾಲುವೆಯನ್ನೇ ನುಂಗಿ ಹಾಕಿದ್ದಾರೆ ಎಂದು ಆರೋಪಿಸಿದರು.

ನೀರಾವರಿ, ಕಂದಾಯ ಇಲಾಖೆಯ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಒತ್ತುವರಿ ಮಾಡಿರುವ ಕಾಲುವೆ ಜಾಗವನ್ನು ತೆರವು ಮಾಡಬೇಕು. ನೀರು ಕೆರೆಗೆ ಹರಿಯುವಂತೆ ಕ್ರಮ ವಹಿಸಬೇಕು ಎಂದು ಡಾ.ಮಹದೇವಪ್ಪ ಅಧಿಕಾರಿಗಳಿಗೆ ಆದೇಶ ನೀಡಿದರು.

ರಸ್ತೆಯೇ ಮಂಗಮಾಯ: ಮೈಸೂರಿನ ಗುಂಗ್ರಾಲ್ ಛತ್ರ ಗ್ರಾಮದಲ್ಲಿ ಸರ್ಕಾರದ ಅಕ್ರಮ ಸಕ್ರಮ ಯೋಜನೆಯಿಂದ 2 ಎಕರೆ ಜಮೀನು ನಮಗೆ ದೊರತಿದೆ. ಆದರೆ ಖಾಸಗಿ ಡೆವಲಪರ್ ತಮ್ಮ ಪ್ರಭಾವ ಬಳಸಿ ಜಮೀನಿಗೆ ಹೋಗಲು ಇದ್ದ ರಸ್ತೆ ಒತ್ತುವರಿ ಮಾಡಿಕೊಂಡು ಬೇಲಿ ಹಾಕಿಕೊಂಡಿದ್ದಾರೆ. ಇಲ್ಲಿ ವಸ್ತುಗಳಿಲ್ಲ, ರಸ್ತೆಯೇ ಮಂಗಮಾಯವಾಗಿದೆ ಎಂದು ಶಿವಸ್ವಾಮಿ ಎಂಬುವರು ದೂರಿದರು.

ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಸರ್ವೆ ಮಾಡಿಸಿ ಒತ್ತುವರಿ ತೆರವು ಮಾಡಬೇಕು ಎಂದು ತಹಶೀಲ್ದಾರ್ ಗಿರೀಶ್‌ಗೆ ಡಿಸಿ ಡಾ.ರಾಜೇಂದ್ರ ಆದೇಶ ನೀಡಿದರು.

ಹೀಗೆ ನೂರಾರು ಮಂದಿ ತಮ್ಮ ಸಮಸ್ಯೆ ನಿವಾರಣೆಗೆ ಅಧಿಕಾರಿಗಳ ಬಳಿ ಅಲೆದು ಬೇಸತ್ತಿರುವ ಬಗ್ಗೆ ಪರಿಪರಿಯಾಗಿ ಸಚಿವರ ಮುಂದೆ ತೋಡಿಕೊಂಡರು. ಇವರಿಗೆಲ್ಲಾ ಭರವಸೆಯಂತೂ ದೊರೆತಿದೆ. ಆದರೆ ಪರಿಹಾರ ಸಿಗುವುದೇ ಎಂಬುದನ್ನು ಕೆಲ ದಿನ ಕಾದು ನೋಡಬೇಕಿದೆ.

ಮಾಹಿತಿ ಹಕ್ಕು ಕಾಯ್ದೆ ದುರುಪಯೋಗ ಆಗದಂತೆ ಎಚ್ಚರಿಕೆ ವಹಿಸಿ

ಅಧಿಕಾರಿಗಳಿಗೆ ಉಸ್ತುವಾರಿ ಸಚಿವರ ಸೂಚನೆ

ಮೈಸೂರು, ಸೆ.25(ಬಿಎಲ್‌ಯು) ಮಾಹಿತಿ ಹಕ್ಕು ಕಾಯ್ದೆ ಶಕ್ತಿಯುತ ಅಸ್ತ್ರವಾಗಿದ್ದು, ರಾಜಕೀಯ ಹಾಗೂ ವೈಯಕ್ತಿಕವಾಗಿ ದುರುಪಯೋಗ ಆಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನಡೆದ ಜನತಾ ದರ್ಶನದ ವೇಳೆ ಮಾತನಾಡಿದ ಅವರು, ಮಾಹಿತಿ ಹಕ್ಕು ಕಾಯ್ದೆಯ ಮಾಹಿತಿಗಳು ಪಾರದರ್ಶಕ ಹಾಗೂ ನಿಷ್ಪಕ್ಷಪಾತವಾಗಿರಬೇಕು ಎಂದು ಸಲಹೆ ನೀಡಿದರು. ಈಗ ಸರ್ಕಾರ ಬದಲಾಗಿದೆ. ಇದರಿಂದ ಅಧಿಕಾರಿಗಳ ಮನೋಭಾವ ಕೂಡ ಬದಲಾಗಬೇಕು. ಸರ್ಕಾರದ ಉತ್ಸಾಹಕ್ಕೆ ತಕ್ಕಂತೆ ಅಧಿಕಾರಿಗಳು ಜನಸ್ನೇಹಿಯಾಗಿ ಕೆಲಸ ಮಾಡಬೇಕು. ವಿನಾಕಾರಣ ಜನರನ್ನು ಅಲೆಸಬಾರದು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಅಧಿಕಾರಿಗಳು ಹಳ್ಳಿಗಳಿಗೆ ಭೇಟಿ ನೀಡಬೇಕು. ಜನರೊಡನೆ ನೇರ ಸಂಪರ್ಕ ಇಟ್ಟುಕೊಳ್ಳಬೇಕು. ಇಲ್ಲದ್ದರೆ ಮಧ್ಯವರ್ತಿಗಳ ಹಾವಳಿ ಹೆಚ್ಚಾಗುತ್ತದೆ. ಇದರಿಂದ ಜನರು ಶೋಷಣೆಗೊಳಗಾಗುತ್ತಾರೆ. ಅಧಿಕಾರಿಗಳು ಇದಕ್ಕೆ ಆಸ್ಪದ ನೀಡಬಾರದು ಎಂದು ಡಾ.ಮಹದೇವಪ್ಪ ತಿಳಿಸಿದರು.

ಮೈಸೂರು ಜಿಲ್ಲೆಯನ್ನು ಪೋಡಿ ಮುಕ್ತ ಜಿಲ್ಲೆಯಾಗಿ ಮಾಡಲು ಅಭಿಯಾನ ನಡೆಸಬೇಕು. ಇದಕ್ಕಾಗಿ ಗಡುವು ವಿಧಿಸಿಕೊಳ್ಳಬೇಕು. ಆಡಳಿತ ಪರಿಣಾಮಕಾರಿಯಾಗಿ ಕಾಣುವಂತಿರಬೇಕು. ಹಾಗಾದಾಗ ಮಾತ್ರ ಭ್ರಷ್ಟಾಚಾರ ಮುಕ್ತ ಪರಿಣಾಮಕಾರಿ ಆಡಳಿತ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಆಫೀಸ್‌ನಲ್ಲಿ ಕೆಲಸವೇನೂ ಇರಲ್ಲ; ತಿಂಗಳಲ್ಲಿ 8 ದಿನ ಹಳ್ಳಿಗೆ ಹೋಗಿ ಜನರ ಕಷ್ಟ ಕಾರ್ಪಣ್ಯ ಆಲಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸೂಚನೆ





ಮೈಸೂರು,ಸೆ.25(ಎಸ್‌ಬಿಡಿ)– ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ತಿಂಗಳಲ್ಲಿ 8 ದಿನ ಹಳ್ಳಿಗಳಿಗೆ ಭೇಟಿ ನೀಡಿ, ಸಾರ್ವಜನಿಕ ಸಮಸ್ಯೆ ಅರಿಯಬೇಕು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಸೋಮವಾರ 'ಜನತಾ ದರ್ಶನ'ದಲ್ಲಿ ಮಾತನಾಡಿದ ಅವರು, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರತಿದಿನ ಕಚೇರಿಯಲ್ಲಿ ಕುಳಿತು ಮಾಡುವಂತಹ ಕೆಲಸವೇನೂ ಇರುವುದಿಲ್ಲ. ವಾರದಲ್ಲಿ ಎರಡು ದಿನದಂತೆ ತಿಂಗಳಲ್ಲಿ ಎಂಟು ದಿನ ಕಡ್ಡಾಯವಾಗಿ ಪ್ರತಿ ತಾಲೂಕುಗಳ ಗ್ರಾಮಗಳಿಗೆ ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಆಲಿಸಬೇಕು. ಜನನಿಬಿಡ ಪ್ರದೇಶಗಳಿಗೆ ಭೇಟಿ ನೀಡಿ ಸಾರ್ವಜನಿಕರ ತೊಂದರೆಗಳನ್ನು ಗ್ರಹಿಸಬೇಕು. ಪ್ರವಾಸದ ಬಗ್ಗೆ ಡೈರಿ ನಿರ್ವಹಣೆ ಮಾಡಬೇಕು ಎಂದು ಸಚಿವ ಡಾ.ಮಹದೇವಪ್ಪ ತಿಳಿಸಿದರು.

ತಾಲೂಕು ಮಟ್ಟದ ಅಧಿಕಾರಿಗಳು ನೀಡುವ ಮಾಹಿತಿಗೆ ಬದಲಾಗಿ ತಾವೇ ಜನರ ಬಳಿ ಹೋಗುವುದರಿಂದ ವಾಸ್ತವ ಅರಿವಾಗುತ್ತದೆ. ಸಮಸ್ಯೆಗಳನ್ನು ಪಟ್ಟಿ ಮಾಡಿ, ಕಿರಿಯ ಅಧಿಕಾರಿಗಳಿಗೆ ಸಲಹೆ-ಸೂಚನೆ ನೀಡಬೇಕು. ಸಮಸ್ಯೆ ಪರಿಹರಿಸುವುದರ ಜೊತೆಗೆ ಸರ್ಕಾರಿ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮ ವಹಿಸಬೇಕು. ಇಲ್ಲವಾದರೆ ಅಸಹಾಯಕರು, ಆರ್ಥಿಕ ದುರ್ಬಲರು ಕಚೇರಿಗಳಿಗೆ ಅಲೆದು ಸುಸ್ತಾಗಿ, ಆಡಳಿತದ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಾರೆ. ಇದಕ್ಕೆ ಆಸ್ಪದ ನೀಡದಂತೆ ಆಡಳಿತ ಚುರುಕಾಗಿದೆ, ನಮ್ಮ ನೆರವಿಗಿದೆ ಎಂಬ ಭಾವನೆ ಗಟ್ಟಿಯಾಗುವಂತೆ ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಸಿಎಂಗೆ ಆಶ್ವಾಸನೆ ನೀಡಿದ್ದೇವೆ: ಎಲ್ಲಾ ಜವಾಬ್ದಾರಿಯುಳ್ಳ, ಜಿಲ್ಲಾಧಿಕಾರಿ, ಜಿಪಂ ಸಿಇಓ, ಎಸ್ಪಿ ಸೇರಿದಂತೆ ನಾಲ್ಕೈದು ಮಂದಿ ಅಧಿಕಾರಿಗಳಿಗೆ ಬಿಡದೆ ಎಲ್ಲರೂ ತಮ್ಮ ವ್ಯಾಪ್ತಿಯ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ನಗರದಲ್ಲಿ ಪಾಲಿಕೆ, ಮುಡಾ ಅಧಿಕಾರಿಗಳು ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯದಿಂದ ಕೆಲಸ ಮಾಡಬೇಕು. ಕೊಳಚೆ ನಿರ್ಮೂಲನಾ ಮಂಡಳಿ ಮೂಲಕವೂ ಸಾಕಷ್ಟು ಯೋಜನೆಗಳಿದ್ದು, ಅವುಗಳನ್ನು ಜನರಿಗೆ ತಲುಪಿಸಬೇಕು. ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಶ್ರಮಿಸಬೇಕು. ಜನ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗದಂತೆ ಕ್ರಮ ವಹಿಸಬೇಕು. ಜನರ ನಿರೀಕ್ಷೆಯಂತೆ ಉತ್ತಮ ಆಡಳಿತ ನೀಡುವುದಾಗಿ ಕಳೆದ ಕೆಡಿಪಿ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಆಶ್ವಾಸನೆ ನೀಡಿದ್ದೇವೆ. ಅದರಂತೆ ಎಲ್ಲರೂ ಕೆಲಸ ಮಾಡಬೇಕು ಎಂದು ತಿಳಿಸಿದರು.

ಹಳ್ಳಿಗಳಲ್ಲಿ ಡ್ರಗ್ಸ್, ಗಾಂಜಾ ಹಾವಳಿ ತಪ್ಪಿಸಿ

ದಸಂಸ ಮುಖಂಡರ ಮನವಿ

ಮೈಸೂರು: ಡ್ರಗ್ಸ್, ಗಾಂಜಾ ಹಳ್ಳಿಗಳಿಗೂ ವ್ಯಾಪಿಸಿದ್ದು, ಇದರಿಂದ ಹಲವು ಕುಟುಂಬಗಳು ದಿವಾಳಿಯಾಗುತ್ತಿವೆ ಎಂದು ದಸಂಸ ಮುಖಂಡರು ಸಚಿವರ ಗಮನಕ್ಕೆ ತಂದರು.

ದಸಂಸ ಮುಖಂಡರಾದ ನಿಂಗರಾಜ್ ಮಲ್ಲಾಡಿ, ದೇವೇಂದ್ರ ಹೆಚ್.ಪಿ.ದಿವಾಕರ್ ಮತ್ತಿತರರು ಸಚಿವರಿಗೆ ಅಹವಾಲು ಸಲ್ಲಿಸಿ, ಹುಣಸೂರು ಪಟ್ಟಣ ಸೇರಿ ಹಲವು ಹಳ್ಳಿಗಳಲ್ಲಿ ಡ್ರಗ್ಸ್, ಗಾಂಜಾ, ಅಕ್ರಮ ಮದ್ಯ ಮಾರಾಟ ವಿಪರೀತವಾಗಿದೆ. ದುಡಿದು ಕುಟುಂಬಕ್ಕೆ ಆಸರೆಯಾಗಬೇಕಾದ ಯುವಕರು ವ್ಯಸನಿಗಳಾಗಿದ್ದಾರೆ. ಮುಖ್ಯವಾಗಿ ದಲಿತ ಸಮುದಾಯದವರು ಹೆಚ್ಚು ಮಾದಕ ವಸ್ತುಗಳ ದಾಸರಾಗುತ್ತಿದ್ದಾರೆ. ಆರೋಗ್ಯ ಹಾಳು ಮಾಡಿಕೊಳ್ಳುವುದರೊಂದಿಗೆ ಮನೆಯಲ್ಲಿ ಗಲಾಟೆ ಮಾಡುತ್ತಾರೆ. ಕುಟುಂಬಗಳು ದಿವಾಳಿಯಾಗಿವೆ. ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ. ಅಪಘಾತಗಳು ಹೆಚ್ಚು ಸಂಭವಿಸುತ್ತಿವೆ. ಸಣ್ಣಪುಟ್ಟ ವಿಚಾರಗಳಿಗೂ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ದುರ್ಬಲರಾಗಿದ್ದಾರೆ. ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ. ಆದರೆ ಈ ಬಗ್ಗೆ ಅಬಕಾರಿ ಹಾಗೂ ಪೊಲೀಸ್ ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ಇದು ಅತ್ಯಂತ ಗಂಭೀರವಾದ ವಿಚಾರ. ಡ್ರಗ್ಸ್, ಗಾಂಜಾ, ಅಕ್ರಮ ಮದ್ಯ ಮಾರಾಟ ತಡೆದು, ಕುಟುಂಬಗಳನ್ನು ಉಳಿಸಿ ಎಂದು ಮನವಿ ಮಾಡಿದರು.

ಗೈರಾದವರಿಗೆ ನೋಟಿಸ್...

"ಅನೇಕ ಅಧಿಕಾರಿಗಳು ಜನತಾ ದರ್ಶನಕ್ಕೆ ಗೈರಾಗಿದ್ದಾರೆ. ಸಮರ್ಪಕ ಕಾರಣವಿಲ್ಲದೆ, ಅನುಮತಿ ಪಡೆಯದೆ ಗೈರಾಗಿರುವ ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ನೀಡಿ.

–ಡಾ.ಹೆಚ್.ಸಿ.ಮಹದೇವಪ್ಪ, ಸಚಿವ

ಬೆಳಗ್ಗೆಯಿಂದ ಸಂಜೆ 5 ಗಂಟೆವರೆಗೆ ನಿರಂತರವಾಗಿ ಅಹವಾಲು ಸ್ವೀಕಾರ

ಮೈಸೂರು, ಸೆ.25(ಎಸ್‌ಬಿಡಿ)– ಮೈಸೂರಿನಲ್ಲಿ ನಡೆದ ಜನತಾ ದರ್ಶನದಲ್ಲಿ ಊಟಕ್ಕೂ ಬಿಡುವು ನೀಡದೆ ಸಂಜೆ 5 ಗಂಟೆವರೆಗೂ ಸಾರ್ವಜನಿಕರ ಅಹವಾಲು ಸ್ವೀಕರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಜನಪ್ರತಿನಿಧಿಗಳು ಹಾಗೂ ಜಿಲ್ಲಾಧಿಕಾರಿ ಸೇರಿದಂತೆ ಪ್ರಮುಖ ಅಧಿಕಾರಿಗಳು ವೇದಿಕೆಯಲ್ಲಿ ಕುಳಿತು ಸಾರ್ವಜನಿಕರ ಅಹವಾಲು ಆಲಿಸಿದರು. ಕೊನೆಯ ಒಂದು ಗಂಟೆ ವೇದಿಕೆ ಮುಂಭಾಗ ನಿಂತು ಸರದಿಯಲ್ಲಿ ಬಂದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಮನೆ ಖಾತೆ ಮಾಡಿಕೊಟ್ಟಿಲ್ಲ, ರೇಷನ್ ಕಾರ್ಡ್ ಸಿಗುತ್ತಿಲ್ಲ, ಗೃಹಲಕ್ಷ್ಮಿ ಯೋಜನೆ ಹಣ ಬಂದಿಲ್ಲ, ವಿಚಾರಿಸಿದರೆ ಬ್ಯಾಂಕ್ ಸೀಡಿಂಗ್ ಆಗಿಲ್ಲ ಎನ್ನುತ್ತಾರೆ. ಮಗ ವಂಚಿಸಿ ಮನೆ ಮಾರಾಟ ಮಾಡಲು ಯತ್ನಿಸುತ್ತಿದ್ದಾನೆ. ಹೂಟಗಳ್ಳಿ ಸರ್ಕಾರಿ ಶಾಲೆ ಜಾಗವನ್ನು ಖಾಸಗಿಯವರು ಕಬಳಿಸಿದ್ದಾರೆ. ಡೆವಲಪರ್ ಕಂಪನಿಯೊಂದು ರಾಜಕಾಲುವೆಯನ್ನು ಅತಿಕ್ರಮಿಸಿಕೊಂಡು ಬಡಾವಣೆ ನಿರ್ಮಿಸುತ್ತಿದೆ. ನಮ್ಮ ರಸ್ತೆಯಲ್ಲಿ ಬೀದಿದೀಪಗಳಿಲ್ಲ. ಹೀಗೆ ಹಲವು ರೀತಿಯ ಸಮಸ್ಯೆಗಳನ್ನು ಸಚಿವರಲ್ಲಿ ಅಲವತ್ತುಕೊಂಡರು. ಇಂದಿನ ಜನತಾ ದರ್ಶನದಲ್ಲಿ 350ಕ್ಕೂ ಹೆಚ್ಚು ಅಹವಾಲುಗಳು ಸಲ್ಲಿಕೆಯಾದವು.

ಪ್ರತಿಭಟನೆ ಎಚ್ಚರಿಕೆ: ಮೈಸೂರು ವೃತ್ತದ ಪ್ರಾದೇಶಿಕ, ಸಾಮಾಜಿಕ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಸುಮಾರು 10–15 ವರ್ಷಗಳಿಂದ ದಿನಗೂಲಿ, ಪಿಸಿಪಿ, ಹೊರಗುತ್ತಿಗೆಯಡಿ ಅರಣ್ಯ ವೀಕ್ಷಕರು, ಕಾವಲುಗಾರರು, ಎಪಿಸಿ ಕ್ಯಾಂಪ್ ವಾಚರ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಇಎಸ್‌ಐ, ಪಿಎಫ್ ಸೌಲಭ್ಯವಿಲ್ಲ. ಈ ಬೇಡಿಕೆಯಿಟ್ಟಿದ್ದರಿಂದ ಐವರನ್ನು ಕೆಲಸದಿಂದ ತೆಗೆದುಹಾಕಿ, ಅನುದಾನವಿಲ್ಲ ಎಂಬ ನೆಪ ಹೇಳುತ್ತಿದ್ದಾರೆ. ನೌಕರರ ಮೇಲೆ ಶೋಷಣೆ ನಡೆಯುತ್ತಿದೆ. 15–20 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ ಮೈಸೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಬಳಿ ಪ್ರತಿಭಟಿಸುವುದಾಗಿ ರಾಜ್ಯ ಅರಣ್ಯ ಇಲಾಖೆ ಸರ್ಕಾರಿ ದಿನಗೂಲಿ/ಪಿಸಿಪಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ನೌಕರರ ಸಂಘದ ಪದಾಧಿಕಾರಿಗಳು ಸಚಿವರಿಗೆ ಅಹವಾಲು ಸಲ್ಲಿಸಿದರು.

ಸೂರಿಗಾಗಿ ಕಣ್ಣೀರು: ರಾಮಕೃಷ್ಣ ನಗರ ಇ ಅಂಡ್ ಎಫ್ ಬ್ಲಾಕ್, 15ನೇ ಕ್ರಾಸ್ ನಿವಾಸಿ ಶಂಕರಪ್ಪ ಅವರ ಪತ್ನಿ ಶ್ರೀಮತಿ ನಾಗರತ್ನಮ್ಮ, ಅಪಘಾತದಲ್ಲಿ ನನ್ನ ಪತಿ ಕಾಲು ಕಳೆದುಕೊಂಡು ಮನೆಯಲ್ಲಿದ್ದಾರೆ. ನಾನು ಮನೆಗೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ಮನೆ ಬಾಡಿಗೆಗೂ ಕಷ್ಟವಾಗಿದೆ. ದಯಮಾಡಿ ಒಂದು ಸೂರು ಕಲ್ಪಿಸಿ ಎಂದು ಕಣ್ಣೀರಿಟ್ಟರು.

ನಕಲಿ ಜಾಲದ ಬಗ್ಗೆ ಎಚ್ಚರವಿರಲಿ...

"ನಕಲಿ ದಾಖಲೆ ಸೃಷ್ಟಿಸುವ ಜಾಲಗಳಿವೆ. ಅಲ್ಲದೆ ನಕಲಿ ವೈದ್ಯರು ಇದ್ದಾರೆ. ಈ ಬಗ್ಗೆ ನಗರಪಾಲಿಕೆ, ಮುಡಾ ಹಾಗೂ ಕಂದಾಯ ಇಲಾಖೆಯವರು ತುಂಬಾ ಎಚ್ಚರಿಕೆ ವಹಿಸಬೇಕು. ಇಂತಹವರ ವಿರುದ್ಧ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಲ್ಲದೆ, ತನಿಖೆ ನಡೆಸಿ, ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. –ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಸರ್ಕಾರಿ ಕಚೇರಿಗೆ ಅಲೆದಾಟ ತಪ್ಪಿಸಲು ಜನತಾ ದರ್ಶನ

ಮಳವಳ್ಳಿ, ಸೆ.25– ಸರ್ಕಾರದ ವಿವಿಧ ಇಲಾಖೆಗಳಿಗೆ ಜನಸಾಮಾನ್ಯರು ಅಲೆದಾಟ ತಪ್ಪಿಸಲು ಜನತಾ ದರ್ಶನ ಆಯೋಜಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸೋಮವಾರ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಆಯೋಜಿಸಿದ್ದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಖಾತೆ ಬದಲಾವಣೆ, ಪಹಣಿ ಸಮಸ್ಯೆ, ಪೋಡಿ, ದುರಸ್ತು ಹಾಗೂ ಪಿಂಚಣಿ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಜನಸಾಮಾನ್ಯರು ತಹಸೀಲ್ದಾರ್, ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿ ಕಚೇರಿಗೆ ಅಲೆಯುವ ಸಂಕಷ್ಟ ಕೊನೆಗಾಣಿಸಲು ಮುಖ್ಯಮಂತ್ರಿಗಳು ಜನತಾ ದರ್ಶನ ಎಂಬ ವಿನೂತನ ಕಾರ್ಯಕ್ರಮ ಜಾರಿಗೊಳಿಸಿದ್ದಾರೆ. ಅದರನ್ವಯ ಇಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಯೋಜನೆ ಸಾಕಾರಗೊಳ್ಳುತ್ತಿದೆ ಎಂದರು.

ಹತ್ತಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕಾನೂನಾತ್ಮಕ ಸಮಸ್ಯೆಗಳಿಗೆ ಮುಕ್ತಿ ಹಾಡಿ ಅರ್ಜಿಗಳ ಸಂಖ್ಯೆ ಶೂನ್ಯಗೊಳಿಸುವ ಗುರಿ ಹೊಂದಲಾಗಿದ್ದು, ಗ್ರಾಮ ಹಾಗೂ ಕಂದಾಯ ಇಲಾಖೆ ಹೊಣೆಗಾರಿಕೆ ಹೆಚ್ಚಳವಾಗಿರುತ್ತದೆ. ಜಿಲ್ಲೆಯ ಹಲವು ತಾಲೂಕುಗಳಲ್ಲಿ ಬಗರ್‌ಹುಕುಂ ಸಾಗುವಳಿದಾರರಿಗೆ ಕಳೆದೆರಡು ವರ್ಷಗಳಲ್ಲಿ ಮೋಸ ಮಾಡಲಾಗಿದೆ. ಒಂದೆರಡು ಎಕರೆ ಜಮೀನುಳ್ಳ ರೈತರಿಂದ ಲಕ್ಷಾಂತರ ರೂ. ವಸೂಲಿ ಮಾಡಲಾಗಿದೆ. ಅರಣ್ಯ ಪ್ರದೇಶಗಳನ್ನು ಒತ್ತುವರಿ ಮಾಡಲಾಗಿದೆ. ಇಂತಹ ಅನ್ಯಾಯಕ್ಕೆ ಅಂತ್ಯವಾಡಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಇಂದು ಸ್ವೀಕರಿಸಿದ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇ ಮಾಡಲಾಗುವುದು. ಜನಸಾಮಾನ್ಯರಿಗೆ ಸ್ಪಂದಿಸದ ನೌಕರರಿಗೆ ಸಲಾಂ ಹೊಡೆಯುವ ಪ್ರವೃತ್ತಿಗೆ ಕಡಿವಾಣ ಹಾಕಿ ಉನ್ನತ ಅಧಿಕಾರಿಗಳ ಗಮನಕ್ಕೆ ತರಲು ಜನತಾ ದರ್ಶನ ಆಯೋಜಿಸಲಾಗಿದೆ. ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಚುನಾವಣಾ ಪ್ರಣಾಳಿಕೆ ಕಾರ್ಯಗತಗೊಳಿಸಲು ಮುಂದಾಗಿದ್ದು, ಈಗಾಗಲೇ ಶಕ್ತಿ, ಅನ್ನಭಾಗ್ಯ, ಉಚಿತ ವಿದ್ಯುತ್ ಹಾಗೂ ಗೃಹಲಕ್ಷ್ಮಿ ಯೋಜನೆಗಳು ಸೇರಿ 4 ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದರು.

ಹಾಲಿನ ದರ ಲೀಟರ್‌ಗೆ 3 ರೂ. ಹೆಚ್ಚಳ, ಕೃಷಿಕರಿಗೆ 3 ಲಕ್ಷ ರೂ.ವರೆಗೆ ಬಡ್ಡಿರಹಿತ ಸಾಲ ನೀಡಲು ಮುಂದಾಗಿದ್ದು, ತಾಲೂಕಿನ ಅಭಿವೃದ್ಧಿಗೆ ನೂರು ಕೋಟಿ ರೂ.ಗಳ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ನಾಳೆ ನವದೆಹಲಿಯಲ್ಲಿ ನಡೆಯುವ ಸಿಡಬ್ಲ್ಯುಆರ್‌ಸಿ ಸಭೆಯಲ್ಲಿ ರಾಜ್ಯಕ್ಕೆ ನ್ಯಾಯ ಸಿಗುವ ವಿಶ್ವಾಸವಿದ್ದು, ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಜನರನ್ನು ಪ್ರಚೋದಿಸುವ ಕೆಲಸ ಮಾಡುತ್ತಿರುವುದು ಸರಿಯಲ್ಲ. ಕಾವೇರಿ ಪ್ರತಿಭಟನೆ ಬಗ್ಗೆ ಬಹಳ ಗೌರವವಿದ್ದು, ಜಿಲ್ಲೆಯ ರೈತರು ಬೆಳೆದಿರುವ ಬೆಳೆ ರಕ್ಷಣೆ ಹಾಗೂ ಎಂಟತ್ತು ಜಿಲ್ಲೆಗಳಿಗೆ ಆಗತ್ಯವಾಗಿರುವ ಕುಡಿಯುವ ನೀರು ಪೂರೈಸಲು ಸರ್ಕಾರ ಬದ್ಧವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು, ಆಡಳಿತ ವ್ಯವಸ್ಥೆ ಅಧೋಗತಿಯಲ್ಲಿ ಸಾಗಿದ್ದು, ಅದನ್ನು ಸರಿದಾರಿಗೆ ತಂದು ಪರಿಣಾಮಕಾರಿಯಾದ ಆಡಳಿತ ವ್ಯವಸ್ಥೆ ಅನುಷ್ಠಾನಗೊಳಿಸುವ ಸದುದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಜನತಾ ದರ್ಶನ ಜಾರಿಗೊಳಿಸಿದ್ದಾರೆ. ಪಟ್ಟಭದ್ರರ ಅಟಾಟೋಪದಿಂದ ತಾಲೂಕಿನಲ್ಲಿ ಭೂ ಮಾಫಿಯಾ ಎಗ್ಗಿಲ್ಲದೇ ವಿಜೃಂಭಿಸುತ್ತಿದೆ. ಸರ್ಕಾರಿ ಕಚೇರಿಗಳಲ್ಲಿ ಏಜೆಂಟರುಗಳ ಹಾವಳಿ ಹೆಚ್ಚಳವಾಗಿದೆ. ಇವುಗಳನ್ನು ನಿಯಂತ್ರಿಸಿ ಜನಸಾಮಾನ್ಯರಿಗೆ ವಿವಿಧ ಯೋಜನೆಗಳ ಫಲ ದೊರೆಯುವಂತೆ ಮಾಡುವ ಸದುದ್ದೇಶದಿಂದ ಪ್ರತಿ ತಾಲೂಕಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜನತಾ ದರ್ಶನ ನಡೆಯಲಿದ್ದು, ಜನ ಸಾಮಾನ್ಯರಿಗೆ ಅನುಕೂಲವಾಗಲಿದೆ ಎಂದರು.

ಕಾವೇರಿ ಜಲಾನಯನ ಪ್ರದೇಶಗಳಲ್ಲಿ ನೀರಿನ ಬವಣೆ ಆರಂಭವಾಗಿದೆ. ಕುಡಿಯುವ ನೀರು ಹಾಗೂ ಜಾನುವಾರುಗಳ ರಕ್ಷಣೆ ನಮ್ಮ ಗುರಿಯಾಗಿದ್ದು, ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹಿಸಲಾಗುವುದು. ಶಾಲೆಗಳ ಬಲವರ್ಧನೆ, ಬಡವರ ಕಲ್ಯಾಣಗಳತ್ತ ಗಮನ ಹರಿಸುವುದು ನಮ್ಮ ಆಡಳಿತದ ಗುರಿ ಎಂದರು.

ಸಭೆಯಲ್ಲಿ 500ಕ್ಕೂ ಹೆಚ್ಚು ಜನಸಾಮಾನ್ಯರು ವಿವಿಧ ಸಮಸ್ಯೆಗಳ ಕುರಿತು ಅರ್ಜಿ ಸಲ್ಲಿಸಿದರು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಾರ್ವಜನಿಕರಿಂದ ಮಾಹಿತಿ ಪಡೆದು ಅರ್ಜಿಗಳನ್ನು ಸ್ವೀಕರಿಸಿದರು.

ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಿ.ಸಿ.ಜಾಫರ್, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಎಸ್ಪಿ ಎನ್.ಯತೀಶ್, ಎಸಿ ಎಂ.ಶಿವಮೂರ್ತಿ, ತಹಸೀಲ್ದಾರ್ ಕೆಎನ್.ಲೋಕೇಶ್, ತಾಪಂ ಇಓ ಎಲ್.ಮಮತ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸುಪ್ರೀಂಕೋರ್ಟ್ ಆದೇಶ ವಿರೋಧಿಸಿ

ಇಂದು ಕೆ.ಆರ್.ಪೇಟೆ ಬಂದ್



ಕೆ.ಆರ್.ಪೇಟೆ, ಸೆ.25– ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ವಿರೋಧಿಸಿ ಕಾವೇರಿ–ಹೇಮಾವತಿ ಹಿತರಕ್ಷಣಾ ಸಮಿತಿ ಸೆ.26 ರಂದು ಮಂಗಳವಾರ ಕೆ.ಆರ್.ಪೇಟೆ ಬಂದ್‌ಗೆ ಕರೆ ನೀಡಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಂದ್ ಹಿನ್ನೆಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ರೈತ, ಕನ್ನಡ, ಪ್ರಗತಿಪರ ಹಾಗೂ ದಲಿತಪರ ಸಂಘಟನೆಗಳು, ವರ್ತಕರ ಸಂಘ, ಎಣ್ಣೆಗಳು ವ್ಯಾಪಾರಿಗಳ ಸಂಘ, ರಾಜಸ್ಥಾನ ಸಮಾಜ ಸೇವಾ ಸಂಘಟನೆಗಳ ಮುಖಂಡರುಗಳು ಮಂಗಳವಾರ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಕೆ.ಆರ್.ಪೇಟೆ ಬಂದ್ ಮಾಡಲು ಒಮ್ಮತದ ತೀರ್ಮಾನ ಕೈಗೊಂಡರು.

ಈ ವೇಳೆ ಮಾತನಾಡಿದ ಮುಖಂಡರು, ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಮೈಸೂರು–ಚನ್ನರಾಯಪಟ್ಟಣ ಮುಖ್ಯ ರಸ್ತೆ ಬಂದ್ ಮಾಡಿ, ರಸ್ತೆಯಲ್ಲೇ ಅಡುಗೆ ತಯಾರಿಸಿ ಊಟ ಮಾಡಿ ಸಂಜೆವರೆಗೂ ಪ್ರತಿಭಟನೆ ನಡೆಸಲಾಗುವುದು. ಅಲ್ಲದೇ ಕಾವೇರಿ–ಹೇಮಾವತಿ ಹಿತರಕ್ಷಣಾ ಸಮಿತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು. ಮೆಡಿಕಲ್, ಆಸ್ಪತ್ರೆ ಆಂಬುಲೆನ್ಸ್ ಹೊರತುಪಡಿಸಿ ಉಳಿದ ಎಲ್ಲಾ ಅಂಗಡಿ ಮುಂಗಟ್ಟುಗಳು, ಹೋಟೆಲ್‌ಗಳು, ಬಾರ್‌ಗಳು, ಸಿನಿಮಾ ಮಂದಿರ, ಬೀದಿಬದಿ ವ್ಯಾಪಾರಿಗಳು ಕಡ್ಡಾಯವಾಗಿ ಸ್ವಯಂ ಪ್ರೇರಿತವಾಗಿ ಮುಚ್ಚಿ ಕೆ.ಆರ್.ಪೇಟೆ ಬಂದ್‌ಗೆ ಸಹಕಾರ ನೀಡಬೇಕು. ಯಾವುದೇ ಕಾರಣಕ್ಕೂ ಬೆಳಗ್ಗಿನಿಂದ ಸಂಜೆವರೆಗೆ ಯಾವುದೇ ಅಂಗಡಿ ತೆರೆಯುವ ಅವಕಾಶವಿಲ್ಲ ಎಂದರು.

ಬಂದ್ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಬೇಕು ಎಂದು ಸಮಿತಿ ಮುಖಂಡರು ಮನವಿ ಮಾಡಿದರು.

ಪೂರ್ವಭಾವಿ ಸಭೆಯಲ್ಲಿ ರೈತ ಸಂಘದ ಮುಖಂಡ ಶಂಕರ್, ಕೃಷ್ಣೇಗೌಡ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಕರವೇ ಅಧ್ಯಕ್ಷ ಡಿ.ಎಸ್.ವೇಣು, ಸಿ.ಬಿ.ಚೇತನ್ ಕುಮಾರ್, ಮದನ್, ಸವೀರ್, ಜಿಲ್ಲಾ ಉಪಾಧ್ಯಕ್ಷ ಎ.ಸಿ.ಕಾಂತರಾಜು, ನ್ಯಾಯವಾದಿ ಆರ್.ಎಂ. ದೇವಾನಂದ್, ಪುರಸಭಾ ಸದಸ್ಯರಾದ ಸಂತೋಷ್ ಕುಮಾರ್, ಡಿ.ಪ್ರೇಮಕುಮಾರ್, ಪ್ರಮೋದ್, ದಿನೇಶ್, ಜಯಕರ್ನಾಟಕ ಸಂಘಟನೆ ಅಧ್ಯಕ್ಷ ಹೆಚ್.ಆರ್.ಸೋಮಶೇಖರ್, ದಲಿತ ಸಂಘಟನೆ ಮುಖಂಡರಾದ ಸೋಮಸುಂದರ್, ಗಣೇಶ್, ಸಂದೀಪಕುಮಾರ್ ಸೇರಿದಂತೆ ಮುಖಂಡರು ಭಾಗವಹಿಸಿದ್ದರು.

ಸೆ.29ಕ್ಕೆ ರೇಬಿಸ್ ಲಸಿಕಾ ಶಿಬಿರ



ಮಂಡ್ಯ, ಸೆ.25– ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ ಸೆ.29ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬಿಸ್ ಲಸಿಕಾ ಶಿಬಿರವನ್ನು ಜಿಲ್ಲಾ ಪಾಲಿಕ್ಲಿನಿಕ್ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಆಯೋಜಿಸಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಸೆ.25– ಪಾಂಡವಪುರ ತಾಲೂಕು ವ್ಯಾಪ್ತಿಯ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ 2023–24ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಅಧಿಕೃತ ವೆಬ್‌ಸೈಟ್: https://ssp.karnataka.gov.in:8080/2324/ ನಲ್ಲಿ ನವೀನ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅ.20 ಕೊನೆ ದಿನ ಎಂದು ಪಾಂಡವಪುರ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ: 08236256124 ಅನ್ನು ಸಂಪರ್ಕಿಸಿ.

ಕಾವೇರಿ ಹೋರಾಟಕ್ಕೆ ಲೀಲಾವತಿ, ವಿನೋದ್‌ರಾಜ್ ಬೆಂಬಲ

ಮಂಡ್ಯ, ಸೆ.25– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿಯಲ್ಲಿ ಭಾಗಿಯಾಗುವ ಮೂಲಕ ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಮತ್ತು ಅವರ ಪುತ್ರ ನಟ ವಿನೋದ್‌ರಾಜ್ ಕಾವೇರಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಸೋಮವಾರ ನಗರದ ಸರ್‌ಎಂವಿ ಪ್ರತಿಮೆ ಎದುರಿನ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಅವರು ಇಳಿ ವಯಸ್ಸಿನಲ್ಲಿಯೂ ಹೋರಾಟ ಮಾಡುವ ಮೂಲಕ ಕಾವೇರಿ ಚಳವಳಿಯಲ್ಲಿ ಭಾಗಿಯಾಗದ ನಟ, ನಟಿಯರಿಗೆ ಮಾದರಿಯಾದರು.

ಹಿರಿಯ ನಟಿ ಲೀಲಾವತಿ ಮಾತನಾಡಿ, ಜನರ ಅಭಿಮಾನ ನನ್ನನ್ನು ಇಲ್ಲಿವರೆಗೂ ಕರೆದುಕೊಂಡು ಬಂದಿದೆ. ಯಾವಾಗಲು ನಗುನಗುತ್ತಾ ಇರಬೇಕು. ಕಾವೇರಿ ಕಣ್ಣೀರು ಹಾಕಬಾರದು. ಜನರು ನೀರು ನೀರು ಅಂತಾ ಕಣ್ಣೀರು ಹಾಕಬಾರದು. ನೀರಿಗೆ ಎಂದಿಗೂ ಬರ ಬರಬಾರದು ಎಂದು ಹೋರಾಟಗಾರರಿಗೆ ಆತ್ಮಸ್ಥೈರ್ಯ ತುಂಬಿದರು.

ನಟ ವಿನೋದ್‌ರಾಜ್ ಮಾತನಾಡಿ, ಕನ್ನಂಬಾಡಿಯಿಂದ ಬೆಂಗಳೂರಿನವರೆಗೆ ಕನ್ನಡಿಗರು ಕಾವೇರಿ ನೀರನ್ನು ಆಶ್ರಯಿಸಿ ಬದುಕುತ್ತಿದ್ದಾರೆ. ಪ್ರಸ್ತುತ ಮಳೆ ಕೊರತೆಯಿಂದ ನೀರಿಗೆ ಅಭಾವ ಇದೆ. ವರುಣ ಇನ್ನೂ ಸಹ ಕೃಪೆ ತೋರಿಲ್ಲ. ಕಳೆದ



15 ವರ್ಷದಿಂದ ಕಾವೇರಿ ವಿಚಾರದಲ್ಲಿ ಕರ್ನಾಟಕ ಮತ್ತು ಮಂಡ್ಯ ಜಿಲ್ಲೆಯ ಜನತೆ ಸಾಕಷ್ಟು ನೋವು ಅನುಭವಿಸಿದ್ದು, ಇದು ನೋವಿನ ಸಂಗತಿ ಎಂದರು.

ಕಾವೇರಿ ವಿಚಾರದಲ್ಲಿ ಮಲತಾಯಿ ಧೋರಣೆ ಮುಂದುವರೆದಿದೆ. ನಿರಂತರ ಮೋಸ, ದ್ರೋಹ ಮಾಡಲಾಗಿದೆ. ಇಂತಹ ಸ್ಥಿತಿ ಬರಬಾರದು. ವಾಸ್ತವ ಪರಿಸ್ಥಿತಿಯನ್ನು ಎಲ್ಲರೂ ಅರಿಯಬೇಕು. ಪ್ರಸ್ತುತ ನಮ್ಮ ಕ್ಷೇಮ ಮುಖ್ಯ. ಕಾವೇರಿ ಹೋರಾಟ ಜಾತ್ಯತೀತ, ಪಕ್ಷಾತೀತವಾದದ್ದು, ಕಾವೇರಿ ನೀರು ನಿರ್ದಿಷ್ಟ ಸಮುದಾಯಕ್ಕೆ ಸೀಮಿತವಾದದ್ದಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳು ಪರಿಸ್ಥಿತಿ ಅರಿಯಬೇಕು. ಮುಂದಿನ ದಿನಗಳಲ್ಲಿ ಕುಡಿಯಲು ನೀರಿಲ್ಲದ ಸಂಕಷ್ಟದ ದಿನಗಳು ಎದುರಾಗಲಿದೆ. ಸುಪ್ರೀಂ ಕೋರ್ಟ್ ಮತ್ತು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ವಾಸ್ತವ ಪರಿಸ್ಥಿತಿ ಅರಿತು ಆದೇಶ ನೀಡಬೇಕು ಎಂದು ಮನವಿ ಮಾಡಿದರು. ಇಷ್ಟೊಂದು ಹೋರಾಟ ಮಾಡುವ ನಾವು ಮಳೆ ಬಂದರೆ ಎಲ್ಲವನ್ನು ಮರೆತು ಬಿಡುತ್ತೇವೆ. ಮಳೆ ಬಂದಾಗಲೂ ನೀರು ಇದ್ದಾಗಲೂ ಮುನ್ನೆಚ್ಚರಿಕೆ ವಹಿಸಬೇಕು. ಕಾವೇರಿ ವಿಚಾರದಲ್ಲಿ ಸದಾ ಕಾಲ ಜಾಗೃತಿಯಲ್ಲಿರಬೇಕು ಎಂದರು.

ಸದ್ಯದ ಸಂಕಷ್ಟ ಸ್ಥಿತಿಯಿಂದ ಕನ್ನಡಿಗರು ಮತ್ತು ರೈತರನ್ನು ಭುವನೇಶ್ವರಿ ತಾಯಿ, ಚಾಮುಂಡೇಶ್ವರಿ ಹಾಗೂ ಕಾವೇರಿ ಮಾತೆ ಕಾಪಾಡಲಿ. ರೈತ ನಿತ್ಯ ಸಂಕಷ್ಟ ಎದುರಿಸುವಂತಾಗಿದೆ. ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಇದೀಗ ಬೆಳೆ ಹಾಕದ ಪರಿಸ್ಥಿತಿ ಎದುರಾಗಿದೆ ಅರಣ್ಯ ಇಲಾಖೆ ರೈತ ರನ್ನು ಒಕ್ಕಲಿಬ್ಬಿಸುತ್ತಿದೆ. ಕಷ್ಟಎಂದು ಜಮೀನು ಮಾರಾಟ ಮಾಡುವಂತದ್ದಲ್ಲ ಆಳುವ ಸರ್ಕಾರ ರೈತನ ಪರಿಸ್ಥಿತಿ ಅರಿಯಬೇಕೆಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಕಾವೇರಿ ನೀರು ಉಳಿಸಿಕೊಳ್ಳಲು ದೊಡ್ಡ ಮಟ್ಟದ ಹೋರಾಟ ಅಗತ್ಯ. ಒಂದೇ ವಾರದಲ್ಲಿ 2 ಬಂದ್ ಮಾಡುತ್ತಿರುವುದು ಕಾವೇರಿಗಾಗಿ. ಯಾರಿಗೂ ತೊಂದರೆ ಕೊಡಬೇಕು ಅಂತ ಬಂದ್ ನಡೆಯುತ್ತಿಲ್ಲ. ಕಾವೇರಿ ನೀರಿಗಾಗಿ ಹೋರಾಟ ಮಾಡಲಾಗುತ್ತಿದೆ. ಕಾವೇರಿ ನೀರು ಕುಡಿಯುವವರು ಎಲ್ಲರೂ ಬಂದ್‌ಗೆ ಸಹಕಾರ ನೀಡಬೇಕು. ನಾಳಿನ ಬೆಂಗಳೂರು ಬಂದ್ ಹಾಗೂ 29ರ ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲ ಇದೆ. ನಾಳೆ ಪ್ರಾಧಿಕಾರ ಸಭೆ ನಡೆಯಲಿದ್ದು, ಸರ್ಕಾರ ದೃಢ ನಿರ್ಧಾರ ತಿಳಿಸಬೇಕು. ಇಲ್ಲದಿದ್ದರೆ ಮುಂದೆ ಮತ್ತಷ್ಟು ತೀವ್ರ ಸ್ವರೂಪದ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಎಂ.ಎಸ್.ಆತ್ಮಾನಂದ, ಜಿ.ಬಿ.ಶಿವಕುಮಾರ್, ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಬೋರಯ್ಯ, ಇಂಡುವಾಳು ಚಂದ್ರಶೇಖರ್, ಕನ್ನಡಸೇನೆ ಮಂಜು, ದಸಂಸ ಕೃಷ್ಣ ಇತರರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಸೆ.25– ಎಂಫಿಲ್ ಮತ್ತು ಪಿಎಚ್‌ಡಿಗೆ ನೋಂದಣಿಯಾಗಿ ವ್ಯಾಸಂಗ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅ.3 ಕೊನೆ ದಿನ. ಹೆಚ್ಚಿನ ಮಾಹಿತಿಗೆ ದ'ಊ: 08232–297240 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮಂಡ್ಯ, ಸೆ.25– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಮಂಡ್ಯ ಇವರ ವತಿಯಿಂದ ಕೆಪಿಎಸ್‌ಸಿ, ಪೊಲೀಸ್ ಹಾಗೂ ಬ್ಯಾಂಕಿಂಗ್ ಕ್ಷೇತ್ರದಿಂದ ಅಧಿಸೂಚಿತವಾದ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ವಿಷಯಗಳ ಕುರಿತು ಉಚಿತ ತರಬೇತಿಯನ್ನು ನುರಿತ ಉಪನ್ಯಾಸಕರಿಂದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಸೆ. 30 ರವರೆಗೆ ಪ್ರತಿದಿನ ಬೆಳಗ್ಗೆ 11.30ರಿಂದ ಸಂಜೆ 5.30 ಗಂಟೆಯವರಿಗೆ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ: 08232–295124, 9113875775, 8970646629 ಸಂಪರ್ಕಿಸಬಹುದಾಗಿದೆ ಎಂದು ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮಿಳುನಾಡಿಗೆ ನೀರು: ಭಾರತೀನಗರದಲ್ಲಿ ಪ್ರತಿಭಟನೆ



ಭಾರತೀನಗರ, ಸೆ.25– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಭಾರತೀನಗರದಲ್ಲಿ ವೀರಶೈವ ಮುಖಂಡರು ಪ್ರತಿಭಟನೆ ನಡೆಸಿದರು.

ಇಲ್ಲಿನ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ವೀರಶೈವ ಮುಖಂಡರು ಕಾವೇರಿ ಮಾತೆ ಭಾವಚಿತ್ರವನ್ನು ವಾಹನದ ಮೇಲಿಟ್ಟು ಮೆವರಣಿಗೆ ನಡೆಸಿ, ಪ್ರಾಣ ಕೊಟ್ಟರೂ ನೀರು ಕೊಡುವುದಿಲ್ಲ, ರಕ್ತ ಕೊಟ್ಟರೂ ನೀರು ಬಿಡುವುದಿಲ್ಲ ಎಂಬ ಘೋಷಣೆಯೊಂದಿಗೆ ಸಾಗಿದರು. ಇದೇ ವೇಳೆ ತಮಿಳುನಾಡಿಗೆ ನೀರು ಹರಿಸಲು ಸೂಚಿಸಿರುವ ಸುಪ್ರೀಂಕೋರ್ಟ್ ತೀರ್ಪು ಅವೈಜ್ಞಾನಿಕ. ಇದನ್ನು ಕೂಡಲೇ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ವೀರಶೈವ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ಸದಸ್ಯರಾದ ರಾಜು, ವೈ.ಬಿ.ಶ್ರೀಕಂಠಸ್ವಾಮಿ, ಚಂದ್ರಶೇಖರ್, ವಿನಯ್, ಕಲ್ಲೇಶ್‌ಮೂರ್ತಿ, ಎಲ್‌ಐಸಿ ಮಲ್ಲೇಶ್, ಮಲ್ಲಿಕಾರ್ಜುನ್, ಮಂಜುನಾಥ್, ಬಸವೇಶ್‌ಮೂರ್ತಿ, ಎಚ್.ಎಂ. ನಾಗರಾಜು, ಮಂಜುಳಾ, ಲೀಲಾಂಬಿಕ ಸೇರಿದಂತೆ ಇತರರಿದ್ದರು.

ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರ

ನಂ.ಗೂಡು ಕಪಿಲಾ ಸೇತುವೆ ಮೇಲೆ ರೈತರ ಪ್ರತಿಭಟನೆ



ನಂಜನಗೂಡು, ಸೆ.25– ತಾಲೂಕಿನ ಹುಲ್ಲಹಳ್ಳಿ–ರಾಂಪುರ ಕಪಿಲಾನದಿ ಸೇತುವೆ ಮೇಲೆ ಸೋಮವಾರ ತಾಲೂಕು ರೈತ ಸಂಘದ ಕಾರ್ಯಕರ್ತರು ತಮಿಳುನಾಡಿಗೆ ನಿತ್ಯ 5 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಪಾಲಿಸಿ, ನೀರು ಬಿಡುಗಡೆ ಮಾಡುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ರಸ್ತೆ ತಡೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಮಳೆಯ ಕೊರತೆಯಿಂದ ನಮ್ಮ ಬೆಳೆಗಳು ಹಾಳಾಗಿವೆ, ಕೆರೆಗಳಲ್ಲಿ ನೀರಿಲ್ಲ, ದನಕರುಗಳಿಗೆ ನೀರಿಲ್ಲ, ನಮ್ಮ ಜಲಾಶಯಗಳು ಖಾಲಿಯಾಗುತ್ತಿವೆ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಆತ್ಮಘಾತುಕ ನಿರ್ಧಾರ ಎಂದರು.

ಈಗಾಗಲೇ ತಮಿಳುನಾಡು ಒಂದು ಬೆಳೆ ತೆಗೆದಿದೆ. ಮತ್ತೆ ಕುರುವೈ ಬೆಳೆಗೆ ನೀರು ಕೇಳುತ್ತಿದ್ದಾರೆ. ಮುಂಗಾರು ಮಳೆ ಹಿನ್ನಡೆಯಿಂದಾಗಿ ನಮ್ಮ ರಾಜ್ಯದ ರೈತರು ಸಂಕಷ್ಟ ಪರಿಸ್ಥಿತಿಗೆ ಸಿಲುಕಿದ್ದಾರೆ, ನಮ್ಮ ಮೈಸೂರಿನ ಮಹಾರಾಜರು ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಮಾಡಿದ್ದರಿಂದ ನೀರು ಸಂಗ್ರಹವಾಗುತ್ತಿದೆ, ಆದರೆ ನಮ್ಮ ಪಾಲಿಗೆ ಸಲ್ಲಬೇಕಾದ ನೀರು ತಮಿಳುನಾಡಿಗೆ ಸೇರುತ್ತಿದೆ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್ ರಾಜ್ಯಕ್ಕೆ ಎಷ್ಟು ನೀರು ಬೇಕು ಎಂಬ ಬಗ್ಗೆ ಮತ್ತೆ ಸಮೀಕ್ಷೆ ನಡೆಸಬೇಕು, ನಮ್ಮಲ್ಲಿ ಆಯಾ ದಿನ ದುಡಿದು ಬದುಕುವ ಜನರಿದ್ದಾರೆ,ಹೀಗಾಗಿ ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲವಿಲ್ಲ ಎಂದು ಹೇಳಿದರು.

ಹುಲ್ಲಹಳ್ಳಿ ಕಪಿಲಾ ಸೇತುವೆ ಮೇಲೆ ಒಂದು ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದ ರೈತ ಸಂಘದ ಕಾರ್ಯಕರ್ತರು, ನಂತರ ರಾಂಪುರ ಗ್ರಾ.ಪಂ ಕಚೇರಿವರೆಗೆ ಪಾದಯಾತ್ರೆ ನಡೆಸಿ, ಗ್ರಾಪಂ. ಮುಂಭಾಗ ಪ್ರತಿಭಟನೆ ನಡೆಸಿ ಗ್ರಾಮದಲ್ಲಿ ಬೀದಿದೀಪಗಳು ಕೆಟ್ಟು ನಿಂತಿದ್ದು ರಿಪೇರಿ, ಬದಲಾವಣೆ ಕಾರ್ಯ ನಡೆಸಿಲ್ಲ ಮತ್ತು ಚರಂಡಿಗಳ ಹಾಗೂ ನೀರಿನ ಟ್ಯಾಂಕ್‌ಗಳ ಸ್ವಚ್ಛತೆ ಕಾರ್ಯ, ಸ್ಮಶಾನಗಳ ಅಭಿವೃದ್ಧಿ ಕಾರ್ಯ ನಡೆಸಲಾಗುತ್ತಿಲ್ಲ, ಅಹಲ್ಯ ಗ್ರಾಮದಲ್ಲಿ ಜಲಜೀವನ್ ಮಿಷನ್ ನೀರಿನ ಸಂಪರ್ಕವನ್ನು ಪಡೆಯಲು ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದರಿಂದ ಗ್ರಾಮದ ಕುಡಿಯುವ ನೀರಿನ 8 ಬೋರ್ ವೆಲ್ ಪಂಪ್‌ಗಳನ್ನು ಗ್ರಾ.ಪಂ. ಕಿತ್ತುಹಾಕಿದೆ, ಗ್ರಾ.ಪಂ. ಯ ಪಿಡಿಒ ವರ್ಗಾವಣೆಯಾಗಿದ್ದು, ಯಾವುದೇ ಅಭಿವೃದ್ಧಿ ಕಾರ್ಯ ನಡೆಸುತ್ತಿಲ್ಲ ಎಂದು ಆಗ್ರಹಿಸಿ ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ಜಿಲ್ಲಾ ಕಾರ್ಯದರ್ಶಿ ಇಮ್ಮಾವು ರಘು, ವೇಣುಗೋಪಾಲ್ ಉಪಸ್ಥಿತರಿದ್ದರು.

ದೇಶದ ಅಭಿವೃದ್ಧಿಗೆ ಶಿಕ್ಷಣವೇ ಬುನಾದಿ: ಐಜಿಪಿ

'ಮೈಸೂರು ಮಿತ್ರ' ಅಂಕಣಕಾರ ಡಾ.ರಂಗನಾಥ್ ಸೇರಿ ಹಲವರಿಗೆ ಡಾ.ಹೆಚ್.ಡಿ.ಚೌಡಯ್ಯ ಪ್ರಶಸ್ತಿ ಪ್ರದಾನ



ಮಂಡ್ಯ, ಸೆ.25– ಯಾವ ದೇಶಗಳು ಸಾಮಾಜಿಕ, ಆರ್ಥಿಕ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆಯೋ ಅದಕ್ಕೆ ಶಿಕ್ಷಣವೇ ಬುನಾದಿ. ಯಾವುದೇ ದೇಶದ ಅಭಿವೃದ್ಧಿಗೆ ಶಿಕ್ಷಣ ಬಹಳ ಮುಖ್ಯ ಎಂದು ಮೈಸೂರು ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕ ಡಾ.ಎಂ.ಬಿ. ಬೋರಲಿಂಗಯ್ಯ ಅಭಿಪ್ರಾಯಪಟ್ಟರು.

ಜನತಾ ಶಿಕ್ಷಣ ಟ್ರಸ್ಟ್ ವತಿಯಿಂದ ಪಿಇಎಸ್ ಇಂಜಿನಿಯರಿಂಗ್ ಕಾಲೇಜು ಆವರಣದ ನಿತ್ಯ ಸಚಿವ ಕೆ.ವಿ.ಶಂಕರಗೌಡ ತರಬೇತಿ ಮತ್ತು ಉದ್ಯೋಗ ಕೇಂದ್ರದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಡಾ.ಹೆಚ್.ಡಿ.ಚೌಡಯ್ಯನವರ 96ನೇ ಜನ್ಮದಿನಾಚರಣೆ ಹಾಗೂ 2023ನೇ ಸಾಲಿನ ರಾಜ್ಯಮಟ್ಟದ ಡಾ.ಹೆಚ್.ಡಿ.ಚೌಡಯ್ಯ ಶಿಕ್ಷಣ, ಅಂಕಣ ಸಾಹಿತ್ಯ ಮತ್ತು ಕ್ರೀಡಾ ಪ್ರಶಸ್ತಿಗಳ ಪ್ರದಾನ ಹಾಗೂ ಪ್ರತಿಭಾ ವಿದ್ಯಾರ್ಥಿ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಿತ್ಯ ಸಚಿವ ಕೆ.ವಿ.ಶಂಕರಗೌಡ ಹಾಗೂ ಮುತ್ಸದ್ಧಿ ರಾಜಕಾರಣಿ ಡಾ.ಹೆಚ್.ಡಿ.ಚೌಡಯ್ಯ ಅವರು ಶಿಕ್ಷಣಕ್ಕೆ ಆದ್ಯತೆ ನೀಡಿದರು. ಒಂದು ಅರ್ಥದಲ್ಲಿ ಇವರಿಬ್ಬರೂ ದೂರದರ್ಶಿತ್ವ ಹೊಂದಿದ್ದವರು. ಅವರು ಹಾಕಿದ ಶಿಕ್ಷಣದ ಅಡಿಪಾಯದ ಮೇಲೆ ಹಲವಾರು ಜನ ರಾಷ್ಟ್ರ ಕಟ್ಟುವ ಕೆಲಸ ಮಾಡುತ್ತಿದ್ದಾರೆ ಎಂದರು.

ಚೌಡಯ್ಯನವರ ಹೆಸರಿನಲ್ಲಿ ಸಾಧಕರನ್ನು ಗುರುತಿಸಿ ಅಭಿನಂದಿಸುತ್ತಿರುವುದು ಉತ್ತಮ ಕೆಲಸ. ವಿದ್ಯಾರ್ಥಿಗಳು ಸಾಧಕರನ್ನು ಆದರ್ಶವಾಗಿಟ್ಟುಕೊಂಡು ಜೀವನ ರೂಪಿಸಿಕೊಳ್ಳಬೇಕು. ನಿಮ್ಮ ಉತ್ತಮ ಯೋಜನೆಗಳಿಗೆ ಕಠಿಣ ಶ್ರಮ ಇರಲಿ. ಮುಂದೆ ಉತ್ತಮ ಭವಿಷ್ಯವಿದೆ. ವಿವಿಧ ದೇಶಗಳ ಅಭಿವೃದ್ಧಿಯಂತೆ ದೇಶ ಮುನ್ನಡೆಯುತ್ತಿದೆ. ಇನ್ನೂ ಮುಂದುವರೆಯಲು ಕೌಶಲ್ಯಗಳ ಅಗತ್ಯವಿದೆ. ನೀವು ಉದ್ಯೋಗಸ್ಥರಾಗದೆ ಉದ್ಯೋಗದಾತರಾಗಬೇಕು. ಕೌಶಲ್ಯ ಮತ್ತು ಜ್ಞಾನ ಸದುಪಯೋಗ ಪಡಿಸಿಕೊಂಡರೆ ಸಾವಿರಾರು ಜನಕ್ಕೆ ಕೆಲಸ ಕೊಡಬಹುದು. ನಮ್ಮ ಅಭಿವೃದ್ಧಿ ಜಿಲ್ಲೆ, ರಾಜ್ಯ, ದೇಶದ ಅಭಿವೃದ್ಧಿಯೂ ಆಗುತ್ತದೆ. ಶ್ರಮಪಟ್ಟು ಕೆಲಸ ಮಾಡಿ. ಶಿಕ್ಷಣ ಯಾರು ಕಿತ್ತುಕೊಳ್ಳಲಾಗದ ಸಂಪತ್ತು. ಶಿಕ್ಷಣ ಪಡೆದು ನಿಮ್ಮನ್ನು ನೀವೇ ಆಸ್ತಿಯನ್ನಾಗಿ ರೂಪಿಸಿಕೊಂಡರೆ ಅದು ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

'ಮೈಸೂರು ಮಿತ್ರ' ಅಂಕಣಕಾರ ಹಾಗೂ ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್ ಮಾತನಾಡಿ, ಒಬ್ಬ ವ್ಯಕ್ತಿ ತಮ್ಮ ಜೀವಿತಾವಧಿಯಲ್ಲಿ ಏನೆಲ್ಲಾ ಸಾಧನೆ ಮಾಡಬಹುದು ಎಂಬುದಕ್ಕೆ ಹೆಚ್.ಡಿ.ಚೌಡಯ್ಯನವರು ಉದಾಹರಣೆ. ಎಲ್ಲೆಲ್ಲೂ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ. ಅಂತವರ ಹೆಸರಿನಲ್ಲಿ ನೀಡಿದ ಪ್ರಶಸ್ತಿ ಸತ್ಸಂಪ್ರದಾಯವಾಗಿದೆ. ಅಂಕಣ ಸಾಹಿತ್ಯ ಎಂದರೆ ನಿಯಮಿತವಾಗಿ ಪತ್ರಿಕೆಗಳ ಅಂಕಣಕ್ಕೆ ಬರೆಯುವುದು. ಈ ಅಂಕಣವನ್ನು ಸಾಹಿತ್ಯದ ಒಂದು ಪ್ರಕಾರ ಎಂದು ಭಾವಿಸಿ ಪ್ರಶಸ್ತಿ ನೀಡುವುದು ಅಪರೂಪ. ನನ್ನಂತವರನ್ನು ಗುರುತಿಸಿ ಪ್ರಶಸ್ತಿ ನೀಡಿರುವುದಕ್ಕೆ ಧನ್ಯವಾದ ಎಂದರು.

ವೇದಿಕೆಯಲ್ಲಿ ಜನತಾ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಟ್ರಸ್ಟ್ ಕಾರ್ಯದರ್ಶಿ ಎಸ್.ಎಲ್.ಶಿವಪ್ರಸಾದ್, ಧ'ರ್ಮದರ್ಶಿ ಹೆಚ್.ಸಿ.ಮೋಹನ್‌ಕುಮಾರ್, ಉಪಾಧ್ಯಕ್ಷರಾದ ಎಂ.ಬಿ. ಶ್ರೀಧರ್, ಸಂಗಮೇಶ್ವರ್, ಟ್ರಸ್ಟಿ ಡಾ.ರಾಮಲಿಂಗಯ್ಯ ಉಪಸ್ಥಿತರಿದ್ದರು.

ಚೌಡಯ್ಯ ಶಿಕ್ಷಣ ಪ್ರಶಸ್ತಿ, ಪ್ರತಿಭಾ ಪುರಸ್ಕೃತರು

2023ನೇ ಸಾಲಿನ ಡಾ.ಹೆಚ್.ಡಿ.ಚೌಡಯ್ಯ ಶಿಕ್ಷಣ ಪ್ರಶಸ್ತಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಹೆಚ್.ಧನಂಜಯ ಅವರ ಪರವಾಗಿ ಸಂಗಮೇಶ್ವರ್ ಅವರಿಗೆ, ಅಂಕಣ ಸಾಹಿತ್ಯ ಪ್ರಶಸ್ತಿಯನ್ನು ನಿವೃತ್ತ ತಹಸೀಲ್ದಾರ್ ಹಾಗೂ 'ಮೈಸೂರು ಮಿತ್ರ' ದಿನಪತ್ರಿಕೆ ಅಂಕಣಕಾರ ಡಾ.ವಿ.ರಂಗನಾಥ್ ಅವರಿಗೆ ಹಾಗೂ ಕ್ರೀಡಾ ಪ್ರಶಸ್ತಿಯನ್ನು ಪ್ಯಾರಾ ಒಲಿಂಪಿಕ್ಸ್ ಕ್ರೀಡಾಪಟು ವೇಣುಗೋಪಾಲ್ ಜಯಚಂದ್ರ ಅವರಿಗೆ 20 ಸಾವಿರ ರೂ. ನಗದಿನೊಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

2023ನೇ ಸಾಲಿನ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರವನ್ನು ಹೊಳಲು ಸರ್ಕಾರಿ ಪ್ರೌಢಶಾಲೆಯ ಹೆಚ್.ವಿ.ಮೇಘನಾ ಹಾಗೂ ಹೆಚ್.ಜೆ.ವಿನಯ್, ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆಯ ಜೆ.ದೀಕ್ಷಾ ಹಾಗೂ ಸಿ.ಜೆ.ತೇಜಸ್ ಅವರಿಗೆ 2000 ರೂ. ನಗದು ಬಹುಮಾನ ನೀಡಲಾಯಿತು.

ಹಾಲು ಒಕ್ಕೂಟದ ಸೌಲಭ್ಯ ಪಡೆದುಕೊಳ್ಳಿ



ನಗರ್ಲೆ, ಸೆ.25– ನಂಜನಗೂಡು ತಾಲೂಕು ಗೋಣಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷ ಎಸ್. ದೊಡ್ಡಸ್ವಾಮಿರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವೇಳೆ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆ.ಜಿ.ಮಹೇಶ್ ಮಾತನಾಡಿದರು. ಸಂಘದ ಅಧ್ಯಕ್ಷ ಎಸ್.ದೊಡ್ಡಸ್ವಾಮಿ ಮಾತನಾಡಿ, ನಮ್ಮ ಸಂಘವು ಈಗ ಲಾಭದತ್ತ ನಡೆಯುತ್ತಿದ್ದು, ಸಂಘದ ಅಭಿವೃದ್ಧಿಗೆ ಪ್ರತಿಯೊಬ್ಬ ಸದಸ್ಯರ ಸಹಕಾರ ಮುಖ್ಯ, ಸದಸ್ಯರುಗಳು ಉತ್ತಮ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಆರ್ಥಿಕವಾಗಿ ಸದೃಢರಾಗುವ ಜೊತೆಗೆ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕೆಂದು ತಿಳಿಸಿದರು.

ಉಪಾಧ್ಯಕ್ಷ ಜಿ.ಎನ್. ಮಹೇಶ್, ನಿರ್ದೇಶಕರುಗಳಾದ ದೊಡ್ಡನಾಯಕ, ಮಹದೇವನಾಯಕ, ಚಿಕ್ಕವಾರನಾಯಕ, ಬಿ.ಮಂಜುನಾಥ್, ರಾಜೇಶ್, ಕುಮಾರ್.ಡಿ, ರಾಜಮ್ಮ, ಲೋಕಮ್ಮ, ರಾಜಮ್ಮ, ಸಿ.ಇ.ಓ ಜಿ.ಎಂ.ಮಹೇಶ್, ಹಾಲು ಪರೀಕ್ಷಕ ರಾಘವೇಂದ್ರ, ಸೇರಿದಂತೆ ಸಂಘದ ಎಲ್ಲಾ ಸದಸ್ಯರುಗಳು ಗ್ರಾಮಸ್ಥರು ಭಾಗವಹಿಸಿದ್ದರು.

ಅಂಬೇಡ್ಕರ್ ಗೋಪುರ ಕಾಮಗಾರಿ ವೀಕ್ಷಿಸಿದ ಸಂಸದ ಪ್ರತಾಪ್ ಸಿಂಹ

ದೆಹಲಿಯಲ್ಲಿ ಬಿಟ್ಟರೆ ಇಂತಹ ಭವ್ಯ ಗೋಪುರ ಇರುವುದೇ ಇಲ್ಲಿ



ಹಿರೀಕ್ಯಾತನಹಳ್ಳಿ, ಸೆ.25– ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ಒಂದು ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಭವ್ಯವಾದ ಪ್ರತಿಮೆಯ ಗೋಪುರದ ಕಾಮಗಾರಿಯನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ವೀಕ್ಷಿಸಿದರು.

ಸಮಿತಿಯ ಅಧ್ಯಕ್ಷ ನಾಗರಾಜ್ ಮಲ್ಲಾಡಿ ಅವರಿಂದ ಮಾಹಿತಿ ಪಡೆದು ಗೋಪುರದ ಕಾಮಗಾರಿಗೆ ಅಗತ್ಯ ಸಹಕಾರ ಹಾಗೂ ಇ–ಡಿಜಿಟಲ್ ಲೈಬ್ರರಿ ನಿರ್ಮಾಣಕ್ಕೂ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿ ಇಂತಹ ಭವ್ಯವಾದ ಅಂಬೇಡ್ಕರ್‌ರವರ ಗೋಪುರವು ಸುಂದರವಾಗಿ ಮೂಡಿಬರುತ್ತಿದ್ದು, ದೆಹಲಿಯಲ್ಲಿ ಬಿಟ್ಟರೆ ಕಟ್ಟೆಮಳಲವಾಡಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವುದು ತುಂಬಾ ಸಂತೋಷದ ವಿಷಯ ಎಂದರು. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಪುತ್ಥಳಿಯ ಗೋಪುರದ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ನಿರ್ದೇಶಕರುಗಳು ಹಾಗೂ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಉಪಾಧ್ಯಕ್ಷ ಸದಸ್ಯರು ಗ್ರಾಮಸ್ಥರು, ಜನಪ್ರತಿನಿಧಿಗಳು ಹಾಜರಿದ್ದರು.

ಮೈಸೂರು ಮಿತ್ರ

ವಿಶ್ವ ಹೃದಯ ದಿನದ ಅಂಗವಾಗಿ ಪೊಲೀಸ್ ಸಿಬ್ಬಂದಿಗೆ ಸಿಪಿಆರ್, ಬೇಸಿಕ್ ಲೈಫ್ ಸಪೋರ್ಟ್ ಕಾರ್ಯಾಗಾರ



ಮೈಸೂರು, ಸೆ.25–ಮೈಸೂರಿನ ಕಾರ್ಡಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ವತಿಯಿಂದ ವಿಶ್ವ ಹೃದಯ ದಿನದ ಅಂಗವಾಗಿ ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ 250 ಪೊಲೀಸ್ ಸಿಬ್ಬಂದಿಗಾಗಿ ಸಿಪಿಆರ್, ಬೇಸಿಕ್ ಲೈಫ್ ಸಪೋರ್ಟ್ ಕಾರ್ಯಾಗಾರ ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ ಹಠಾತ್ ಹೃದಯಾಘಾತ ಸಂಭವಿಸುವ ರೋಗಿಗಳಿಗೆ ಜೀವನದ ಪುನರ್ ಅವಕಾಶವನ್ನು ನೀಡಲು ಎಲ್ಲಾ ಮುಂಚೂಣಿ ಕೆಲಸಗಾರರು ಮತ್ತು ಸಾರ್ವಜನಿಕರಿಗೆ ಮೂಲಭೂತ ಜ್ಞಾನದ ಅಗತ್ಯವಿದೆ. ಹೃದ್ರೋಗಗಳು ಮತ್ತು ಹಠಾತ್ ಹೃದಯಾಘಾತದ ಮರಣಗಳಿಗೆ ಸಾಕ್ಷಿಯಾಗಿದೆ. ಆದ್ದರಿಂದ ಸಿಎಸ್ಐ ಮೈಸೂರು ಚಾಪ್ಟರ್ ಪ್ರತಿ ತಿಂಗಳು ಜನಜಾಗೃತಿ ಮೂಡಿಸಲು ಜೀವನದ ಬೆಂಬಲ ಕೌಶಲ್ಯಗಳನ್ನು ಹೆಚ್ಚಿಸಲು ಕಾರ್ಯಾಗಾರ ನಡೆಸುತ್ತಿದೆ ಎಂದು ಸಿಎಸ್ಐ ಮೈಸೂರು ಚಾಪ್ಟರ್ ಕಾರ್ಯದರ್ಶಿ ಡಾ.ಎಸ್.ಹೇಮಾ ಮತ್ತು ಅಧ್ಯಕ್ಷೆ ಡಾ.ಜೆ.ವೀಣಾ ಹೇಳಿದರು.

ಕಾರ್ಯಾಗಾರವನ್ನು ಎಸ್ಪಿ ಶ್ರೀಮತಿ ಸೀಮಾ ಲಾಟ್ಕರ್ ಉದ್ಘಾಟಿಸಿದರು. ಡಾ. ನಂದಿನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಡಾ. ವಿ. ಕೇಶವಮೂರ್ತಿ, ಡಾ.ಎಸ್. ಹೇಮಾ, ಡಾ.ವೈದ್ಯನಾಥನ್, ಪೊಲೀಸ್ ಸಿಬ್ಬಂದಿಗೆ ಉಪನ್ಯಾಸ ನೀಡಿದರು. ಮ್ಯಾನಿಕ್ವಿನ್ಸ್ ಮತ್ತು ಎಇಡಿಗಳೊಂದಿಗೆ ಮೈಸೂರಿನ ಎಲ್ಲಾ ಹೃದಯ ಆಸ್ಪತ್ರೆಯ ನುರಿತ ಸಿಬ್ಬಂದಿಗಳು ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಿದರು. ಕಾರ್ಯಾಗಾರದಲ್ಲಿ ಡಾ.ವಿ.ಕೇಶವಮೂರ್ತಿ, ಡಾ. ಹರ್ಷ ಬಸಪ್ಪ, ಡಾ.ಶಶಿರೇಖಾ, ಡಾ. ಶ್ರೀನಿಧಿ ಹೆಗ್ಡೆ, ಡಾ.ಚೈತ್ರಾ, ಡಾ.ವೀಣಾ ನಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಪ್ರಾಣಾಯಾಮ ಶಿಬಿರ

ಮೈಸೂರು, ಸೆ. 25–ಗಾಂಧಿ ಜಯಂತಿ ಪ್ರಯುಕ್ತ ಪರಮಹಂಸ ಯೋಗ ಮಹಾವಿದ್ಯಾಲಯದ ವತಿಯಿಂದ 21 ದಿನಗಳ ಕಾಲ ಶಿವಧ್ಯಾನ, ಪಿರಮಿಡ್ ಧ್ಯಾನ, ನಡಿಗೆ ಧ್ಯಾನ, ಇಷ್ಟಾರ್ಥ ಸಂಕಲ್ಪ ಸಂಜೀವಿನಿ ಧ್ಯಾನ, ಚಕ್ರಧ್ಯಾನ, ಕುಂಕಲನಿ ಧ್ಯಾನ, ಪ್ರಾಣಾಯಾಮ, ಮುದ್ರಾ ಹಠ ಯೋಗ ಇತ್ಯಾದಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6.30 ರಿಂದ 7.30, ಸಂಜೆ 5 ರಿಂದ 6, 6 ರಿಂದ 7 ಮತ್ತು ರಾತ್ರಿ 7 ರಿಂದ 8 ರವರೆಗೆ ನಡೆಯಲಿದೆ.

ಆಸಕ್ತಿಯುಳ್ಳವರು ಸೆ. 30 ರೊಳಗಾಗಿ ತಮ್ಮ ಹೆಸರನ್ನು ಮೊ. 9035506790 ಅಥವಾ 90087 27172 ಮೂಲಕ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ನ ಪದಾಧಿಕಾರಿಗಳು

ಮೈಸೂರು, ಸೆ. 25–ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ನ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಮಾಜಿ ಶಾಸಕ ವಾಸು (ಅಧ್ಯಕ್ಷ), ಡಾ. ಸಿ.ಕೃಷ್ಣ (ಉಪಾಧ್ಯಕ್ಷ), ಎಂ. ಯೋಗೇಂದ್ರ (ಕಾರ್ಯದರ್ಶಿ), ಸಿ.ಕೆ.ಮುರಳೀಧರನ್ (ಮುಖ್ಯ ಸಂಯೋಜನಾ ಅಧಿಕಾರಿ), ಜಿ.ಆರ್. ಪ್ರಭಾಕರ್ (ಸಂಘಟನಾ ಕಾರ್ಯದರ್ಶಿ), ಕೆ. ಗುರುರಾಜ್ (ಖಜಾಂಚಿ), ಹೆಚ್.ಆರ್. ರಾಮಸ್ವಾಮಿ, ಮಹದೇವಯ್ಯ, ಕೆ.ಗೋಪಿನಾಥ್, ಚೈನ್‌ಸಿಂಗ್‌ರಾಜ್ ಪುರೋಹಿತ್ (ಜಂಟಿ ಕಾರ್ಯದರ್ಶಿಗಳು), ಬಿ.ಕೆ. ರಾಜೇ ಅರಸ್, ಎನ್.ಕೆ.ಸುಂದರ್ (ಜಂಟಿ ಸಂಘಟನಾ ಕಾರ್ಯದರ್ಶಿಗಳು), ಬಿ. ಶ್ರೀಕಾಂತ್ (ಸಾರ್ವಜನಿಕ ಸಂಪರ್ಕಾಧಿಕಾರಿ), ಕೆ.ಬಿ. ಗಂಗಾಧರ್ (ಆರ್ಥಿಕ ಸಲಹೆಗಾರರು ಹಾಗೂ ಲೆಕ್ಕ ಪರಿಶೋಧಕರು)



ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ನಗರಪಾಲಿಕೆ ಸದಸ್ಯ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ. ಶ್ರೀಧರ ಅವರನ್ನು ಅವರ ಹಿತೈಷಿ ಬಳಗದಿಂದ ಅಭಿನಂದಿಸಲಾಯಿತು. ಈ ವೇಳೆ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಜಗದೀಶ್, ಅಂಬಾರಿ ಸ್ಟೀಲ್ಸ್ ಮಾಲೀಕ ಕೆ.ವಿ.ಶಶಿಧರ್, ಎಸ್‌ಬಿಎಸ್ ಸೆಂಟ್ರಿಂಗ್ ಮಾಲೀಕ ಶಿವಕುಮಾರ್ ಇತರರಿದ್ದರು.

ನೈಪುಣ್ಯ ದಸರಾ ಚಿತ್ರಕಲಾ ಸ್ಪರ್ಧೆಯ ವಿಜೇತರು

ಮೈಸೂರು, ಸೆ. 25– ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ ಈ ಸಾಲಿನ ನೈಪುಣ್ಯ ದಸರಾ ಚಿತ್ರಕಲಾ ಸ್ಪರ್ಧೆಯ ಫಲಿತಾಂಶ ಪ್ರಕಟಿಸಲಾಗಿದೆ. ಪ್ರೌಢ, ಪ್ರಾಥಮಿಕ, ಕಿರಿಯ ಪ್ರಾಥಮಿಕ ಮತ್ತು ಕಿಶೋರ ವಿಭಾಗಗಳಿಗಾಗಿ ನಡೆದ ಈ ಸ್ಪರ್ಧೆಯು ದಸರಾ ಸಂದರ್ಭದ ನೆನಪಿಗಾಗಿ ಮಕ್ಕಳಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಏರ್ಪಡಿಸಲಾಗಿತ್ತು. ಐತಿಹಾಸಿಕ, ಜಾನಪದ ಮತ್ತು ಸಾಂಸ್ಕೃತಿಕ ವಿಷಯಯಗಳನ್ನಾಧರಿಸಿ ನೀಡಲಾಗಿದ್ದ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಶಾಲೆಗಳಿಂದ ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೂರು ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ವಿಜೇತರಿಗೆ ನೈಪುಣ್ಯ ದಸರಾ ಪ್ರಶಸ್ತಿ ಜೊತೆಗೆ ನಗದು ಬಹುಮಾನ ನೀಡಲಾಗುವುದು. ಉಳಿದ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನದ ಜೊತೆಗೆ ಪ್ರಮಾಣ ಪತ್ರ ನೀಡಲಾಗುವುದು. ಪ್ರತಿ ವಿಭಾಗದಲ್ಲಿಯೂ 10 ಸಮಾಧಾನಕರ ಬಹುಮಾನಗಳನ್ನು ಸಹ ನೀಡಿ ಪುರಸ್ಕರಿಸಲಾಗುವುದು.

ಬಹುಮಾನಗಳನ್ನು ಸೆ. 30ರಂದು ಸಂಜೆ 5ಕ್ಕೆ, ರಾಮಕೃಷ್ಣನಗರದ 'ಹೆಚ್' ಬ್ಲಾಕ್ ಸಮೀಪ ರಮಾಗೋವಿಂದ ರಂಗಮಂದಿರದಲ್ಲಿ ವಿತರಿಸಲಾಗುತ್ತಿದ್ದು, ಇದೇ ಸಂದರ್ಭದಲ್ಲಿ ನೈಪುಣ್ಯ ಶಾಲೆಯ ವಿದ್ಯಾರ್ಥಿಗಳಿಂದ ರಂಗಕರ್ಮಿ ಸುಮತಿ ಕೆ.ಆರ್. ನಿರ್ದೇಶನದಲ್ಲಿ "ಪಂಜರದ ಗಿಣಿ" ನಾಟಕವನ್ನು ಪ್ರಸ್ತುತಪಡಿಸಲಾಗುವುದು.

ಪ್ರೌಢ ವಿಭಾಗ: ಜುಹಿ ಕುಮಾರಿ, ಕೆಎನ್‌ಸಿ ಇನೋವೇಟಿವ್ ಗ್ಲೋಬಲ್ ಸ್ಕೂಲ್ (ಪ್ರಥಮ), ನಿಖಿತಾ ಸಿಪಿ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ (ದ್ವಿತೀಯ), ಕಿಶನ್ ಬಿಸಿ, ಸೇಂಟ್ ಜೋಸೆಫ್ಸ್ ಹೈಸ್ಕೂಲ್, ಹುಣಸೂರು (ತೃತೀಯ).

ಹಿರಿಯ ಪ್ರಾಥಮಿಕ ವಿಭಾಗ: ಪಾವನಿ ಹೆಚ್.ಪಿ, ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್ (ಪ್ರಥಮ), ಕ್ಷಿತಿ ಎಸ್. ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ (ದ್ವಿತೀಯ), ಧೃತಿ, ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್(ತೃತೀಯ)

ಕಿರಿಯ ಪ್ರಾಥಮಿಕ ವಿಭಾಗ: ಪ್ರಾಪ್ತಿ ಪಿ.ಶೆಟ್ಟಿ, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ (ಪ್ರಥಮ), ತೀರ್ಥ ಬಿ.ಸೋನಿ, ಭಾರತಿ ವಿದ್ಯಾಭವನ ಸ್ಕೂಲ್ (ದ್ವಿತೀಯ), ತನಿಕ್ಷಾ ಶೆಟ್ಟಿ, ಐಡಿಯಲ್ ಜಾವಾ ರೋಟರಿ ಸ್ಕೂಲ್ (ತೃತೀಯ).

ಕಿಶೋರ ವಿಭಾಗ: ಮೋಹಿತ ಆರ್, ರೋಟರಿ ಶಿಶುವಿಹಾರ (ಪ್ರಥಮ), ರಜಿತಾ ಪಿ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ (ದ್ವಿತೀಯ), ಸಾರಾ ಮೇದಪ್ಪ ಸಿ, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ (ತೃತೀಯ).

ಫಿಲಂ ಚೇಂಬರ್ ನೂತನ ಅಧ್ಯಕ್ಷರಿಗೆ ಅಭಿನಂದನೆ



ಕರ್ನಾಟಕ ಚಲನಚಿತ್ರ ಮಂಡಳಿಯ ಫಿಲಂ ಚೇಂಬರ್ ನೂತನ ಅಧ್ಯಕ್ಷರಾಗಿ ಎನ್.ಎಂ. ಸುರೇಶ್ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ಕರ್ನಾಟಕ ವಾಣಿಜ್ಯ ಮಂಡಳಿಯಲ್ಲಿ ವಿಷ್ಣುಸೇನಾ ಸಮಿತಿ ಹಾಗೂ ಕೆಎಂಪಿಕೆ ಟ್ರಸ್ಟ್ ವತಿಯಿಂದ ಮೈಸೂರು ಪೇಟ ತೊಡಿಸಿ, ಹೂಗುಚ್ಛ ನೀಡಿ, ಶುಭ ಹಾರೈಸಲಾಯಿತು. ಈ ಸಂದರ್ಭದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿಯ ನಿರ್ಮಾಪಕ ವಲಯದ ಕಾರ್ಯಕಾರಿ ಸದಸ್ಯರಾದ ಎಂ.ಡಿ. ಪಾರ್ಥಸಾರಥಿ, ಕಮಲ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಹರೀಶ್ ನಾಯ್ಡು, ರಾಧಾಕೃಷ್ಣ, ಸುರೇಶ್ ಬಾಬು ಇನ್ನಿತರರು ಉಪಸ್ಥಿತರಿದ್ದರು.

ಸೇವನವಾರಂ 2023: ಮಾತಾ ಅಮೃತಾನಂದಮಯಿ ಅಮ್ಮನವರ ಜನ್ಮದಿನದ ಅಂಗವಾಗಿ

ಶಾಸಕ ಜಿಟಿಡಿ ಅವರಿಂದ ಸ್ವಚ್ಛತಾ ಅಭಿಯಾನ, ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಮೈಸೂರು, ಸೆ. 25– ಅಮೃತ ವಿಶ್ವವಿದ್ಯಾಪೀಠಂ, ಮಾತಾ ಅಮೃತಾನಂದಮಯಿ ಮಠ ಹಾಗೂ ಅಮೃತಕೃಪ ಆಸ್ಪತ್ರೆ ಮೈಸೂರು ಇವರ ಸಹಯೋಗದೊಂದಿಗೆ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿ ಅವರ 70ನೇ ಜನ್ಮದಿನಾಚರಣೆಯ "ಅಮೃತ ವರ್ಷಂ 70'ರ ಅಂಗವಾಗಿ ಒಂದು ವಾರದ ಕರುಣೆ ಮತ್ತು ನಿಸ್ವಾರ್ಥ ಸೇವೆಯ "ಸೇವನವಾರಂ" ಅನ್ನು ಹಮ್ಮಿಕೊಂಡಿದೆ.

ಸೇವನವಾರಂನ ಅಂಗವಾಗಿ ಸೆ.24 ರಂದು ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನ ಹಾಗೂ ಪರಿಸರ ಸಂರಕ್ಷಣೆ ಕುರಿತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಮೈಸೂರಿನ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಉದ್ಘಾಟಿಸಿದರು. ನಂತರ ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಮಾತನಾಡಿದ ಅವರು, ತ್ಯಾಜ್ಯದಿಂದಾಗುವ ಮಾಲಿನ್ಯವನ್ನು ತಡೆಯಲು ತ್ಯಾಜ್ಯ ವಿಲೇವಾರಿಯನ್ನು ಉತ್ತೇಜಿಸಬೇಕು. ಪರಿಸರ ಸಂರಕ್ಷಣೆಯ ಮೂಲಕ ಸುಸ್ಥಿರ ಸಮಾಜವನ್ನು ಕಟ್ಟುವಲ್ಲಿ ಯುವಕರ ಪಾತ್ರ ಬಹಳ ಮುಖ್ಯ ಎಂದರು. ಸ್ವಚ್ಛತೆಯನ್ನು ಕಾಪಾಡುವಲ್ಲಿ ಮತ್ತು ಪರಿಸರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಯುವ ಜನತೆ ತಮ್ಮ ಜವಾಬ್ದಾರಿಗಳನ್ನು ಹಂಚಿಕೊಂಡು ಪ್ರಕೃತಿಯ ಮೇಲ್ವಿಚಾರಕರಂತೆ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿಗಳು ಚಾಮುಂಡಿಬೆಟ್ಟದ ಪರಿಸರದಲ್ಲಿ ಸುಮಾರು 100 ಸಸಿಗಳನ್ನು ನೆಡುವ ಮೂಲಕ ಪರಿಸರ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳಿಗೆ ಸೆಡ್ಡು ಹೊಡೆದರು. ಮಣ್ಣು, ಸಾವಯವ ಗೊಬ್ಬರ ಹಾಗೂ ಬೀಜ ಮಿಶ್ರಿತ ಸೀಡ್ ಬಾಲ್‌ಗಳನ್ನು ಚಾಮುಂಡಿಬೆಟ್ಟ ಪ್ರದೇಶದ ವಿವಿಧ ಭಾಗಗಳಲ್ಲಿ ಎಸೆಯಲಾಯಿತು. ಅಲ್ಲದೇ, ಬೆಟ್ಟದ ಮೇಲ್ಭಾಗ, ಕೆಳಭಾಗ ಹಾಗೂ ಮೆಟ್ಟಿಲುಗಳ ಸುತ್ತಮುತ್ತ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಸ್ವಚ್ಛತಾ ಕಾರ್ಯವನ್ನು ನಡೆಸಿದರು.

ಕಾರ್ಯಕ್ರಮದಲ್ಲಿ ಅಮೃತ ವಿಶ್ವವಿದ್ಯಾಪೀಠಂನ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಯ ಕುರಿತಾಗಿ ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು. ಅಮೃತ ವಿಶ್ವವಿದ್ಯಾಪೀಠಂನ ಪ್ರಾಂಶುಪಾಲರು ಹಾಗೂ ಅಸೋಸಿಯೇಟ್ ಡೀನ್, ಬ್ರಹ್ಮಚಾರಿ ಪ್ರಸಾದಾಮೃತ ಚೈತನ್ಯ ಹಾಗೂ ಮಾತಾ ಅಮೃತಾನಂದಮಯೀ ದೇವಿ ಅವರ ಇತರೆ ಅನುಯಾಯಿಗಳು, ಅಮೃತಕೃಪ ಆಸ್ಪತ್ರೆಯ ಡಾ. ವಿಕಾಸ್ ಮೋದಿ, ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸೆಪ್ಟೆಂಬರ್ 24ರಿಂದ 29ರವರೆಗೆ ನಡೆಯುವ ಈ ಸೇವನವಾರಂ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಬಿರ, ರಕ್ತದಾನ ಶಿಬಿರ, ಶೈಕ್ಷಣಿಕ ಹಾಗೂ ಇತರ ಸಮಾಜಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರೀಯ ಮಕ್ಕಳ ರಂಗೋತ್ಸವದಲ್ಲಿ ಮೂಕವಿಸ್ಮಿತರಾದ ಚಿಣ್ಣರು



ಮೈಸೂರು, ಸೆ25(ಜಿಎ)–ರಾಷ್ಟ್ರೀಯ ಮಕ್ಕಳ ರಂಗೋತ್ಸವದಲ್ಲಿ ಅಭಿನಯದ ಮೂಲಕ ಕಥೆ ಕೇಳಿದ ಮಕ್ಕಳು ಮೂಕವಿಸ್ಮಿತರಾದರು.

ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ರಂಗಾಯಣದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ರಾಷ್ಟ್ರೀಯ ಮಕ್ಕಳ ರಂಗೋತ್ಸವದ ಅಂಗವಾಗಿ ರಂಗಾಯಣದ ಶ್ರೀರಂಗ ಸಭಾಂಗಣದಲ್ಲಿ ಆಯೋಜಿಸಿದ್ದ 'ಕಥೆ ಕೇಳೋಣ ಬನ್ನಿ' ಕಾರ್ಯಕ್ರಮದಲ್ಲಿ ಕಥಾಲಯ ಇಂಟರ್‌ನ್ಯಾಷನಲ್ ಅಕಾಡೆಮಿ ಆಫ್ ಸ್ಟೋರಿಟೆಲಿಂಗ್‌ನ ಸಂಸ್ಥಾಪಕಿ ಗೀತಾ ರಾಮನುಜನ್ ಅಭಿನಯದ ಮೂಲಕ ಕಥೆ ಹೇಳಿ ಎಲ್ಲರ ಗಮನ ಸೆಳೆದರು.

ಈ ವೇಳೆ ಹಿರಿಯ ರಂಗಕರ್ಮಿ ಪ್ರಸನ್ನ ಮಾತನಾಡಿ, ಇಂದಿನ ಕಾರ್ಯಕ್ರಮವನ್ನು ಸಿಂಧೂವಳ್ಳಿ ಅನಂತಮೂರ್ತಿ ಅವರಿಗೆ ಅರ್ಪಿಸುತ್ತಿದ್ದು, 700 ಕಥೆಗಳನ್ನು ಹೇಳಿದ್ದಾರೆ ಅವರು ಕಥೆ ಹೇಳುತ್ತಾರೆ ಎಂದು ತಿಳಿದರೆ, ಮಕ್ಕಳು ಸ್ವಯಂ ಪ್ರೇರಣೆಯಿಂದ ಬರುತ್ತಿದರು. ರಂಗಭೂಮಿಗೆ ಮಕ್ಕಳು ಬರಬೇಕು. ಮಕ್ಕಳು ಬಂದರೆ, ಮಾತ್ರ ರಂಗಭೂಮಿ ಉಳಿಯುತ್ತದೆ. ಆದರೆ, ಇಂದು ನಾವು ಮಕ್ಕಳನ್ನು ರಂಗಾಯಣಕ್ಕೆ ಕರೆದುಕೊಂಡು ಬರುತ್ತಿಲ್ಲ. ರಂಗಾಯಣ ದೊಡ್ಡವರಿಗೆ ಮಾತ್ರ ಸೀಮಿತ ಮಾಡಿ ಗರ್ವದಿಂದ ಹೇಳುವುದು ನಾಚಿಕೇಡಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬೇಲೂರು ಸರ್ಕಾರಿ ಶಾಲೆಯ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೂಡಲಪಾಯ ಯಕ್ಷಗಾನ ಪ್ರದರ್ಶನ ನೀಡಿದರು. ಈ ವೇಳೆ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ, ಪ್ರಮೋದ್ ಶಿಗ್ಗಾಂವ್ ಮತ್ತು ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ತಲಕಾಡು ಉತ್ಖನನದ ಮುಖ್ಯ ಅಂಶಗಳು ಕುರಿತು ವಿಶೇಷ ಉಪನ್ಯಾಸ

ಮೈಸೂರು, ಸೆ.25– ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಸೆಪ್ಟೆಂಬರ್ 30 ರಂದು ಬೆಳಗ್ಗೆ 11 ಗಂಟೆಗೆ ಇತಿಹಾಸದ ಅರಿವು ಮೂಡಿಸುವ ಸಂಬಂಧ ನುರಿತ ಇತಿಹಾಸ ತಜ್ಞರಾದ ಡಾ. ಎಂ.ಎಸ್. ಕೃಷ್ಣಮೂರ್ತಿ ಅವರಿಂದ ತಲಕಾಡು ಉತ್ಖನನದ ಮುಖ್ಯ ಅಂಶಗಳ ಕುರಿತು ವಿಶೇಷ ಉಪನ್ಯಾಸವನ್ನು ಕರ್ನಾಟಕ ವಸ್ತುಪ್ರದರ್ಶನ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2424671 ಅಥವಾ ಇ–ಮೇಲ್ ವಿಳಾಸ ddheritagemysore@gmail.com ಅನ್ನು ಸಂಪರ್ಕಿಸಬಹುದು ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸಪ್ರಶ್ನೆಯಂತಹ ಕಾರ್ಯಕ್ರಮ ವಿದ್ಯಾರ್ಥಿಗಳ ಅಧಿಕ ಜ್ಞಾನಕ್ಕೆ ಸಹಕಾರಿ



ಮೈಸೂರು, ಸೆ.25(ಜಿಎ)– ರಸಪ್ರಶ್ನೆ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗಿರುವ ಶೈಕ್ಷಣಿಕ ಜ್ಞಾನವನ್ನು ಹೆಚ್ಚಿಸುವ ಜೊತೆಗೆ ಪಠ್ಯಪುಸ್ತಕಗಳ ಹೊರತಾದ ಜ್ಞಾನವನ್ನು ಪಡೆಯಲು ಉತ್ತೇಜನ ನೀಡುತ್ತವೆ ಎಂದು ನಿವೃತ್ತ ಸಸ್ಯಶಾಸ್ತ್ರ ಪ್ರಾಧ್ಯಾಪಕ ಡಾ. ಬಿ. ಅಪ್ಪಾಜಿಗೌಡ ತಿಳಿಸಿದರು.

ಮೈಸೂರಿನ ಬೋಗಾದಿಯಲ್ಲಿರುವ ಅಮೃತ ವಿಶ್ವವಿದ್ಯಾಪೀಠಂನ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಬ್ರೈನ್ ಬೈಟ್ಸ್' ರಸಪ್ರಶ್ನೆ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶೈಕ್ಷಣಿಕ ಲೋಕದಲ್ಲಿ ರಸಪ್ರಶ್ನೆ ಸ್ಪರ್ಧೆಗಳಿಗೆ ಅದರದ್ದೇ ಆದ ಮಹತ್ವವಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಇಂತಹ ರಸಪ್ರಶ್ನೆ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಒದಗಿಸುವ ಶೈಕ್ಷಣಿಕ ಉಪಯುಕ್ತತೆಗಳು ಅಪಾರವಾಗಿದ್ದು, ವಿದ್ಯಾರ್ಥಿಗಳನ್ನು ವಿಮರ್ಶಾತ್ಮಕ ಚಿಂತನೆಗೆ ದೂಡುತ್ತವೆ ಎಂದರು.

ರಸಪ್ರಶ್ನೆ ಸ್ಪರ್ಧೆಯು ಲಿಖಿತ, ಆನ್‌ಲೈನ್, ಕನೆಕ್ಟ್–ದಿ–ಡಾಟ್ಸ್, ಆಡಿಯೋ–ವಿಶ್ಯುವಲ್ ಮತ್ತು ರ್‍ಯಾಪಿಡ್–ಫೈಯರ್ ಎಂಬ 5 ಸುತ್ತುಗಳು ಒಳಗೊಂಡಿತ್ತು. ಸ್ಪರ್ಧೆಯಲ್ಲಿ ಮೈಸೂರಿನ 35ಕ್ಕೂ ಅಧಿಕ ಕಾಲೇಜಿನ ಸುಮಾರು 450 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ಸಮರ್ಥ್ ಬಿ ಮತ್ತು ಪ್ರಥಮ್ ಆದಿತ್ಯ ಮೋಹನ್ ಪ್ರಥಮ ಸ್ಥಾನ ಪಡೆದುಕೊಂಡರು. ದ್ವಿತೀಯ ಸ್ಥಾನವನ್ನು ಸದ್ವಿದ್ಯಾ ಸೆಮಿ ರೆಸಿಡೆನ್ಶಿಯಲ್ ಪದವಿ ಪೂರ್ವ ಕಾಲೇಜಿನ ನಯನ ಸಿ ಮತ್ತು ತರುಣ್ ಟಿ ತಮ್ಮದಾಗಿಸಿಕೊಂಡರು. ಶ್ರೀ ಶಾರದಾ ಪಬ್ಲಿಕ್ ಶಾಲೆ ಕಾರ್ತಿಕ್ ರಾಮ್ ಆರ್ ಮತ್ತು ಕೇಶವ ದತ್ತ ಎಂ ಕೆ ತೃತೀಯ ಸ್ಥಾನ ಪಡೆದುಕೊಂಡರು.

ವಿಜೇತರಿಗೆ ನಗದು ಬಹುಮಾನ ಹಾಗೂ ಸ್ಮರಣಿಕೆಯನ್ನು ನೀಡಿ ಪ್ರೋತ್ಸಾಹಿಸಲಾಯಿತು. ವಿದ್ಯಾರ್ಥಿಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಸೆಮಿಫೈನಲ್ ಪ್ರವೇಶಿಸಿದ ಎಲ್ಲಾ 16 ತಂಡಗಳಿಗೂ ನಗದು ಬಹುಮಾನ ನೀಡಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಅಮೃತ ವಿಶ್ವ ವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ಸಂಚಾಲಕ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ಅಸೋಸಿಯೇಟ್ ಡೀನ್ ಡಾ.ಶೇಖರ್ ಬಾಬು, ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್, ಶೈಕ್ಷಣಿಕ ಸಂಯೋಜಕಿ ಡಾ.ರೇಖಾ ಭಟ್ ಉಪಸ್ಥಿತರಿದ್ದರು.

ನಮ್ಮ ಪೌರಕಾರ್ಮಿಕರು ನೈಜ ಕಾಯಕಯೋಗಿಗಳು

ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಹರೀಶ್‌ಗೌಡ ಅಭಿಮತ



ಮೈಸೂರು, ಸೆ.25–ಮಳೆ, ಗಾಳಿ, ಚಳಿ, ಬಿಸಿಲು ಎನ್ನದೇ ದಿನನಿತ್ಯ ನಸುಕಿನ ಜಾವದಿಂದ ಸ್ವಚ್ಛತೆ ಕಾರ್ಯ ಕೈಗೊಳ್ಳುವ ಪೌರಕಾರ್ಮಿಕರು ನೈಜ ಕಾಯಕಯೋಗಿಗಳು, ಆರೋಗ್ಯವಂತ ಸಮಾಜಕ್ಕೆ ಪೌರ ಕಾರ್ಮಿಕರ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ನಗರದ ಜಗನ್ಮೋಹನ ಅರಮನೆಯ ಮುಂಭಾಗ ಮೈಸೂರು ಯುವ ಬಳಗದ ವತಿಯಿಂದ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಪೌರಕಾರ್ಮಿಕರಿಗೆ ಸನ್ಮಾನಿಸಿ, ಬಟ್ಟೆ ವಿತರಿಸಿ ಇದೇ ವೇಳೆ ಕೇಕ್ ಕತ್ತರಿಸಿ, ಬೆಳಗಿನ ಉಪಾಹಾರ ವಿತರಿಸಿದ ನಂತರ ಮಾತನಾಡಿದ ಅವರು, ಸ್ವಚ್ಛತೆ ರೂವಾರಿಗಳಾಗಿರುವ ಪೌರ ಕಾರ್ಮಿಕರು ಎಂತಹ ಪ್ರಕೃತಿ ಮಾರಕ ಸಂದರ್ಭದಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ತಮ್ಮ ಜೀವದ ಹಂಗು ತೊರೆದು ಬಿಡುವಿಲ್ಲದೇ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು. ಪೌರ ಕಾರ್ಮಿಕರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವರ ಸಮಸ್ಯೆಗೆ ಅಧಿಕಾರಿಗಳು ಸ್ಪಂದಿಸಬೇಕು. ಪೌರ ಕಾರ್ಮಿಕರು ತಮ್ಮ ಮಕ್ಕಳನ್ನು ಪೌರ ಸೇವೆಗೆ ಮೀಸಲಿಡದೆ ಅವರಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಡಾ. ಶುಶ್ರುತ್ ಗೌಡ ಮಾತನಾಡಿ, ಪೌರಕಾರ್ಮಿಕರು ಆರೋಗ್ಯವಾಗಿದ್ದರೆ ಮಾತ್ರ ನಗರ ಮತ್ತು ಪಟ್ಟಣ ಆರೋಗ್ಯದಿಂದಿರಲು ಸಾಧ್ಯ. ಆ ನಿಟ್ಟಿನಲ್ಲಿ ಪೌರಕಾರ್ಮಿಕರು ಕೆಲಸದ ವೇಳೆ ಸರ್ಕಾರ ನೀಡಿದ ಹ್ಯಾಂಡ್ ಗ್ಲೌಸ್, ಶೂಗಳನ್ನು ಕಡ್ಡಾಯವಾಗಿ ಬಳಸಬೇಕು ಎಂದು ಸಲಹೆ ನೀಡಿದರು. ಮುಡಾ ಮಾಜಿ ಸದಸ್ಯ ಎಂ.ಎನ್.ನವೀನ್‌ಕುಮಾರ್ ಮಾತನಾಡಿ, ಸರ್ಕಾರ ಮತ್ತು ಪಾಲಿಕೆಯಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಬದುಕನ್ನು ಹಸನಾಗಿಸಿಕೊಳ್ಳಬೇಕೆಂದು ಹೇಳಿದರು. ಮೈಸೂರು ಮಹಾನಗರ ಪಾಲಿಕೆಯ ಮುಖ್ಯ ಆರೋಗ್ಯ ಅಧಿಕಾರಿ ವೆಂಕಟೇಶ್, ವಲಯ ಕಚೇರಿ 6 ಆಯುಕ್ತರಾದ ಪ್ರತಿಭಾ, ಎಸಿಪಿ ಶಾಂತಮಲ್ಲಪ್ಪ, ದೇವರಾಜ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್, ಮುಖಂಡರಾದ ಕಾಂತಿಲಾಲ್, ರಾಜೀವ್, ರವಿಚಂದ್ರ ನಂಜುಂಡಿ, ಜ್ಞಾನೇಶ್, ಆನಂದ್, ಪವನ್, ಶಾಂತ, ಮಂಜುಳಾ, ಮಂಗಳ, ಹೇಮಂತ್, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ಸೆ.28ರಂದು ಉಚಿತ ಆ್ಯಂಟಿ ರೇಬಿಸ್ ವ್ಯಾಕ್ಸಿನೇಷನ್

ಮೈಸೂರು, ಸೆ. 25– ವಿಶ್ವ ರೇಬಿಸ್ ದಿನದ ಅಂಗವಾಗಿ ಸೆ. 28 (ಗುರುವಾರ) ರಂದು ಬೆಳಗ್ಗೆ 8ರಿಂದ ರಾತ್ರಿ 8 ಗಂಟೆಯವರೆಗೆ ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿರುವ ಶ್ರೀ ಪೆಟ್ ಕ್ಲಿನಿಕ್ ಅಂಡ್ ಪೆಟ್ ಗ್ರೂಮಿಂಗ್ ಸ್ಪಾ (ಫ್ರೆಂಡ್ಲಿ ಮಾರ್ಟ್ ಎದುರು) ಉಚಿತ ಆ್ಯಂಟಿ ರೇಬಿಸ್ ವ್ಯಾಕ್ಸಿನೇಷನ್ ಕ್ಯಾಂಪ್ ಏರ್ಪಡಿಸಲಾಗಿದೆ.

ಎರಡು ತಿಂಗಳು ಮೇಲ್ಪಟ್ಟ ನಾಯಿ ಮತ್ತು ಬೆಕ್ಕಿಗೆ ಈ ವ್ಯಾಕ್ಸಿನೇಷನ್ ಲಭ್ಯವಿದ್ದು, ಮಾಹಿತಿ ಹಾಗೂ ನೋಂದಣಿಗೆ ಮೊಬೈಲ್: 9480702704 (ಡಾ. ದೀಪಕ್) ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಸೆ. 25– ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಸೆ. 28 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಕಾರ್ಮಿಕರ ಶ್ರಮಕ್ಕೆ ಪ್ರತಿಫಲ ದೊರೆಯುತ್ತಿಲ್ಲ

ಸಾಹಿತಿ ಬನ್ನೂರುರಾಜು ವಿಷಾದ



ಮೈಸೂರು, ಸೆ.25(ಎಸ್‌ಪಿಎನ್)– ಕಾರ್ಮಿಕ ವರ್ಗ ಸಮಾಜದ ಕೊಂಡಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಅದರಲ್ಲೂ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಸೇವೆ ಅನನ್ಯ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲಾ ಆವರಣದಲ್ಲಿ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕೋತ್ಸವ, ಸರ್.ಎಂ.ವಿಶ್ವೇಶ್ವರಯ್ಯ ಜಯಂತಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಲ್ಲಿ ಮತ್ತು ಒಳಚರಂಡಿ ಕಾಯಕದಲ್ಲಿ ತೊಡಗಿರುವ ಕಾರ್ಮಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ದುಡಿಯುತ್ತಿದ್ದಾರೆ. ಅವರು ದುಡಿಮೆಯೇ ದೇವರೆಂದು ಕಡಿಮೆ ಹಣಕ್ಕೆ ಕೆಲಸ ಮಾಡುತ್ತಿದ್ದಾರೆ. ಇಂತಹ ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಸರ್ಕಾರ ಹೆಚ್ಚಿನ ಸವಲತ್ತು ನೀಡಬೇಕು. ಅಲ್ಲದೆ, ನಲ್ಲಿ ಮತ್ತು ಒಳಚರಂಡಿ ಸುವ್ಯವಸ್ಥೆಗೆ ತಮ್ಮ ಬೆವರನ್ನೇ ಹರಿಸುತ್ತಾರೆ. ಇಂತಹ ಶ್ರಮಿಕ ವರ್ಗದ ಬೆವರಿಗೆ ಬೆಲೆ ಕಟ್ಟಲಾಗದು. ಈ ವರ್ಗದ ಕಾರ್ಮಿಕರಿಗೆ ಇಲಾಖೆ ವತಿಯಿಂದ ನೀಡುವ ಗುರುತಿನ ಕಾರ್ಡ್ ಮತ್ತು ಇತರೆ ಸವಲತ್ತುಗಳನ್ನು ಪಡೆಯಲು ತಾಂತ್ರಿಕ ಸಮಸ್ಯೆ ಎದುರಾಗುತ್ತಿವೆ. ಈ ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು ಎಂದು ಒತ್ತಾಯಿಸಿದರು.

ಗುರುತಿನ ಚೀಟಿ ಪಡೆಯಲು ಪರದಾಟ: ಗುರುತಿನ ಚೀಟಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು ತ್ರಾಸದಾಯಕ. ಅದರಲ್ಲೂ ಅವಿದ್ಯಾವಂತರಿಗೆ ಇದು ಕಷ್ಟಕರವಾಗಿದೆ. ಆದ್ದರಿಂದ ಎಲ್ಲಾ ಕಾರ್ಮಿಕರಿಗೂ ಸುಲಭವಾಗುವಂತೆ ಮತ್ತಷ್ಟು ಸರಳೀಕರಣವಾಗಬೇಕು. ಇಲ್ಲವಾದರೆ ಕಾರ್ಮಿಕರು ದಲ್ಲಾಳಿಗಳ ಕೈಗೆ ಸಿಲುಕಿ ಒಂದಕ್ಕೆ ಹತ್ತು ಖರ್ಚು ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಅರ್ಹ ಫಲಾನುಭವಿಗಳಿಗೆ ಸರ್ಕಾರ ಸವಲತ್ತು ಪಡೆಯದೇ ವಂಚಿತರಾಗುವ ಸಂಭವವಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂದಿನ ನಮ್ಮ ನಾಡಿನಲ್ಲಿ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮಹತ್ವದ ಸ್ಥಾನವಿದೆ. ಅಂದಿನ ಕಾಲದಲ್ಲಿಯೇ ಕೆರೆ–ಕಟ್ಟೆ ಅಣೆಕಟ್ಟೆಗಳು, ಶೈಕ್ಷಣಿಕ ಸಂಸ್ಥೆಗಳು, ಅರಮನೆ– ಗುರುಮನೆಗಳು, ಕೃಷಿ–ಪಶು ಸಂಗೋಪನೆ, ಮಹಿಳಾಭಿವೃದ್ಧಿ, ಕೈಗಾರಿಕೆಗಳು, ಆಸ್ಪತ್ರೆ ಸೇರಿದಂತೆ ಇತರೆ ಅಭಿವೃದ್ಧಿಗೆ ನಾಂದಿಯಾಗಿದ್ದಾರೆ ಎಂದರು. ಮೈಸೂರು ಮಹಾನಗರ ಪಾಲಿಕೆ ಸದಸ್ಯ ಜೆ.ಗೋಪಿ, ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಲೇಖಕಿ ರತ್ನಾ ಹಾಲಪ್ಪಗೌಡ, ಕಾರ್ಮಿಕ ಇಲಾಖೆಯ ನಿರೀಕ್ಷಕ ರವಿಕುಮಾರ್, ಉದ್ಯಮಿ ಮಹಾಂತೇಶ್ ಮುಂತಾದವರು ಕಾರ್ಯಕ್ರಮದಲ್ಲಿ ಮಾತನಾಡಿದರು. ಸಂಘದ ಜಂಟಿ ಕಾರ್ಯದರ್ಶಿ ಎಸ್.ಪಳನಿಸ್ವಾಮಿ ವಾರ್ಷಿಕ ವರದಿ ಮಂಡಿಸಿದರು. ನಿರ್ದೇಶಕ ಚಂದ್ರೇಗೌಡ, ಸಂಘದ ಅಧ್ಯಕ್ಷ ಮಹೇಶ್ ಎಸ್. ಜಯನಗರ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಕಾನೂನು ಸಲಹೆಗಾರ ಎನ್.ಸುಂದರ್‌ರಾಜ್, ಲೆಕ್ಕ ಪರಿಶೋಧಕ ಡಿ.ಜಲೇಂದ್ರ, ಉಪಾಧ್ಯಕ್ಷ ಎಂ.ಎಸ್. ಸುರೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ರವಿಕುಮಾರ್, ಜಂಟಿ ಕಾರ್ಯದರ್ಶಿ ಪಳನಿಸ್ವಾಮಿ, ಖಜಾಂಚಿ ಎಂ. ಪ್ರಕಾಶ್, ಕುಮಾರ್, ಯೋಗೇಶ್ ಹೆಬ್ಬಾಳ್, ಸುರೇಶ್, ಅನಿಲ್‌ಕುಮಾರ್, ಮೊಹಮದ್ ಜಾಕಿರ್ ಹುಸೇನ್, ಸಂತೋಷ್ ಕುಮಾರ್ ಬೇಹರ, ಯೋಗೇಶ್, ರುದ್ರಸ್ವಾಮಿ, ಶಿವರಾಜು ಮುಂತಾದವರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 26 ಸೆಪ್ಟೆಂಬರ್ 2023

ಜನತಾ ದರ್ಶನದಲ್ಲಿ 170ಕ್ಕೂ ಹೆಚ್ಚು ಅರ್ಜಿ

ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಜಿಲ್ಲಾ ಉಸ್ತುವಾರಿ ಸಚಿವರಿಂದ ಪರಿಹಾರ



ಮಡಿಕೇರಿ, ಸೆ.25– ಜನತಾ ದರ್ಶನದ ಮೂಲಕ ಜನರ ಬಳಿಗೆ ಸರ್ಕಾರವನ್ನು ಕೊಂಡೊಯ್ಯುವ ಸಲುವಾಗಿ ಕೊಡಗು ಜಿಲ್ಲೆಯ ನಾಪೋಕ್ಲು ಗ್ರಾಮದಲ್ಲಿ ಸೋಮವಾರ ಏರ್ಪಡಿಸಿದ್ದ ಜನತಾ ದರ್ಶನಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಚಾಲನೆ ನೀಡಿದರು.

ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂಥರ್‌ಗೌಡ, ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಓ ವರ್ಣಿತ್ ನೇಗಿ, ಗ್ರಾಪಂ ಅಧ್ಯಕ್ಷೆ ವನಜಾಕ್ಷಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಇತರರು ಪಾಲ್ಗೊಂಡಿದ್ದರು.

ಸರ್ಕಾರದ ಗ್ಯಾರಂಟಿ ಯೋಜನೆಗಳ ಜೊತೆಗೆ ವಿವಿಧ ಇಲಾಖೆಗಳ ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಮಳಿಗೆಯನ್ನು ಸಚಿವರು ಮತ್ತು ಶಾಸಕರು ವೀಕ್ಷಿಸಿದರು.

ಜನತಾ ದರ್ಶನ ಕಾರ್ಯಕ್ರಮದ ಸಂದರ್ಭದಲ್ಲಿ ಸುಮಾರು 170 ಕ್ಕೂ ಹೆಚ್ಚು ಅರ್ಜಿಗಳು ಸಾರ್ವಜನಿಕರಿಂದ ಸಲ್ಲಿಕೆಯಾಗಿದ್ದು, ಕೆಲವು ಅರ್ಜಿಗಳಿಗೆ ಸ್ಥಳದಲ್ಲಿಯೇ ಜಿಲ್ಲಾ ಉಸ್ತುವಾರಿ ಸಚಿವರು ಪರಿಹರಿಸಿದರು.

ಜನತಾ ದರ್ಶನ ಸಭೆಯ ಆರಂಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು, ಜನರ ಬಳಿಗೆ ಸರ್ಕಾರದ ಆಡಳಿತ ಖುದ್ದು ಭೇಟಿ ಮಾಡಿ, ಗ್ರಾಮೀಣ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸಬೇಕು ಎಂಬ ಉದ್ದೇಶದಿಂದ ಜನತಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಅವರು ಎಲ್ಲಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳುವಂತೆ ಸೂಚಿಸಿದ್ದಾರೆ. ಅದರಂತೆ ಕೊಡಗು ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಜನತಾ ದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಪ್ರತೀ ತಿಂಗಳು ಜಿಲ್ಲಾಡಳಿತ ನೇತೃತ್ವದಲ್ಲಿ ಜನತಾ ದರ್ಶನ ನಡೆಯಲಿದ್ದು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಬೇರೆ ಜಿಲ್ಲೆಗಳಲ್ಲಿ ಹೋಲಿಸಿದರೆ ಕೊಡಗು ಜಿಲ್ಲೆಯಲ್ಲಿ ಕಡಿಮೆ ಅರ್ಜಿಗಳು ಸಲ್ಲಿಕೆಯಾಗಿವೆ. ಏನೇ ಬರಲಿ ಜಿಲ್ಲೆಯ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲಾಗುವುದು. ಕಂದಾಯ, ಅರಣ್ಯ, ವಿದ್ಯುತ್, ಇತರೆ ಇಲಾಖೆಗಳ ಸಮಸ್ಯೆಗಳು ಇರುತ್ತವೆ. ಇದನ್ನು ಬಗೆಹರಿಸಲಾಗುವುದು ಎಂದರು. ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಸರ್ಕಾರ ನುಡಿದಂತೆ ನಡೆಯುತ್ತಿದೆ. 100 ದಿನದಲ್ಲಿ ನಾಲ್ಕು ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಬಡವರ, ಶೋಷಿತರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಲಾಗಿದೆ. ಆ ನಿಟ್ಟಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಭೂಮಿ ಒದಗಿಸುವುದು, ಕಾಡಾನೆ ಹಾವಳಿ ನಿಯಂತ್ರಣ ಮಾಡುವುದು, ಕಾವೇರಿ ನದಿ ಪಾತ್ರದಲ್ಲಿ ತ್ಯಾಜ್ಯ ವಿಲೇವಾರಿ ಸಂಬಂಧ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಸೇರಿದಂತೆ ವಿವಿಧ ಸಮಸ್ಯೆಗಳ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಹರಿಸುವಲ್ಲಿ ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು ಎಂದು ಹೇಳಿದರು.

ವಿವಿಧ ಇಲಾಖೆಗಳಿಂದ ಸರ್ಕಾರದ ಯೋಜನೆಗಳ ಸಂಬಂಧ ಏರ್ಪಡಿಸಲಾಗಿದ್ದ ವಸ್ತುಪ್ರದರ್ಶನ ಮಳಿಗೆ ಉತ್ತಮ ಮಾಹಿತಿ ಒಳಗೊಂಡು ಸಾರ್ವಜನಿಕರ ಗಮನ ಸೆಳೆಯಿತು. ಜಿಪಂ ಸಿಇಓ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್, ತಹಶೀಲ್ದಾರರು, ವಿವಿಧ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಆನ್‌ಲೈನ್‌ನಲ್ಲಿ ಮುಂದುವರೆದ ವಂಚನೆ...

ಪೆಟ್ರೋಲ್‌ಬಂಕ್‌ಗೆ ಅನುಮತಿ ಕೊಡಿಸುವುದಾಗಿ ಉದ್ಯಮಿಗೆ 7.10 ಲಕ್ಷ ರೂ. ವಂಚನೆ

ಗೋಣಿಕೊಪ್ಪ, ಸೆ.25– ಪ್ರತ್ಯೇಕ ಪ್ರಕರಣಗಳಲ್ಲಿ ಆನ್‌ಲೈನ್ ವಂಚನೆಯಿಂದ ಗೋಣಿಕೊಪ್ಪ ವ್ಯಾಪ್ತಿಯಲ್ಲಿ 7.25 ಲಕ್ಷ ರೂ. ಕಳೆದುಕೊಂಡಿರುವ ಘಟನೆ ಬೆಳಕಿಗೆ ಬಂದಿದೆ.

ಪೆಟ್ರೋಲ್ ಬಂಕ್ ಆರಂಭಿಸಲು ಸ್ಥಳೀಯ ಉದ್ಯಮಿಯಿಂದ ಆನ್‌ಲೈನ್ ಮೂಲಕ ಅರ್ಜಿ ಪಡೆದುಕೊಂಡು 7.10 ಲಕ್ಷ ದೋಚಲಾಗಿದೆ. ಮತ್ತೊಂದು ಪ್ರಕರಣದಲ್ಲಿ ವ್ಯಕ್ತಿಯೊಬ್ಬರು ಮನಿ ಡಬ್ಲಿಂಗ್ ಆಮಿಷಕ್ಕೆ 15 ಸಾವಿರ ಕಳೆದುಕೊಂಡಿದ್ದಾರೆ. ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೆಟ್ರೋಲ್ ಬಂಕ್ ಆರಂಭಿಸಲು ಅನುಮತಿ ಕೊಡಿಸುವುದಾಗಿ ಆನ್‌ಲೈನ್ ಮೂಲಕ ದೊರೆತ ಮಾಹಿತಿಯಂತೆ ಗೋಣಿಕೊಪ್ಪದ ಉದ್ಯಮಿಯೊಬ್ಬರು ಹಣ ಕಳೆದು ಕೊಂಡಿದ್ದಾರೆ. engpump applicationin2023.com ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಲಾಗಿತ್ತು. ಆಗಸ್ಟ್ 15 ರಂದು ಆನ್‌ಲೈನ್‌ನಲ್ಲಿ ಆಯ್ಕೆಯಾಗಿರುವ ಬಗ್ಗೆ ಬಂದ ಇ-ಮೇಲ್ ಸಂದೇಶದಂತೆ 25 ಸಾವಿರ ರೂ. ಮೊದಲು ಕಂತು ಮೂಲಕ ಪಾವತಿಸಬೇಕು ಎಂಬ ಸಂದೇಶ ನಂಬಿ ಪಾವತಿಸಲಾಗಿದೆ. ಇದರೊಂದಿಗೆ 1.75 ಲಕ್ಷ ರೂ. 7 ದಿನಗಳ ಒಳಗೆ ಪಾವತಿಸುವಂತೆ ಸೂಚನೆಯಂತೆ 1.75 ಲಕ್ಷ ರೂ. ಪಾವತಿಯಾಗಿದೆ. ಸೆ.1 ರಂದು 5.10 ಲಕ್ಷ ರೂ. ಆನ್‌ಲೈನ್ ಮೂಲಕ ಪಾವತಿಸಲಾಗಿದೆ. ಸೆ.18 ರಂದು ಮತ್ತೆ 7 ಲಕ್ಷ ರೂ. ಪಾವತಿಸುವಂತೆ ಸೂಚಿಸಿದಾಗ ಸಂಶಯ ಬಂದು ಹಣ ಪಾವತಿಯನ್ನು ಸ್ಥಗಿತಗೊಳಿಸಿ ಪರಿಶೀಲನೆ ನಡೆಸಿದ್ದಾರೆ. ಮೈಸೂರು ಪೆಟ್ರೋಲಿಯಂ ಕಂಪೆನಿಯಲ್ಲಿ ವಿಚಾರಿಸಿದಾಗ ನಾವು ಆನ್‌ಲೈನ್ ಮೂಲಕ ಯಾವ ಹಣ ಪಾವತಿಸಿಕೊಂಡಿಲ್ಲ ನಮಗೂ ಇದಕ್ಕೂ ಸಂಬಂಧವಿಲ್ಲ ಎಂದು ತಿಳಿಸಿದರು.

ಇದರಂತೆ ಬ್ಯಾಂಕ್ ಖಾತೆ ಪರಿಶೀಲಿಸಿದಾಗ ಪಂಕಜ್ ಗುಪ್ತ ಹಾಗೂ Petroleum pay online govt.in ಸಂದಾಯವಾಗಿರುವ ಬಗ್ಗೆ ಮಾಹಿತಿ ದೊರೆತಿದೆ. ಒಂದಿಷ್ಟು ಹಣ ಬೆಂಗಳೂರು, ಉತ್ತರಪ್ರದೇಶ, ಹರಿಯಾಣ ಭಾಗದ ಬ್ಯಾಂಕ್ ಖಾತೆಗೆ ಸಂದಾಯವಾಗಿದ್ದು, ಒಟ್ಟು 7.10 ಲಕ್ಷ ಹಣ ಕಳೆದುಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಗೋಣಿಕೊಪ್ಪದ ವ್ಯಕ್ತಿಯೊಬ್ಬರಿಗೆ ಸೆಪ್ಟೆಂಬರ್ 22 ರಂದು ಓಎಲ್‌ಎಕ್ಸ್ ಮೂಲಕ ಫರ್ನಿಚರ್ ತೆಗೆದುಕೊಳ್ಳುತ್ತೇವೆ. 5 ಸಾವಿರ ಪಾವತಿಸಿದರೆ ನಿಮಗೆ 10 ಸಾವಿರ ಹಿಂತಿರುಗಿಸುವುದಾಗಿ ಭರವಸೆ ನೀಡಿದ್ದ. ಇದಕ್ಕೆ ಮಾರುಹೋದ ಮಹಿಳೆ ಮಗಳ ಮೊಬೈಲ್‌ನಿಂದ ಪೇಟಿಎಂ ಮೂಲಕ 5 ಸಾವಿರ ಸಂದಾಯ ಮಾಡಿದ್ದಾರೆ. ಭರವಸೆಯಂತೆ 10 ಸಾವಿರ ಇವರ ಖಾತೆಗೆ ಜಮಾ ಮಾಡುವ ಮೂಲಕ ನಂಬಿಕೆ ಹುಟ್ಟಿಸಿದ್ದ ಖದೀಮರು ಮತ್ತೆ 5 ಸಾವಿರ ಜಮಾ ಮಾಡಿಸಿಕೊಂಡು 10 ಸಾವಿರ ವರ್ಗಾಯಿಸಿದ್ದರು.

ಇದನ್ನು ನಂಬಿ 30 ಸಾವಿರ ದೊರೆಯುವ ಕುತೂಹಲದಲ್ಲಿ ಖದೀಮರ ಮನವಿಯಂತೆ 15 ಸಾವಿರ ವರ್ಗಾಯಿಸಿದ್ದು, ನಂತರ ಆ ಕಡೆಯಿಂದ ಯಾವುದೇ ಪ್ರತಿಕ್ರಿಯೆ ದೊರೆಯಲಿಲ್ಲ. ಇದರಂತೆ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು. ಬಸವಂತ್ ಅಗರವಾಲ್, ರೋಹಿತ್ ಶರ್ಮ ಎಂಬ ಹೆಸರಿನಲ್ಲಿರುವ ಮೊಬೈಲ್ ಸಂಖ್ಯೆಯಾಗಿದ್ದು, ಮೋಸದ ಜಾಲ ಮೂಲ ತಿಳಿಯದಾಗಿದೆ. 9109666796, 8962526917 ಮೊಬೈಲ್ ಸಂಖ್ಯೆಗಳಲ್ಲಿ ಮೋಸ ನಡೆದಿದೆ.

ಅ.8, ಕೊಡಗು ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿ

ಮಡಿಕೇರಿ, ಸೆ.25– ಮಾಸ್ಟರ್ ಮೈಂಡ್ ಚೆಸ್ ಸ್ಕೂಲ್ ವತಿಯಿಂದ ಅ.8 ರಂದು ನಗರದ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯಲ್ಲಿ ಕೊಡಗು ಜಿಲ್ಲಾ ಮಟ್ಟದ ಚದುರಂಗದ ಪಂದ್ಯಾವಳಿ ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. ಸಂಜೆ 4.30 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಚೆಸ್ ಆಟಗಾರರು ತಮ್ಮ ಸ್ವಂತ ಚೆಸ್ ಸೆಟ್‌ಗಳನ್ನು ತರಬೇಕು. ಪ್ರವೇಶ ಶುಲ್ಕ ರೂ.300, ಆಟಗಾರರು ಅ.8 ರಂದು ಬೆಳಗ್ಗೆ 9.30 ರೊಳಗೆ ಹಾಜರಿರಬೇಕು. 1 ನೇ ಸುತ್ತು ಬೆಳಗ್ಗೆ 10 ಗಂಟೆಗೆ ಪ್ರಾರಂಭವಾಗಲಿದೆ. ನೋಂದಣಿಗೆ ಅಗತ್ಯವಿರುವ ದಾಖಲೆಗಳಾದ ಹೆಸರು, ಜನ್ಮ ದಿನಾಂಕದ ಪ್ರಮಾಣಪತ್ರ, ಆಧಾರ್ ಕಾರ್ಡ್, ಶಾಲೆಯ ಹೆಸರು ಮತ್ತು ಶುಲ್ಕ ಪಾವತಿಯ ಸ್ಕ್ರೀನ್‌ಶಾಟ್, ವಿವರಗಳನ್ನು 6361643024 ಗೆ ವಾಟ್ಸಾಪ್ ಮಾಡಬೇಕು. ಹೆಚ್ಚಿನ ಮಾಹಿತಿಗೆ 6361643024 ಅನ್ನು ಸಂಪರ್ಕಿಸಬಹುದು.

ಈದ್ ಮಿಲಾದ್ ಸಂದೇಶ ಜಾಥಾಕ್ಕೆ ಚಾಲನೆ



ಸಿದ್ದಾಪುರ, ಸೆ.25– ಶಾಂತಿ, ಸಹಬಾಳ್ವೆ ಸಹೋದರತ್ವ ಸಾರುವ ಮಹಮ್ಮದ್ ಪೈಗಂಬರ್ ಅವರ ಸಂದೇಶವನ್ನು ಹಂಚಿಕೊಳ್ಳಲು ಸುನ್ನಿ ಯುವಜನ ಸಂಘಟನೆ ಜಿಲ್ಲೆಯಾದ್ಯಂತ ಸಂದೇಶ ಜಾಥಾವನ್ನು ಹಮ್ಮಿಕೊಂಡಿದೆ ಎಂದು ಕಕ್ಕಿಂಜೆಯ ಅಬ್ದುಲ್ ರಶೀದ್ ಝೈನಿ ತಿಳಿಸಿದ್ದಾರೆ.

ಸುನ್ನಿ ಯುವಜನ ಸಂಘದ ವತಿಯಿಂದ ಸಿದ್ದಾಪುರದಲ್ಲಿ ನಡೆದ ಈದ್ ಮಿಲಾದ್ ಸಂದೇಶ ಸಾರುವ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕರ್ನಾಟಕ ಮುಸ್ಲಿಂ ಜಮಾಅತ್ ಹಾಗೂ ಸುನ್ನಿ ಯುವಜನ ಸಂಘಟನೆ ಪ್ರವಾದಿಯವರ ಸಂದೇಶ ಸಾರುವ ಮೂಲಕ ಯುವ ಸಮೂಹ ದುಶ್ಚಟಗಳಿಂದ ದೂರವಿದ್ದು, ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕೆಂದು ಜಾಗೃತಿ ಅಭಿಯಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಎಸ್‌ಎಸ್‌ಎಫ್ ಸಂಘಟನೆಯ ಸಂಚಾಲಕ ಕೆ.ಯಂ.ಬಾವ ಮಾತನಾಡಿ, ಮಿಲಾದ್ ಸಂದೇಶ ಜಾಥಾ ಜಿಲ್ಲೆಯ ಗೋಣಿಕೊಪ್ಪಲು, ವಿರಾಜಪೇಟೆ, ನಾಪೋಕ್ಲು, ಕುಶಾಲನಗರ ಹಾಗೂ ಮಡಿಕೇರಿಯಲ್ಲಿ ಸಂಚರಿಸಲಿದ್ದು, ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಜುಬೈರ್ ಸಾಹದಿ, ಪ್ರಧಾನ ಕಾರ್ಯದರ್ಶಿ ಅಬ್ದುಲ್ಲಾ, ಹಂಸ, ಅಶ್ರಫ್ ಸೇರಿದಂತೆ ಸಂಘಟನೆ ಕಾರ್ಯಕರ್ತರು ಹಾಗೂ ಮುಖಂಡರುಗಳು ಹಾಜರಿದ್ದರು. ಜಾಥಾದಲ್ಲಿ ಜಿಲ್ಲೆಯ ನಾನಾ ಭಾಗಗಳಿಂದ ನೂರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿದ್ದರು.

ಕಾಫಿ ತೋಟದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳ ಹಿಂಡು

ಅಡಿಕೆ, ಬಾಳೆ, ತೆಂಗು, ಕಾಫಿ ಫಸಲು ನಾಶ

ವಿರಾಜಪೇಟೆ, ಸೆ.25– ಕಾಡಾನೆಗಳ ಗುಂಪು ಕಾಫಿ ತೋಟದಲ್ಲಿ ಬೀಡುಬಿಟ್ಟು ಬೆಳೆಗಳನ್ನು ತಿಂದು–ತುಳಿದು ನಾಶ ಮಾಡುತ್ತಿರುವ ಘಟನೆ ಸಂಭವಿಸಿದೆ.



ವಿರಾಜಪೇಟೆ ಸಮೀಪದ ಕೆದಮುಳ್ಳೂರು ಗ್ರಾಮದ ನಿವಾಸಿ ಮಾಳೇಟಿರ ಎಂ. ಬೆಲ್ಲು ಬೋಪಯ್ಯ ಅವರ ಕಾಫಿ ತೋಟದಲ್ಲಿ ಕಳೆದ ಒಂದು ವಾರದಿಂದ 5 ರಿಂದ 7 ಕಾಡಾನೆಗಳು ಬೀಡುಬಿಟ್ಟಿದ್ದು ತೋಟದಲ್ಲಿ ಅಡಿಕೆ ಗಿಡ, ಬಾಳೆ, ತೆಂಗಿನಗಿಡ, ಹಾಗೂ ಫಸಲಿಗೆ ಬಂದ ಕಾಫಿ ಗಿಡಗಳನ್ನು ಮುರಿದು ಹಾಳು ಮಾಡಿದ್ದು, ಸುಮಾರು 3 ಲಕ್ಷದಷ್ಟು ಕೃಷಿ ಬೆಳೆ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಇತ್ತೀಚೆಗೆ ಕಾಡಾನೆಗಳ ದಾಳಿಯಿಂದಾಗಿ ತೋಟಕ್ಕೆ ಹೋಗಲು ಕೂಲಿ ಕಾರ್ಮಿಕರು ಮತ್ತು ಗ್ರಾಮಸ್ಥರು ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಕೃಷಿಕರ ಸಂಕಷ್ಟವನ್ನು ಅರಿತು ಪುಂಡಾನೆಗಳನ್ನು ಕಾಡಿಗೆ ಓಡಿಸಬೇಕು. ಹಾಗೂ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸಿಕೊಡುವಂತೆ ಬೆಲ್ಲು ಬೋಪಯ್ಯ ಆಗ್ರಹಿಸಿದ್ದಾರೆ.

ಮಕ್ಕಳಾಗಲಿಲ್ಲವೆಂದು ದಂಪತಿ ಆತ್ಮಹತ್ಯೆ

ವಿರಾಜಪೇಟೆ, ಸೆ.25– ಮಕ್ಕಳಾಗದ ಹಿನ್ನೆಲೆಯಲ್ಲಿ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿರಾಜಪೇಟೆ ಹೊರವಲಯದ ಕೊಳತ್ತೋಡು ಬೈಗೋಡು ಗ್ರಾಮದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಎಂ.ಬೋಪಣ್ಣ ಅವರ ಲೈನ್ ಮನೆಯಲ್ಲಿ ವಾಸ ಮಾಡುತ್ತಿದ್ದ ದಿವ್ಯ (20) ಮತ್ತು ವಿನು(24) ಆತ್ಮಹತ್ಯೆ ಮಾಡಿಕೊಂಡ ದಂಪತಿ. ವಿನು ಕೂಲಿ ಕೆಲಸಕ್ಕೆ ತೆರಳಿದ್ದ ಸಂದರ್ಭ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಪತ್ನಿ ದಿವ್ಯ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು. ಸಂಜೆ ಪತಿ ವಿನು ಮನೆಗೆ ಬಂದು ನೋಡಿದಾಗ ಪತ್ನಿ ಆತ್ಮಹತ್ಯೆಗೆ ಶರಣಾಗಿರುವುದನ್ನು ಗಮನಿಸಿ ಪತಿ ವಿನು ಕೂಡ ಪತ್ನಿಯ ಪಕ್ಕದಲ್ಲಿ ನೇಣಿಗೆ ಶರಣಾಗಿದ್ದಾರೆ.

ಈ ಕುರಿತು ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಜಮೀನಿಗೆ ದಾರಿ ಇಲ್ಲ... ಹಣ ಬಿಡುಗಡೆ ಆಗಿಲ್ಲ... ಕೆಲಸ ಕೊಡಿಸಿ... ಜಾಗ ನೀಡಿ... ಜಿಲ್ಲೆಯನ್ನು ಬರಪೀಡಿತ ಪಟ್ಟಿಗೆ ಸೇರಿಸಿ...

ಇವು ಜಿಲ್ಲಾ ಉಸ್ತುವಾರಿ ಸಚಿವರ ಜನತಾ ದರ್ಶನ ಸಭೆಯಲ್ಲಿ ಕೇಳಿ ಬಂದ ವಿಷಯಗಳು



ಚಾಮರಾಜನಗರ, ಸೆ.25– ಜಮೀನಿಗೆ ದಾರಿ ಇಲ್ಲ... ಮನೆ ಮಂಜೂರಾಗಿದೆ ಆದರೆ, ಹಣ ಬಿಡುಗಡೆಯಾಗಿಲ್ಲ... ಸಾಗುವಳಿ ಮಾಡಿಸಿದ್ದೇವೆ, ಆರ್‌ಟಿಸಿ ಬಂದಿಲ್ಲ... ಪರಿಹಾರದ ಹಣ ಇನ್ನೂ ಬಂದಿಲ್ಲ... ಕೆಲಸ ಕೊಡಿಸಿ... ಕಾಲುವೆಗಳನ್ನು ನಿರ್ಮಿಸಿ ಕೊಡಿ... ಜಾಗ ನೀಡಿ... ದಿನದ 7 ಗಂಟೆ ವಿದ್ಯುತ್ ನೀಡಿ... ಜಿಲ್ಲೆಯನ್ನು ಸಂಪೂರ್ಣ ಬರಪೀಡಿತ ಪಟ್ಟಿಗೆ ಸೇರಿಸಿ...

ಇವು ನಗರದ ಜಿಲ್ಲಾಡಳಿತ ಭವನದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧ್ಯಕ್ಷತೆಯಲ್ಲಿ ನಡೆದ ಜನತಾ ದರ್ಶನದಲ್ಲಿ ಜಿಲ್ಲೆಯ ನಾಗರಿಕರು ಸಲ್ಲಿಸಿದ ದೂರುಗಳು, ಮನವಿಗಳ ಬೇಡಿಕೆ.

ನನ್ನ ಜಮೀನಿಗೆ ಹೋಗಲು ದಾರಿ ಇಲ್ಲ. ದಾರಿ ಬಿಡಿಸಿಕೊಡುವಂತೆ ರೈತರೊಬ್ಬರು ಮನವಿ ಮಾಡಿದರು. ಇದಕ್ಕುತ್ತರಿಸಿದ ತಹಸೀಲ್ದಾರ್ ಬಸವರಾಜು, ಈ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳು ಮಾಡುತ್ತೇವೆ, ನೋಡುತ್ತೇವೆ ಎನ್ನಬೇಡಿ. ದೂರುಗಳ ಬಗ್ಗೆ ಗಮನಹರಿಸಿ, ಪ್ರತಿ ತಿಂಗಳು ಜನತಾ ದರ್ಶನ ನಡೆಯಲಿದೆ. ಆ ಸಭೆಯಲ್ಲಿ ಸಮರ್ಪಕ ಉತ್ತರ ನೀಡಬೇಕು ಎಂದು ಸೂಚಿಸಿದರು.

ನನಗೆ ಮನೆ ಮಂಜೂರಾಗಿದೆ. ಆದರೆ, ನಗರಸಭೆಯಿಂದ ಹಣ ಬಿಡುಗಡೆ ಆಗಿಲ್ಲ. ನಗರಸಭೆಗೆ ಅಲೆದು ಅಲೆದು ಸುಸ್ತಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ನಿಜಧ್ವನಿ ಗೋವಿಂದರಾಜು ಸಚಿವರಿಗೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ನಗರಸಭೆ ಆಯುಕ್ತ ರಾಮದಾಸ್, 6 ಜನರಿಗೆ ಹಣ ಬಿಡುಗಡೆಯಾಗಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ನಾವು 60 ವರ್ಷಗಳಿಂದ 4 ಎಕರೆಯಲ್ಲಿ ಸಾಗುವಳಿ ಮಾಡುತ್ತಿದ್ದೇವೆ. ಆದರೆ, 2 ಎಕರೆಗೆ ಮಾತ್ರ ಆರ್‌ಟಿಸಿಯಲ್ಲಿ ನಮ್ಮ ಹೆಸರು ಬರುತ್ತಿದೆ. ಉಳಿದ 2 ಎಕರೆಗೆ ಬರುತ್ತಿಲ್ಲ ಎಂದು ರೈತರೊಬ್ಬರು ದೂರಿದರು. ಕೆಎಸ್‌ಆರ್‌ಟಿಸಿಯಲ್ಲಿ ಅಪಘಾತವಾಗಿ ಒಂದು ವರ್ಷ ಆಗಿದೆ ಆದರೆ, ಇನ್ನೂ ಪರಿಹಾರ ಸಿಕ್ಕಿಲ್ಲ. ಇದರಿಂದ ತುಂಬಾ ತೊಂದರೆಯಾಗಿದೆ ಎಂದು ಮಹಿಳೆಯೊಬ್ಬರು ಸಚಿವರ ಬಳಿ ಕಣ್ಣೀರು ಹಾಕಿದರು.

ಗಣೇಶ ಬೀಡಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೆ. ಕೆಲಸದಿಂದ ತೆಗೆದು ಹಾಕಲಾಗಿದೆ. ನನಗೆ ಕೆಲಸ ಕೊಡಿಸಿಕೊಡುವಂತೆ ವ್ಯಕ್ತಿಯೊಬ್ಬರು ಮನವಿ ಸಲ್ಲಿಸಿದರು. ಕೊಳ್ಳೇಗಾಲದ ದಶರಥ ಎಂಬುವರು ಹಂಪಾಪುರದಲ್ಲಿ ರೈತರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಕಾಲುವೆಗಳಿಲ್ಲ, ಗೇಟ್‌ಗಳಿಲ್ಲ. ಇದರಿಂದ ರೈತರು 30 ವರ್ಷಗಳಿಂದ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಅಹವಾಲು ಸಲ್ಲಿಸಿದರು. ಮತ್ತೊಬ್ಬರು ನಗರದಲ್ಲಿ ರಸ್ತೆ ಅಗಲೀಕರಣಕ್ಕಾಗಿ ಮನೆಗಳನ್ನು ಕೆಡವಲಾಯಿತು. ಆದರೆ, ಇನ್ನೂ ಪರಿಹಾರ ಸಿಕ್ಕಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ವಿದ್ಯುತ್ ಇಲ್ಲದೇ ತೊಂದರೆಯಾಗಿದೆ ಎಂದು ದೂರಿದರು.

ರೈತ ಸಂಘದ ಕಾರ್ಯಕರ್ತರು, ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ವಿದ್ಯುತ್ ನೀಡಬೇಕು. ಜಿಲ್ಲೆಯನ್ನು ಸಂಪೂರ್ಣ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ಮಹದೇಶ್ವರಬೆಟ್ಟದ ಆಸುಪಾಸಿನ ಕಾಲೋನಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು. ಲಾರಿಗೆ ಕಬ್ಬು ಸಾಗಾಣೆ ಮಾಡುವ ದರವನ್ನು ಕಾರ್ಖಾನೆ ಭರಿಸಬೇಕು. ರೈತರ ಮೇಲೆ ಹಾಕಲಾಗಿರುವ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು. ಜಿಲ್ಲೆಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸಬೇಕು ಎಂದು ಮನವಿ ಮಾಡಿದರು.

ಕಲಾವಿದೆ ಪಂಕಜಾ ರವಿಶಂಕರ್, ಜಿಲ್ಲೆಯಲ್ಲಿ ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ ಆಶ್ರಮ ತೆರೆಯಲು ಉದ್ದೇಶಿಸಿದ್ದೇನೆ. ಇದಕ್ಕೆ ಜಾಗ ಕೊಡಿಸಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು. ಈ ವೇಳೆ ಶಾಸಕರಾದ ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್‌ಪ್ರಸಾದ್, ಸಹಕಾರ ಇಲಾಖೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಸಿಇಓ ಆನಂದ್‌ಪ್ರಕಾಶ್ ಮೀನಾ, ಎಸ್‌ಪಿ ಪದ್ಮಿನಿ ಸಾಹು, ಎಡಿಸಿ ಗೀತಾ ಹುಡೇದ, ಎಸಿ ಮಹೇಶ್, ಡಿಸಿಎಫ್‌ಗಳಾದ ದೀಪಾ, ಡಾ.ರಮೇಶ್‌ಕುಮಾರ್, ಸಂತೋಷಕುಮಾರ್ ಇತರರಿದ್ದರು.

> ಜಿಲ್ಲೆಯಿಂದ ಹೊರ ಜಿಲ್ಲೆಗೆ, ರಾಜ್ಯಗಳಿಗೆ ಮೇವು ಸಾಗಿಸುವುದನ್ನು ತಡೆಗಟ್ಟಬೇಕು. ಜಿಲ್ಲೆಯನ್ನು ಸಂಪೂರ್ಣ ಬರ ಪೀಡಿತ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕು.
> - ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ.

> ಇಂದು ನಡೆದ ಜನತಾ ದರ್ಶನದಲ್ಲಿ ಒಟ್ಟು 325 ಮನವಿ ಬಂದಿದ್ದು, ಈ ಎಲ್ಲಾ ಮನವಿಗಳನ್ನು ಸ್ವೀಕರಿಸಿ, ದಾಖಲಿಸಿಕೊಳ್ಳಲಾಗಿದೆ. ಸಂಬಂಧಪಟ್ಟ ಆಯಾಯ ಇಲಾಖೆಗಳಿಗೆ ಮನವಿ ರವಾನಿಸಿ, ಇನ್ನು 15 ದಿನದೊಳಗೆ ಸ್ಪಂದಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ.
> - ಸಿ.ಟಿ.ಶಿಲ್ಪನಾಗ್, ಜಿಲ್ಲಾಧಿಕಾರಿ.

ರಾಜ್ಯ ಸರ್ಕಾರಕ್ಕೆ ಗ್ಯಾರಂಟಿಗಳ ಚಿಂತೆ: ಕೋಟೆ ಶಿವಣ್ಣ



ಹನೂರು, ಸೆ.25– ರಾಜ್ಯ ಸರ್ಕಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸದೇ ಗ್ಯಾರಂಟಿಗಳ ಬಗ್ಗೆಯೇ ಚಿಂತಿಸುತ್ತಿದೆ ಎಂದು ಮಾಜಿ ಸಚಿವ ಕೋಟೆ ಶಿವಣ್ಣ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆ ವಸತಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಸ್‌ಇಪಿ, ಟಿಎಸ್‌ಪಿ ಹಣವನ್ನು ಗ್ಯಾರಂಟಿ ಯೋಜನೆಗಳನ್ನು ಬಳಸಿಕೊಳ್ಳುವ ಮೂಲಕ ಹಣ ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಿದರು.

ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಹೇಳಿ ಇದೀಗ ನೀರು ಹರಿಸುತ್ತಿದೆ. ಈ ವಿಚಾರವಾಗಿ ಸರ್ಕಾರ ಮೊದಲೇ ಕಠಿಣ ತೀರ್ಮಾನ ಕೈಗೊಳ್ಳಬೇಕಿತ್ತು ಎಂದ ಅವರು, ಕೂಡಲೇ ನೀರು ನಿಲ್ಲಿಸುವಂತೆ ಆಗ್ರಹಿಸಿದರು. ಮುಂಬರುವ ಲೋಕಸಭೆ ಚುನಾವಣೆಗೆ ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದು ಒಳ್ಳೆಯ ಬೆಳವಣಿಗೆ. ಇದನ್ನು ನಾವು ಸ್ವಾಗತಿಸುತ್ತೇವೆ. ಈ ಬಾರಿಯೂ ಪ್ರಧಾನಿ ಮೋದಿ ದೇಶದ ಪ್ರಧಾನಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಅಲ್ಲದೇ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಹಾಲಿ ಸಂಸದರು ನಿಲ್ಲುವುದಿಲ್ಲ ಎಂದು ತಿಳಿಸಿದ್ದು, ಹೀಗಾಗಿ ನಾನು ಕೂಡ ಈ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ ಎಂದು ತಿಳಿಸಿದರು.

ಈ ವೇಳೆ ಚಾಮರಾಜನಗರ ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ರಾಜಶೇಖರ್, ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ಗುರುಸ್ವಾಮಿ, ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ರಾಜು, ಗ್ರಾಪಂ ಸದಸ್ಯ ಮಹದೇವ್ ಸೇರಿದಂತೆ ಇನ್ನಿತರರಿದ್ದರು.

ಇಂದು, ನಾಳೆ ಮುಖ್ಯಮಂತ್ರಿ ಜಿಲ್ಲಾ ಪ್ರವಾಸ

ಚಾಮರಾಜನಗರ, ಸೆ.25– ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.26 ಮತ್ತು 27ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಸೆ.26ರಂದು ರಾತ್ರಿ 8.30 ಗಂಟೆಗೆ ಹನೂರು ತಾಲೂಕಿನ ಶ್ರೀ ಮಲೆಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಅಲ್ಲಿನ ರಾಷ್ಟ್ರಪತಿ ಭವನದಲ್ಲಿ ವಾಸ್ತವ್ಯ ಹೂಡುವರು. ಸೆ.27ರಂದು ಬೆಳಗ್ಗೆ 9.50ಕ್ಕೆ ಶ್ರೀಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ರಂಗಮಂದಿರದ ಆವರಣದಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಆಯೋಜಿಸಿರುವ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಾಗಮಲೆ ಭವನದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸುವರು. ಮಧ್ಯಾಹ್ನ 2.30ಕ್ಕೆ ಚಾಮರಾಜನಗರಕ್ಕೆ ಆಗಮಿಸಿ ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ಕಾಳಿದಾಸ ವಿದ್ಯಾರ್ಥಿ ನಿಲಯ ಆವರಣದಲ್ಲಿ ಚಾಮರಾಜನಗರ ತಾಲೂಕು ಕುರುಬರ ಸಂಘದಿಂದ ನಿರ್ಮಾಣವಾಗಲಿರುವ ಕನಕ ವಾಣಿಜ್ಯ ಸಂಕೀರ್ಣದ ಮೊದಲ ಹಂತದ ಕಟ್ಟಡ ಕಾಮಗಾರಿ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ನಗರದ ಜಿಪಂ ಸಭಾಂಗಣದಲ್ಲಿ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು.

ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ

ಖಾಲಿ ಮಡಿಕೆ ಪ್ರದರ್ಶನ, ಘಂಟೆ ಹೊಡೆಯುವ ಚಳವಳಿ





ಚಾಮರಾಜನಗರ, ಸೆ.25– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ಸೋಮವಾರ ನಗರದಲ್ಲಿ ಕಬ್ಬು ಬೆಳೆಗಾರರ ಸಂಘ ಹಾಗೂ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಪತ್ಯೇಕವಾಗಿ ಪ್ರತಿಭಟನೆ ನಡೆಸಿದರು.

ಕಬ್ಬು ಬೆಳೆಗಾರರ ಸಂಘ: ನಗರದ ಜಿಲ್ಲಾಡಳಿತ ಭವನದ ಬಳಿ ಖಾಲಿ ಮಡಕೆ ಹಿಡಿದು ಸಮಾವೇಶಗೊಂಡ ಪ್ರತಿಭಟನಾಕಾರರು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಲು ನಗರದ ಜಿಲ್ಲಾಡಳಿತ ಭವನದ ಬಳಿ ಬಂದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರನ್ನು ಭೇಟಿ ಮಾಡಲು ಕಬ್ಬು ಬೆಳೆಗಾರರು ಮುಂದಾದರು. ಆದರೆ, ಸಚಿವರು ನೇರವಾಗಿ ಜನತಾ ದರ್ಶನ ಕಾರ್ಯಕ್ರಮಕ್ಕೆ ತೆರಳಿದರು. ಇದರಿಂದ ಅಸಮಾಧಾನಗೊಂಡ ಕಬ್ಬು ಬೆಳೆಗಾರರು ಜಿಲ್ಲಾಡಳಿತ ಭವನ ಆವರಣದಲ್ಲಿರುವ ಎಸ್‌ಬಿಐ ಬ್ಯಾಂಕ್ ಬಳಿ ಪ್ರತಿಭಟನೆ ನಡೆಸಿದರು.

ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಭಾಗ್ಯರಾಜ್ ಮಾತನಾಡಿ, ಕಾವೇರಿ, ಕಬಿನಿ ಭಾಗದ ರೈತರನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು. ಅಲ್ಲದೇ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ಬೆಳೆ ನಷ್ಟ ಕೊಡಬೇಕು. ಕುಡಿಯುವ ನೀರು ಉಳಿಸಬೇಕು ಎಂದು ಆಗ್ರಹಿಸಿದರು.

ಜಲಾಶಯಗಳಲ್ಲಿ ನೀರು ಖಾಲಿಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತದೆ. ಕುಡಿಯುವ ನೀರಿನ ಹೋರಾಟವನ್ನು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಡಳಿತ, ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಉದ್ದೇಶದಿಂದ ಖಾಲಿ ಮಡಿಕೆಗಳನ್ನು ಹಿಡಿದು ಹೋರಾಟ ಮಾಡಲಾಗುತ್ತಿದೆ ಎಂದರು. ಪ್ರತಿಭಟನೆಯಲ್ಲಿ ಸಂಘದ ಪಟೇಲ್ ಶಿವಮೂರ್ತಿ, ಹಾಲಿನ ನಾಗರಾಜು, ಕುಮಾರ್, ಮಂಜುನಾಥ್, ಶ್ರೀಕಂಠಪ್ಪ, ಮಹೇಶ್, ಸಿದ್ದಪ್ಪ, ಬಸವಣ್ಣ, ಮಹದೇವಸ್ವಾಮಿ ಇತರರಿದ್ದರು.

ಕರ್ನಾಟಕ ಸೇನಾಪಡೆ: ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ನಗರದಲ್ಲಿ ಘಂಟೆ ಹೊಡೆಯುವ ವಿನೂತನ ಚಳವಳಿ ನಡೆಸಿದರು.

ನಗರದ ಶ್ರೀಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ರಾಷ್ಟ್ರೀಯ ಹೆದ್ದಾರಿಯಲ್ಲಿ ಘಂಟೆ ಹೊತ್ತು ಬಾರಿಸುವ ಮೂಲಕ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ಕ್ರಮ ಖಂಡಿಸಿ ರೈತ, ಕನ್ನಡಪರ ಸಂಘಟನೆಗಳು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ. ರಾಜ್ಯಾದ್ಯಂತ ಕಾವೇರಿ ಕಿಚ್ಚು ಸದ್ದು ಮಾಡುತ್ತಿದ್ದರೂ ಕೂಡ ಯಾರೂ ಅದನ್ನು ಕೇಳಿಸಿಕೊಳ್ಳಲು ಸಿದ್ಧ ಇಲ್ಲ ಎಂದು ಘಂಟೆ ಹೊಡೆಯುವ ವಿನೂತನ ಚಳವಳಿ ಹಮ್ಮಿಕೊಂಡು ರಾಜ್ಯ ಸರ್ಕಾರಗಳಿಗೆ ಎಚ್ಚರಿಸುವ ಕೆಲಸ ಮಾಡಲಾಗುತ್ತಿದೆ ಎಂದರು. ತಮಿಳುನಾಡಿಗೆ ಬಿಟ್ಟಿರುವ ಕಾವೇರಿ ನೀರನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಚಾಮರಾಜನಗರ ಬಂದ್ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರಾಜು, ಮಹೇಶ್ ಗೌಡ, ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ್, ಮಹದೇವನಾಯಕ, ಚಾ.ರಾ.ಕುಮಾರ್, ಲಿಂಗರಾಜು, ನಾಗ, ಮಹೇಶ್, ಮಹೇಂದ್ರ, ನಂಜುಂಡ, ಆಟೋ ನಾಗೇಶ್, ವೀರಭದ್ರ, ಅರುಣ್ ಕುಮಾರ್‌ಗೌಡ ಇತರರಿದ್ದರು.

ಒಂದನೇ ಪುಟದಿಂದ

ಮಧ್ಯ ಪ್ರವೇಶಿಸಿ

ಸೆಪ್ಟೆಂಬರ್‌ನಲ್ಲಿ ಕಳೆದ 123 ವರ್ಷಗಳಲ್ಲೇ ಕಡಿಮೆ ಮಳೆಯಾಗಿದೆ ಎಂದು ತಿಳಿಸಿದ್ದಾರೆ. ಮನಮೋಹನ್‌ಸಿಂಗ್ ಅವರು ಪ್ರಧಾನಿ ಯಾಗಿದ್ದಾಗ ಕಾವೇರಿ ವಿಚಾರವನ್ನು ಕೋರ್ಟಿನಲ್ಲೇ ಬಗೆಹರಿಸಿಕೊಳ್ಳಿ ಎಂದು ಹೇಳಿದರು. ಸಂಸತ್ತಿನಲ್ಲಿ ಕಾವೇರಿ ವಿಷಯ ಪ್ರಸ್ತಾಪಿಸಿದಾಗ ರಾಜ್ಯ ಪ್ರತಿನಿಧಿಸುವ ಕೇಂದ್ರ ಸಚಿವರಾದ ಮಲ್ಲಿಕಾರ್ಜುನ ಖರ್ಗೆ, ವೀರಪ್ಪಮೊಯ್ಲಿ, ಎಸ್.ಎಂ.ಕೃಷ್ಣ ಹಾಗೂ ಕೆ.ಎಚ್.ಮುನಿಯಪ್ಪ ಅವರು ಬೆಂಬಲಿಸಲಿಲ್ಲ. ಸಂಸದರಾಗಿದ್ದ ಅನಂತ್ ಕುಮಾರ್ ಅವರ ಸಹಕಾರವನ್ನು ಕೋರಿದೆ. ಅವರು ಪಕ್ಷದ ಒಪ್ಪಿಗೆ ಪಡೆದು ನಂತರ ಬೆಂಬಲಿಸುವುದಾಗಿ ಮರು ದಿನ ಸಂಸತ್ತಿಗೆ ಬರಲಿಲ್ಲ. ಏಕಾಂಗಿ ಹೋರಾಟ ಮಾಡಬೇಕಾಯಿತು. ತಮಿಳುನಾಡಿನ 40 ಸಂಸದರಲ್ಲಿ ಒಗ್ಗಟ್ಟಿದೆ. ನಮ್ಮ ರಾಜ್ಯದ 28 ಸಂಸದರಲ್ಲಿ ಮೂರು ಗುಂಪಿವೆ. ಒಗ್ಗಟ್ಟಿನ ಕೊರತೆಯಿಂದ ಹೋರಾಟ ಫಲ ನೀಡುತ್ತಿಲ್ಲ ಎಂದರು. ನಮ್ಮ ಪಕ್ಷ ಅಧಿಕಾರಕ್ಕಾಗಿ ಈ ವಿಚಾರದಲ್ಲಿ ಹೋರಾಡುತ್ತಿಲ್ಲ. ನಾಡಿನ ಜನರ ಸಂಕಷ್ಟ ಪರಿಹಾರಕ್ಕಾಗಿ ಹೋರಾಡುತ್ತಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬಂದ್‌ಗೆ ಬೆಂಬಲ ನೀಡಿದ್ದಾರೆ. ಅಹಿತಕರ ಘಟನೆಗೆ ಅವಕಾಶವಿಲ್ಲದಂತೆ ಶಾಂತಿಯುತ ಹೋರಾಟ ನಡೆಸಬೇಕು.

ಇಂದು ಬಿಜೆಪಿಯೊಂದಿಗಿನ ಮೈತ್ರಿ ಸೇರಿದಂತೆ ಯಾವುದೇ ರಾಜಕೀಯ ವಿಚಾರ ಪ್ರಸ್ತಾಪಿಸುವುದಿಲ್ಲ. ಬುಧವಾರ ಆ ಬಗ್ಗೆ ಸುದೀರ್ಘವಾಗಿ ವಿವರ ನೀಡುವುದಾಗಿ ಅವರು ಹೇಳಿದರು.

ಬಿಜೆಪಿ ಪಟಾಪಟಿ ಚಡ್ಡಿ ಚಳವಳಿ

ಜೊತೆ ತಕ್ಷಣ ಮಾತುಕತೆ ಪ್ರಕ್ರಿಯೆ ಆರಂಭಿಸಬೇಕು. ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ಆರಂಭದಿಂದಲೂ ಮೈಮರೆತಿದ್ದು, ಇಂತಹ ನಿರ್ಲಿಪ್ತ ಧೋರಣೆಯಿಂದ ರೈತರು ಕಷ್ಟ ಪಡಬೇಕಾಗಿದೆ. ಬೆಳೆದು ನಿಂತಿರುವ ಬೆಳೆಗೂ ನೀರಿಲ್ಲ. ಕುಡಿಯಲು ನೀರಿಲ್ಲ. ಆದರೂ ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸಲಾಗುತ್ತಿದೆ. ಸರ್ಕಾರದ ರೈತ ವಿರೋಧಿ ನಿಲುವು ರೈತರನ್ನು ಸಂಕಷ್ಟಕ್ಕೆ ದೂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನೀರಿಲ್ಲದೆ ಬೆಳೆ ಬೆಳೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಸಂಕಷ್ಟದಲ್ಲಿರುವ ರೈತರಿಗೆ ಪ್ರತಿ ಎಕರೆಗೆ 25 ಸಾವಿರ ರೂ. ಪರಿಹಾರ ನೀಡಬೇಕು. ರೈತರ ಸಾಲ ಮನ್ನಾ ಮಾಡಬೇಕು. ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸಬೇಕು. ರಾಜ್ಯದ ಜನತೆಗೆ ಮದ್ಯ ಭಾಗ್ಯಕ್ಕಿಂತ ಕಾವೇರಿ ಭಾಗ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ, ಸುಪ್ರೀಂಕೋರ್ಟ್‌ನಲ್ಲಿ ವಾಸ್ತವ ಸ್ಥಿತಿ ಮುಂದಿಟ್ಟು ವಾದ ಮಂಡನೆ ಮಾಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಪ್ರಾಧಿಕಾರದ ಸಭೆಯಲ್ಲಿ ರಾಜ್ಯದ ಅಧಿಕಾರಿಗಳು ಖುದ್ದು ಹಾಜರಾಗದೆ ವೀಡಿಯೋ ಕಾನ್ಫರೆನ್ಸ್ ಮೂಲಕ ಮಾಹಿತಿ ನೀಡಿರುವುದು ಸರ್ಕಾರದ ವೈಫಲ್ಯತೆ ಎತ್ತಿ ತೋರಿಸಿದೆ. ನೀರು ಬಿಡುವುದಿಲ್ಲ ಎಂದು ಹೇಳಿದ ಸರ್ಕಾರ ಇದೀಗ ತಮಿಳುನಾಡಿಗೆ ನೀರು ಹರಿಸುತ್ತಿದೆ. ಕಾವೇರಿ ಕಣಿವೆ ರೈತರಿಗೆ ಒಂದು ಬೆಳೆಗೂ ನೀರಿಲ್ಲ. ಆದರೆ ತಮಿಳುನಾಡಿಗೆ 3ನೇ ಬೆಳೆಗೆ ಸಾಕಾಗುವಷ್ಟು ನೀರು ಬಿಡುತ್ತಿದೆ. ರೈತರಿಗೆ ನಿರಂತರ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಶಾಸಕ ಬಿ.ವೈ.ವಿಜಯೇಂದ್ರ ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯ ಆದಾಗ ಕೇಂದ್ರ ಸಚಿವ ಸ್ಥಾನಕ್ಕೆ ಅಂಬರೀಷ್ ಅವರು ರಾಜೀನಾಮೆ ನೀಡಿ, ರೈತರ ಪರ ನಿಂತರು. ಆದರೆ ಕಾಂಗ್ರೆಸ್ ಕಾವೇರಿ ವಿಷಯದಲ್ಲಿ ಸ್ವಾರ್ಥ ರಾಜಕಾರಣ ಮಾಡುತ್ತಿದೆ. ತಮಿಳುನಾಡಿನ ಡಿಎಂಕೆಯನ್ನು ಓಲೈಸಿಕೊಳ್ಳಲು ರಾಜ್ಯದ ರೈತರನ್ನು ಬಲಿಕೊಡುತ್ತಿದೆ. ರೈತರ ಮುಂದೆ ಮೊಸಳೆ ಕಣ್ಣೀರು ಸುರಿಸಿ ರಾತ್ರೋರಾತ್ರಿ ನೀರು ಹರಿಸಿದೆ ಎಂದರು.

ಚುನಾವಣೆಗೂ ಮುನ್ನ ರೈತರ ಹಿತ ಕಾಪಾಡುವುದಾಗಿ ಮೇಕೆದಾಟು ಪಾದಯಾತ್ರೆ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ಎಲ್ಲಾ ನಿರೀಕ್ಷೆ ಹುಸಿಯಾಗಿದ್ದು, ಇದೀಗ ರೈತರು ಬೀದಿಗೆ ನಿಲ್ಲುವ ಸ್ಥಿತಿ ನಿರ್ಮಾಣವಾಗಿದೆ. ದೇಶದ ಗಡಿ ಕಾಯುವ ಯೋಧ ಒಂದು ಕಣ್ಣು, ಅನ್ನ ನೀಡುವ ರೈತ ಮತ್ತೊಂದು ಕಣ್ಣು. ಹಾಗಾಗಿ ಸಂಕಷ್ಟದಲ್ಲಿರುವ ರೈತರ ಹಿತ ಕಾಪಾಡಲು ಕಾವೇರಿ ಹೋರಾಟಕ್ಕೆ ಬಂದಿದ್ದೇವೆಯೇ ಹೊರತು ರಾಜಕಾರಣ ಮಾಡಲು ಅಲ್ಲ. ರಾಜಕಾರಣ, ಚುನಾವಣೆ ಮತ್ತು ಅಧಿಕಾರ ಯಾವುದು ಶಾಶ್ವತವಲ್ಲ. ಕಾಂಗ್ರೆಸ್ ಸರ್ಕಾರ ರೈತರಿಗೆ ಸಂಕಷ್ಟ ತಂದೊಡ್ಡಿದೆ ಎಂದು ಟೀಕಿಸಿದರು.

ಕಾವೇರಿ ನದಿ ನೀರು ವಿಚಾರದಲ್ಲಿ ಸರ್ಕಾರ ರೈತರಿಗೆ ನಿರಂತರ ಅನ್ಯಾಯ ಮಾಡುತ್ತಾ ಬಂದಿದೆ. ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಕಾವೇರಿ ಹೋರಾಟ ಬೆಂಬಲಿಸಿದ್ದು, ಬೆಂಗಳೂರು ಬಂದ್‌ಗೆ ಬಿಜೆಪಿ ಬೆಂಬಲ ನೀಡಿದೆ. ರೈತರಿಗೆ ನ್ಯಾಯ ಕೊಡಿಸುವವರೆಗೂ ಹೋರಾಟ ನಿಲ್ಲದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಇಂಡುವಾಳು ಸಚ್ಚಿದಾನಂದ, ಡಾ. ಇಂದ್ರೇಶ್, ಕೆ.ಕೃಷ್ಣಪ್ಪ, ಎಸ್.ಪಿ.ಸ್ವಾಮಿ, ಮಳವಳ್ಳಿ ಮುನಿರಾಜು, ಸಿ.ಟಿ.ಮಂಜುನಾಥ್, ಎಂ.ಪಿ.ಅರುಣ್‌ಕುಮಾರ್, ನಾಗಾನಂದ್ ಸೇರಿದಂತೆ ನೂರಾರು ಮಂದಿ ಬಿಜೆಪಿ ಮುಖಂಡರು ಭಾಗವಹಿಸಿದ್ದರು.

ನೀರು ಹರಿಸುವುದು ಇಂದು ಅಂತ್ಯ

ಇನ್ನು ಕನ್ನಡಪರ ಸಂಘಟನೆಗಳು ಸೆ.29ಕ್ಕೆ ಕರ್ನಾಟಕ ಬಂದ್‌ಗೆ ಕರೆ ನೀಡಿವೆ. ಕಾವೇರಿ ಕಿಚ್ಚು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬೆನ್ನಲ್ಲೇ ಇನ್ನು ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರಿಕಾ ಹೇಳಿಕೆ ನೀಡಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಪ್ರತಿನಿತ್ಯ ತಮಿಳುನಾಡಿಗೆ 5 ಸಾವಿರ ಕ್ಯುಸೆಕ್ ನೀರು ಬಿಡುವಂತೆ ನೀಡಿದ್ದ ಆದೇಶವು ನಾಳೆ ಕೊನೆಗೊಳ್ಳಲಿದೆ. ಮತ್ತೆ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸುತ್ತೇವೆ. ಇದನ್ನೇ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೂ ತಿಳಿಸುತ್ತೇವೆ. ನಮ್ಮ ಸಂಕಷ್ಟ ಬಗೆಹರಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಧ್ಯೆ ಪ್ರವೇಶಿಸುವಂತೆ ಮನವಿ ಮಾಡಿರುವುದನ್ನು ನಾನು ಸ್ವಾಗತಿಸುತ್ತೇನೆ.

ನೆಲ, ಜಲದ ವಿಚಾರದಲ್ಲಿ ನಾವೂ ಪಕ್ಷಾತೀತವಾಗಿ ಕೆಲಸ ಮಾಡುತ್ತೇವೆ. ದೇವೇಗೌಡರು ನೀಡಿರುವ ಸಲಹೆಯನ್ನು ನಮ್ಮ ರಾಜ್ಯದ ಬಿಜೆಪಿ ಸಂಸದರು ಬೆಂಬಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಮಳೆ ಕೊರತೆಯಿಂದಾಗಿ ಉದ್ಭವವಾಗಿರುವ ಕಾವೇರಿ ನೀರು ಹಂಚಿಕೆ ವಿವಾದವನ್ನು ರಾಜ್ಯದ ರೈತರ ಹಿತರಕ್ಷಣೆಗೆ ಅಡ್ಡಿಯಾಗದಂತೆ ಬಗೆಹರಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ವಿವಾದ ಈಗ ನ್ಯಾಯಾಂಗ ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಂಗಳದಲ್ಲಿರುವುದರಿಂದ ಸಂವಿಧಾನಕ್ಕೆ ಬದ್ಧವಾಗಿರುವ ಸರ್ಕಾರ ಜವಾಬ್ದಾರಿಯುತವಾಗಿ ವರ್ತಿಸಬೇಕಾಗುತ್ತದೆ ಎಂದರು. ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿರುವುದು ಕೂಡಾ ಸತ್ಯ ಮತ್ತು ಸ್ಪಷ್ಟವಾಗಿದೆ. ಈಗ ನನ್ನ ರಾಜೀನಾಮೆ ಕೇಳುತ್ತಿರುವ ವಿರೋಧ ಪಕ್ಷಗಳು, ಸರ್ವಪಕ್ಷ ಸಭೆಯಲ್ಲಿ ಯಾಕೆ ಇದೇ ಮಾತು ಹೇಳಿಲ್ಲ? ಎಂದು ಪ್ರಶ್ನಿಸಿದರು.

ಈಗಿನ ವಿವಾದವನ್ನು ರಾಜ್ಯದ ಹಿತ ಮತ್ತು ನ್ಯಾಯಾಂಗದ ಗೌರವಕ್ಕೆ ಧಕ್ಕೆಯಾಗದಂತೆ ಸೂಕ್ಷ್ಮವಾಗಿ ನಿರ್ವಹಿಸಬೇಕಾಗಿದೆ. ರಾಜ್ಯ ಸರ್ಕಾರ ಆ ಪ್ರಯತ್ನದಲ್ಲಿದೆ. ನಾವು ಈಗಾಗಲೇ ಕಾನೂನು ಮತ್ತು ನೀರಾವರಿ ತಜ್ಞರ ಜೊತೆ ನಿರಂತರ ಸಂಪರ್ಕದಲ್ಲಿದ್ದು ಅವರ ಸಲಹೆ ಮೇರೆಗೆ ಮುಂದಿನ ನಿರ್ಧಾರವನ್ನು ಕೈಗೊಳ್ಳುತ್ತೇವೆ.

ರೈತರ ಆಕ್ರೋಶವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಬಂದ್–ಪ್ರತಿಭಟನೆ ಮಾಡುವ ರೈತರು ಮತ್ತು ಕನ್ನಡ ಹೋರಾಟಗಾರರ ಹಕ್ಕನ್ನೂ ನಾನು ಗೌರವಿಸುತ್ತೇನೆ, ಅವರ ಹೋರಾಟವನ್ನು ಹತ್ತಿಕ್ಕುವ ಕೆಲಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ. ನಮ್ಮ ಪ್ರಜ್ಞಾವಂತ ರೈತ ಮತ್ತು ಕನ್ನಡ ಹೋರಾಟಗಾರರು ಇಂತಹ ರಾಜಕೀಯ ದುರುದ್ದೇಶ ಪೂರಿತ ಅಪಪ್ರಚಾರಕ್ಕೆ ಬಲಿ ಯಾಗದೆ ಬಂದ್ –ಪ್ರತಿಭಟನೆಯನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ಶಾಂತಿಯುತವಾಗಿ ನಡೆಸಬೇಕೆಂದು ಕೋರುತ್ತೇನೆ.

'ಬೆಂಗಳೂರು ಬಂದ್'

ಸೆ.26ರಂದು ನಿಗದಿಯಾಗಿದ್ದ 2 ಮತ್ತು 4ನೇ ಸೆಮಿಸ್ಟರ್ ಸ್ನಾತಕ ಪದವಿ ಪರೀಕ್ಷೆಯನ್ನು ಸೆ.27ಕ್ಕೆ ಮುಂದೂಡಿದೆ. ಬೆಂ. ನಗರ ವಿವಿಯ 2 ಮತ್ತು 4ನೇ ಸೆಮಿಸ್ಟರ್ ಪದವಿ ಪರೀಕ್ಷೆಯನ್ನು ಅ.3ರಂದು ನಡೆಸಲು ಮರು ನಿಗದಿ ಮಾಡಿದೆ.

ಕರ್ನಾಟಕ ಬಂದ್: ಇನ್ನು 'ಕರ್ನಾಟಕ ಜಲ ಸಂರಕ್ಷಣಾ ಸಮಿತಿ', ರೈತ ಸಂಘಟನೆಗಳು ಮತ್ತು ಇತರ ಸಂಘಟನೆಗಳನ್ನು ಒಳಗೊಂಡ 'ಕನ್ನಡ ಒಕ್ಕೂಟ' ಬ್ಯಾನರ್ ಅಡಿಯಲ್ಲಿ ಸೆಪ್ಟೆಂಬರ್ 29 ರಂದು 'ಕರ್ನಾಟಕ ಬಂದ್'ಗೆ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕರೆ ನೀಡಲಾಗಿದೆ.

ಎರಡು ಬಂದ್‌ಗಳು ರೈತರು ಮತ್ತು ಕನ್ನಡ ಪರ ಸಂಘಟನೆಗಳ ನಡುವಿನ ಭಿನ್ನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತಿವೆ. ಯಾವ ದಿನದ ಬಂದ್‌ಗೆ ಯಾರು ಬೆಂಬಲ ನೀಡುತ್ತಾರೆ ಮತ್ತು ನಾಳೆ ಯಾವ ಸೇವೆಗಳು ಲಭ್ಯವಿರುತ್ತವೆ ಎಂಬ ಗೊಂದಲಕ್ಕೂ ಕಾರಣವಾಗಿದೆ.

ನಾಳೆ ಬೆಂಗಳೂರು ಬಂದ್ ಮಾಡುತ್ತೇವೆ ಎಂದು ಶಾಂತಕುಮಾರ್ ಅವರು ಹೇಳಿದ್ದರೆ, ಶುಕ್ರವಾರ ರಾಜ್ಯ ಬಂದ್‌ಗೆ ಕರೆ ನೀಡಿರುವ ವಾಟಾಳ್ ನಾಗರಾಜ್ ಅವರು ನಾಳಿನ ಬಂದ್‌ಗೆ ಕನ್ನಡ ಒಕ್ಕೂಟ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಏತನ್ಮಧ್ಯೆ, ನಾಳೆಯ ಬಂದ್‌ಗೆ ಬೆಂಬಲ ನೀಡುವುದಿಲ್ಲ. ಆದರೆ ಸೆಪ್ಟೆಂಬರ್ 29 ರಂದು ಕನ್ನಡ ಪರ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಓಲಾ–ಉಬರ್ ಚಾಲಕರ ಸಂಘ ಹೇಳಿದೆ.ಬಿಎಂಟಿಸಿ ಬಸ್‌ಗಳು ಪರಿಸ್ಥಿತಿ ನೋಡಿಕೊಂಡು ಸಂಚಾರ ಆರಂಭಿಸಲಿವೆ. ಆದರೆ ನಾಳೆ ನಮ್ಮ ಮೆಟ್ರೋ ಸೇವೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಗಳಿಂದ ಸಾಮರಸ್ಯದ ನಡಿಗೆ

ಮೈಸೂರು ಬಿಬಿ ಕೇರಿಯಲ್ಲಿ ಪಾದಯಾತ್ರೆ ; ಹಲವು ಮನೆಗಳಲ್ಲಿ ದೇವರ ಪೂಜೆ ನೆರವೇರಿಸಿದ ಶ್ರೀಗಳು



ಸೋಮವಾರ ಮೈಸೂರಿನ ಬಿಬಿ ಕೇರಿಯಲ್ಲಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಸಾಮರಸ್ಯದ ನಡಿಗೆ ಭಾವೈಕ್ಯತೆಯ ಸಂದೇಶ ಸಾರಿದರು.



ಬಿ.ಬಿ.ಕೇರಿಯ ಮನೆಯೊಂದರಲ್ಲಿ ದೇವರಿಗೆ ಶ್ರೀಗಳು ಪೂಜೆ ಸಲ್ಲಿಸುತ್ತಿರುವುದು

ಮೈಸೂರು,ಸೆ.25(ಪಿಎಂ)– ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು ಸೋಮವಾರ ಮೈಸೂರಿನ ಮಂಡಿ ಮೊಹಲ್ಲಾದ ಬಿಬಿ ಕೇರಿ ಪೌರಕಾರ್ಮಿಕರ ಕಾಲೋನಿಯಲ್ಲಿ ಸಾಮರಸ್ಯದ ನಡಿಗೆ ನಡೆಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಧರ್ಮ ಜಾಗರಣ ವಿಭಾಗ ಮತ್ತು ಸಾಮರಸ್ಯ ವೇದಿಕೆ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಈ ಪಾದಯಾತ್ರೆಯಲ್ಲಿ ಪಾಲ್ಗೊಂಡ ಶ್ರೀಗಳು, ಕಾಲೋನಿಯ ಹಲವು ಮನೆಗಳಿಗೆ ಭೇಟಿ ನೀಡಿ, ಅಲ್ಲಿನ ದೇವರು ಕೋಣೆಯಲ್ಲಿ ಸ್ವತಃ ಪೂಜೆ ಸಲ್ಲಿಸಿ ಕುಟುಂಬಸ್ಥರನ್ನು ಆಶೀರ್ವದಿಸಿದರು.

ಶ್ರೀಗಳು ಕಾಲೋನಿಗೆ ಭೇಟಿ ನೀಡುತ್ತಿದ್ದಂತೆ ಅವರಿಗೆ ಹೂ ಮಳೆ ಸುರಿಸಿ ಸ್ವಾಗತಿಸಿದ ಕಾಲೋನಿ ನಿವಾಸಿಗಳು ಪೂರ್ಣಕುಂಭ ಸ್ವಾಗತ ನೀಡಿದರು. ಅಲ್ಲದೆ, ಶ್ರೀಗಳ ಪಾದ ಪೂಜೆ ಮಾಡಿ ಅವರ ಆಶೀರ್ವಾದ ಪಡೆದರು. ಶ್ರೀಗಳ ಆಗಮನದ ಹಿನ್ನೆಲೆಯಲ್ಲಿ ಮನೆಯ ಮುಂದೆ ರಂಗೋಲಿ ಹಾಕಿ ಶೃಂಗರಿಸಿ ಅವರನ್ನು ಬರಮಾಡಿಕೊಂಡರು. ಭಗವದ್ ಧ್ವಜ ಹಾಗೂ ಕೇಸರಿ ತೋರಣ ಕಾಲೋನಿಯಲ್ಲಿ ರಾರಾಜಿಸಿದರೆ, ಶ್ರೀಗಳ ಪಾದಯಾತ್ರೆ ವೇಳೆ 'ಜೈ ಶ್ರೀರಾಮ್' ಮತ್ತು 'ನಾವೆಲ್ಲಾ ಹಿಂದೂ–ನಾವೆಲ್ಲಾ ಒಂದು' ಘೋಷಣೆಗಳು ಮೊಳಗಿದವು.

ಭೇಟಿ ನೀಡಿದ ಮನೆಗಳಲ್ಲಿ ಶ್ರೀಗಳಿಗೆ ಫಲ ಪುಷ್ಪಗಳನ್ನು ಅರ್ಪಿಸಲಾಯಿತು. ಪ್ರತಿ ಮನೆಗಳ ಸದಸ್ಯರನ್ನು ಆತ್ಮೀಯವಾಗಿ ಪರಿಚಯ ಮಾಡಿಕೊಂಡ ಶ್ರೀಗಳು, ಅವರ ಯೋಗಕ್ಷೇಮ ವಿಚಾರಿಸಿದರು. ಅಂತಿಮವಾಗಿ ಕಾಲೋನಿಯ ಗ್ರಾಮ ದೇವತೆ ಶ್ರೀದೇವಿ ಪಟ್ಟಲದಮ್ಮನ ದೇವಸ್ಥಾನಕ್ಕೆ ಭೇಟಿ ನೀಡಿದ ಶ್ರೀಗಳು, ಪಟ್ಟಲದಮ್ಮ ದೇವಿಗೆ ಪೂಜೆ ಸಲ್ಲಿಸಿದರು. ಸದರಿ ದೇವಸ್ಥಾನ ಶಿಥಿಲಗೊಂಡಿರುವ ಹಿನ್ನೆಲೆಯಲ್ಲಿ ತಮ್ಮ ಮಠದಿಂದ ಜೀರ್ಣೋದ್ಧಾರ ಮಾಡಿಸಿಕೊಡಬೇಕೆಂದು ಇದೇ ವೇಳೆ ಕಾಲೋನಿಯ ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ (ಪೌರಕಾರ್ಮಿಕ) ಯುವಕರ ಅಭಿವೃದ್ಧಿ ಮಹಾಸಂಘದ ವತಿಯಿಂದ ಶ್ರೀಗಳಿಗೆ ಮನವಿ ಸಲ್ಲಿಸಲಾಯಿತು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಶ್ರೀಗಳು, ಕಾಲೋನಿಯ ಶ್ರದ್ಧಾ ಕೇಂದ್ರವಾಗಿರುವ ಈ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮಠದಿಂದ ಸಾಧ್ಯವಾಗುವ ಎಲ್ಲಾ ಸಹಾಯ ಮಾಡಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಇದೇ ಆವರಣದಲ್ಲಿ ನೆರೆದಿದ್ದ ಕಾಲೋನಿ ನಿವಾಸಿಗಳಿಗೆ ಆಶೀರ್ವಚನ ನೀಡಿದ ಅವರು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಆಗುತ್ತಿದೆ. ಮುಂಬರುವ ಜನವರಿಯಲ್ಲಿ ರಾಮಮಂದಿರ ಉದ್ಘಾಟನೆಗೊಳ್ಳಲಿದೆ. ಈ ಸಂದರ್ಭದಲ್ಲಿ ಕಾಲೋನಿ ನಿವಾಸಿಗಳು ದೇವಸ್ಥಾನದಲ್ಲಿ ಭಜನೆ ಸೇರಿದಂತೆ ಸಾಧ್ಯವಿರುವ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿರುವ ನಾವೆಲ್ಲರೂ ನಮ್ಮ ಬಡಾವಣೆಗಳಲ್ಲಿ ಸಾಮರಸ್ಯ ಮತ್ತು ಧರ್ಮ ಪ್ರಜ್ಞೆಯನ್ನು ಉಳಿಸಿ ಒಗ್ಗಟ್ಟು, ಶಾಂತಿ ನೆಮ್ಮದಿಯಿಂದ ಬದುಕಬೇಕು. ಇದೇ ಹಿಂದೂ ಸಮಾಜದ ಶಕ್ತಿ. ಅದನ್ನು ಉಳಿಸುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಶ್ರೀಗಳು, ಇಲ್ಲಿನ ಪರಿಸರ ನೋಡಬೇಕೆಂದು ಭೇಟಿ ನೀಡಿದ್ದೆವು. ಜೊತೆಗೆ ಮೊನ್ನೆ ಕೃಷ್ಣಾಷ್ಟಮಿ ಆಗಿದ್ದು, ಕೃಷ್ಣ ದೇವರ ಪ್ರಸಾದ ಹಂಚಲು ಇಲ್ಲಿಗೆ ಭೇಟಿ ನೀಡಿದ್ದೆವು ಎಂದು ತಿಳಿಸಿದರು.

ಧರ್ಮ ಜಾಗರಣ ಮತ್ತು ಸಾಮರಸ್ಯ ವೇದಿಕೆ ಮುಖಂಡ ಡಾ.ಆನಂದ್‌ಕುಮಾರ್ ಮಾತನಾಡಿ, ಶ್ರೀಗಳು ಕಾಲೋನಿಯ ಪ್ರತಿ ಮನೆಗಳಿಗೂ ಹಂಚಲು ದೀಪಗಳನ್ನು ನೀಡಿದ್ದಾರೆ. ಅವುಗಳನ್ನು ಶ್ರೀರಾಮ ಜ್ಯೋತಿ ಆಗಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಗೊಳ್ಳುವವರೆಗೂ ಪ್ರತಿದಿನ ಹಚ್ಚುವಂತೆ ತಿಳಿಸಲು ಸೂಚಿಸಿದ್ದಾರೆ. ಇಂದು ಶ್ರೀಗಳು ಭೇಟಿ ನೀಡಿ ಪೂಜೆ ಸಲ್ಲಿಸಿದ ಮನೆಗಳಲ್ಲಿ ಶ್ರೀರಾಮ ಜ್ಯೋತಿಯಾಗಿ ಸ್ವತಃ ಅವರೇ ದೀಪಗಳನ್ನು ಹಚ್ಚಿದ್ದಾರೆ ಎಂದು ಪತ್ರಿಕೆಗೆ ತಿಳಿಸಿದರು.

ಹಿಂದೂ ಸಮಾಜದಲ್ಲಿ ಆಂತರಿಕವಾಗಿ ಬಾಂಧವ್ಯ ಮತ್ತು ಸಾಮರಸ್ಯವನ್ನು ಸದೃಢಗೊಳಿಸಿ, ಧರ್ಮ ಜಾಗೃತಿಯನ್ನು ಮೂಡಿಸುವ ಸಲುವಾಗಿ ಶ್ರೀಗಳು ತಮ್ಮ 36ನೇ ಚಾತುರ್ಮಾಸ್ಯ ವ್ರತದ ಸಂದರ್ಭದಲ್ಲಿ ಹಮ್ಮಿಕೊಂಡ ಹತ್ತಾರು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸರಣಿಯಲ್ಲಿ ದಲಿತರು ಮತ್ತು ಹಿಂದುಳಿದ ವರ್ಗಗಳ ಬಡಾವಣೆಗಳಿಗೆ ಸಾಮರಸ್ಯದ ನಡಿಗೆಯನ್ನು ಆದ್ಯತೆಯಲ್ಲಿ ಹಮ್ಮಿಕೊಳ್ಳುವಂತೆ ಚಾತುರ್ಮಾಸ್ಯ ಸಮಿತಿಗೆ ಸೂಚಿಸಿದ್ದರು. ಅದರಂತೆ ಇಂದು ಈ ಕಾರ್ಯಕ್ರಮ ನಡೆಯಿತು ಎಂದು ಅವರು ಹೇಳಿದರು.

ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾಮ್, ಸಾಮರಸ್ಯ ವೇದಿಕೆ ಸಂಚಾಲಕ ನಾಗೇಂದ್ರ ಕಾಲೋನಿಯ ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ (ಪೌರಕಾರ್ಮಿಕ) ಯುವಕರ ಅಭಿವೃದ್ಧಿ ಮಹಾಸಂಘದ ಕಾರ್ಯಾಧ್ಯಕ್ಷ ಕುಮಾರಸ್ವಾಮಿ, ಉಪಾಧ್ಯಕ್ಷ ದಿನೇಶ್ ಕುಮಾರ್, ಕಾರ್ಯದರ್ಶಿ ಪರಮೇಶ್, ಜಂಟಿ ಕಾರ್ಯದರ್ಶಿ ಶಂಕರ್, ಕಾಲೋನಿ ಮುಖಂಡರಾದ ಸಿ.ಆರ್.ವಿಜಿ, ಮಂಚಯ್ಯ ಮತ್ತಿತರರು ಹಾಜರಿದ್ದರು.

ನಾಳೆ ವಿಶ್ವ ಪ್ರವಾಸೋದ್ಯಮ ದಿನ

ಮೈಸೂರು ಅರಮನೆಯಲ್ಲಿ ಪ್ರವಾಸಿಗರಿಗೆ ಸಿಹಿ, ಹೂ ನೀಡಿ ಸಾಂಪ್ರದಾಯಿಕ ಸ್ವಾಗತ

ಮೈಸೂರು,ಸೆ.25(ಎಂಟಿವೈ)– ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಸೆ.27ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಅರಮನೆಗೆ ವರಹಾ ದ್ವಾರದ ಮೂಲಕ ಬರುವ ಪ್ರವಾಸಿಗರಿಗೆ ಸಿಹಿ ಹಾಗೂ ಹೂ ನೀಡಿ ಸ್ವಾಗತಿಸಲು ನಿರ್ಧರಿಸಲಾಗಿದೆ ಎಂದು ವಿಶ್ವ ಪ್ರವಾಸೋದ್ಯಮ ದಿನ ಸಮಿತಿ ಅಧ್ಯಕ್ಷ ಎಸ್.ಜೆ. ಅಶೋಕ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ವಿಶ್ವ ಪ್ರವಾಸೋದ್ಯಮ ದಿನವನ್ನು ಮೈಸೂರಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಜಿಲ್ಲಾಡಳಿತ, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್, ಪ್ರವಾಸೋದ್ಯಮ ಇಲಾಖೆ ಹಾಗೂ ಹೋಟೆಲ್ ಮಾಲೀಕರ ಸಂಘಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಪ್ರವಾಸೋದ್ಯಮ ದಿನ ಆಚರಿಸಲಾಗುತ್ತಿದ್ದು, ಸೆ.27ರಂದು ಬೆಳಗ್ಗೆ 10ಕ್ಕೆ ಅರಮನೆ ವರಹಾ ದ್ವಾರದ ಬಳಿ ಪ್ರವಾಸಿಗರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೂ, ಸಿಹಿ ನೀಡಿ ಸ್ವಾಗತಿಸಲಾಗುವುದು. ಮೈಸೂರಿಗೆ ಬರುವ ಪ್ರವಾಸಿಗರಿಗೆ ಸಾಂಪ್ರದಾಯಿಕ ಸ್ವಾಗತ ಕೋರುವ ಮೂಲಕ ಪ್ರವಾಸೋದ್ಯಮ ದಿನ ಆಚರಿಸಲಾಗುತ್ತದೆ ಎಂದರು.

ನಂತರ, ಪ್ರವಾಸೋದ್ಯಮ ಉತ್ತೇಜಿಸುವ ನಿಟ್ಟಿನಲ್ಲಿ ಗನ್‌ಹೌಸ್, ಬಿ.ಎನ್.ರಸ್ತೆ, ಚಾಮರಾಜೇಂದ್ರ ವೃತ್ತ, ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಮೂಲಕ ರೈಲ್ವೆ ನಿಲ್ದಾಣದವರೆಗೆ ಮೆರವಣಿಗೆ ನಡೆಸಲಾಗುವುದು. ಮೆರವಣಿಗೆಯಲ್ಲಿ ನಾದಸ್ವರ, ಕುದುರೆ ಸಾರೋಟು, ಡೊಳ್ಳು ಕುಣಿತ, ಕಂಸಾಳೆ, ಪೂಜಾ ಕುಣಿತ, ಪಟ ಕುಣಿತ, ಚಂಡೆ ಮದ್ದಳೆ, ಕೊಡವ ನೃತ್ಯ, ಗೊಂಬೆ ಗಾರುಡಿ, ಟಿಬೆಟಿಯನ್ನರ ಸಂಗೀತ, ಎಲೆಕ್ಟ್ರಿಕ್ ವಾಹನ, ಕಾಲೇಜು ವಿದ್ಯಾರ್ಥಿಗಳು ಹಾಗೂ ಪ್ರವಾಸೋದ್ಯಮಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಜೆ.ಪಿ. ಅರಸ್, ಪದಾಧಿಕಾರಿಗಳಾದ ಡೇವಿಡ್, ಎ.ಸಿ. ರವಿ, ಅನಿಲ್ ರಾಜ್ ಇದ್ದರು.



ಮೈಸೂರಿನ ನಜರ್‌ಬಾದ್‌ನ ವಿಜಯ ವಿನಾಯಕ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಗೌರಿ ಗಣೇಶ ಪೂಜಾ ಕಾರ್ಯಕ್ರಮದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಸನ್ಮಾನ ಸ್ವೀಕರಿಸಿ, ಮಾತನಾಡಿದರು. ಈ ವೇಳೆ ಬ್ಯಾಂಕಿನ ನಿರ್ದೇಶಕ ಎಸ್.ಆರ್. ರವಿಕುಮಾರ್, ವಕೀಲರಾದ ಯಶೋಧ, ಸತೀಶ್, ಶ್ರೇಯಸ್, ದರ್ಶನ್, ಸುಹಾಸ್ ಇನ್ನಿತರರು ಉಪಸ್ಥಿತರಿದ್ದರು.

ಅರಣ್ಯ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಸದಸ್ಯರಿಗೆ ನಿವೇಶನ ನೀಡದೆ ವಂಚನೆ ಯತ್ನ ಆರೋಪ

ಮೈಸೂರು, ಸೆ.25(ಎಂಟಿವೈ)– ಮೈಸೂರು ಜಿಲ್ಲಾ ಅರಣ್ಯ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತದಲ್ಲಿ ಸದಸ್ಯರಿಗೆ ನಿವೇಶನ ನೀಡದೆ ಸಂಘಕ್ಕೆ ಸಂಬಂಧಪಡದೇ ಇರುವ ಮೂವರು ವ್ಯಕ್ತಿಗಳಿಗೆ 2.6 ಕೋಟಿ ರೂ. ಚೆಕ್ ನೀಡುವ ಮೂಲಕ ಅವ್ಯವಹಾರ ನಡೆಸಿ, ಸದಸ್ಯರಿಗೆ ವಂಚಿಸುವ ಹುನ್ನಾರ ನಡೆಸಲಾಗಿದೆ ಎಂದು ನಿವೃತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹೆಚ್.ಎಸ್. ಜಯಕುಮಾರ್ ಆರೋಪಿಸಿದ್ದಾರೆ.




ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 1997ರಲ್ಲಿ ಮೈಸೂರು ಜಿಲ್ಲಾ ಅರಣ್ಯ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಅಸ್ತಿತ್ವಕ್ಕೆ ಬಂದಿದೆ. ಆದರೆ ಸಂಘದ ಆಡಳಿತ ಮಂಡಳಿ ಅವ್ಯವಹಾರ ನಡೆಸುತ್ತಿದೆ. ಕಳೆದ 24 ವರ್ಷಗಳಿಂದಲೂ ನೌಕರರಿಗೆ ನಿವೇಶನ ನೀಡದೇ ವಂಚಿಸಲೆತ್ನಿಸಲಾಗುತ್ತಿದೆ. ನಿವೇಶನಕ್ಕಾಗಿ ನೌಕರರು ನೀಡಿದ ಹಣ ದುರುಪಯೋಗ ಪಡಿಸಿಕೊಳ್ಳಲಾಗಿದೆ. ಹೀಗಾಗಿ ಸಹಕಾರ ಇಲಾಖೆ ಜಂಟಿ ನಿಬಂಧಕರು ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಸಂಘದಲ್ಲಿ 670 ಸದಸ್ಯರಿದ್ದು, 2016ರಲ್ಲಿ ಸಂಘ ನೀಡಿದ ನೋಟಿಸ್‌ನಿಂದಾಗಿ ಸುಮಾರು 470 ಸದಸ್ಯರು ಐದು ಸಾವಿರದಿಂದ ಎರಡು ಲಕ್ಷ ರೂ. ವರೆಗೂ ಹಣ ಪಾವತಿಸಿದ್ದಾರೆ. ಆದರೆ ಇದುವರೆಗೂ ಯಾರಿಗೂ ನಿವೇಶನ ನೀಡಿಲ್ಲ. ಈ ಹಣದಲ್ಲಿ ಅಕ್ರಮವಾಗಿ ಕೆಲವರಿಗೆ 2.60 ಕೋಟಿ ಹಣ ಪಾವತಿಸಲಾಗಿದೆ. ಇದಲ್ಲದೆ ಇದುವರೆಗೆ ನಕಲಿ ಆಡಿಟ್ ವರದಿ ಮಂಡಿಸುತ್ತ ಸದಸ್ಯರನ್ನು ದಾರಿ ತಪ್ಪಿಸುವ ಕೆಲಸ ನಡೆದಿದೆ. ಆದ್ದರಿಂದ ಸಹಕಾರ ಸಂಘಗಳ ಜಂಟಿ ನಿಬಂಧಕರು ಸಂಘದ ಈಗಿನ ಆಡಳಿತ ಮಂಡಳಿಯನ್ನು ವಜಾಗೊಳಿಸಬೇಕು. ಇವರ ವಿರುದ್ಧ ಸಮಗ್ರ ತನಿಖೆ ನಡೆಸಬೇಕು. ದುರುಪಯೋಗದ ಹಣ ವಸೂಲಿ ಮಾಡಬೇಕು, ಸದಸ್ಯರಿಗೆ ನಿವೇಶನ ದೊರಕುವಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಸದಸ್ಯರಾದ ಕುಳ್ಳೇಗೌಡ, ರಾಮಚಂದ್ರ ಹಾಗೂ ಮೃತ ಸದಸ್ಯರೊಬ್ಬರ ಪುತ್ರ ಕಾಂತರಾಜು ಇದ್ದರು.



ಮೈಸೂರಿನ ಬೋಗಾದಿ–ಗದ್ದಿಗೆ ಮುಖ್ಯರಸ್ತೆಯಲ್ಲಿ ಬರುವ ಟ್ರೆಂಡ್ಸ್ ಅಪಾರ್ಟ್‌ಮೆಂಟ್ ನಿವಾಸಿಗಳು ಅದ್ದೂರಿಯಾಗಿ ಗಣೇಶೋತ್ಸವವನ್ನು ಆಚರಿಸಿದರು. ಈ ವೇಳೆ ಲೇಡಿಸ್ ಫೋರಂ ವತಿಯಿಂದ ನಾನಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಅಶೋಕಪುರಂ ಫ್ರೆಂಡ್ಸ್ ಬಳಗದಿಂದ ಅ.1ರಂದು ಕುಸ್ತಿ ಪಂದ್ಯಾವಳಿ



ಮೈಸೂರು,ಸೆ.25(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಮೈಸೂರಿನ ಅಶೋಕಪುರಂ ಫ್ರೆಂಡ್ಸ್ ಬಳಗದ ವತಿಯಿಂದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಅ.1ರಂದು ಮಧ್ಯಾಹ್ನ 3ಕ್ಕೆ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯಲ್ಲಿ ಸುಮಾರು 60 ಮಂದಿ ಕುಸ್ತಿ ಪಟುಗಳು ಪಾಲ್ಗೊಳ್ಳಲಿದ್ದಾರೆ. 30 ಜೋಡಿ ಕುಸ್ತಿ ನಡೆಯಲಿದೆ. ಮಾರ್ಫಿಟ್ ಪ್ರಮುಖ ಆಕರ್ಷಣೆಯಾಗಿದೆ. ನೇಪಾಳ, ಹರಿಯಾಣ, ಮಹಾರಾಷ್ಟ್ರ, ಬೆಳಗಾವಿ, ದಾವಣಗೆರೆ ಹಾಗೂ ಜಿಲ್ಲೆಯ ಕುಸ್ತಿ ಪಟುಗಳು ಪಾಲ್ಗೊಳ್ಳುತ್ತಿದ್ದು, ಪ್ರತಿ ಪಂದ್ಯವೂ ರೋಮಾಂಚನಕಾರಿಯಾಗಿರಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ತಿಳಿಸಿದರು. ಈ ಪಂದ್ಯಾವಳಿಯಲ್ಲಿ ಉತ್ತಮ ಕುಸ್ತಿಪಟುಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ, ಪೈ.ಕರಗಯ್ಯ ಪ್ರಶಸ್ತಿ, ಪೈ.ಡಿ.ವಿ. ವೆಂಕಟಯ್ಯ ಪ್ರಶಸ್ತಿ, ಪೈ.ಎಂ. ಎಲ್.ಪುಟ್ಟಯ್ಯ ಪ್ರಶಸ್ತಿ, ಪೈ.ಗಂಗಾಧರ್ ಪ್ರಶಸ್ತಿ ನೀಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪೈಲ್ವಾನರಾದ ಕೃಷ್ಣ, ಸಿದ್ದರಾಜು, ರವಿ, ಅಭಿಷೇಕ್ ಹಾಗೂ ವಿನಾಶ್ ಇದ್ದರು.

ಅ.8ರಂದು ಗಂಗಾವತರಣ ನಾಟಕ ಪ್ರದರ್ಶನ



ಮೈಸೂರು,ಸೆ.25(ಎಂಟಿವೈ)– ಮೈಸೂರಿನ ನಟನ ರಂಗಶಾಲೆಯಲ್ಲಿ ಅ.8ರಂದು ಮಧ್ಯಾಹ್ನ 3 ಹಾಗೂ ಸಂಜೆ 6.30ಕ್ಕೆ ಗಂಗಾವತರಣ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ನಿರ್ದೇಶಕ ರಾಜೇಂದ್ರ ಕಾರಂತ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಹೆಚ್‌ಎಸ್ ಕಾಲೇಜಿನ ಅಂಗಳದಲ್ಲಿ ವಿದ್ಯಾರ್ಥಿ ತಂಡವಾಗಿದ್ದ ರಂಗಸೌರಭ ಇದೀಗ ಹವ್ಯಾಸಿ ರಂಗತಂಡವಾಗಿ ರೂಪುಗೊಂಡಿದೆ. ಈ ಹಿನ್ನೆಲೆಯಲ್ಲಿ ಡಾ.ದ.ರಾ. ಬೇಂದ್ರೆ ಅವರ ಬದುಕು ಮತ್ತು ಬರಹಗಳನ್ನು ಆಧರಿಸಿದ 'ಗಂಗಾವತರಣ' ನಾಟಕವನ್ನು ಮೈಸೂರಿನ ನಟನ ರಂಗಶಾಲೆಯಲ್ಲಿ ಪ್ರದರ್ಶಿಸಲಾಗುತ್ತಿದೆ. ಈ ನಾಟಕ ತಂಡದ ಹೆಮ್ಮೆಯ ಪ್ರಸ್ತುತಿಯಾಗಿದ್ದು, ನಾಟಕದ ಪರಿಕಲ್ಪನೆ ಡಿ.ಎಸ್. ವೆಂಕಟರಾಜು ಅವರದ್ದಾಗಿದೆ. ಜೊತೆಗೆ, ರಾಜ್ಯದ ಇತರೆಡೆ ಯಶಸ್ವಿ ಪ್ರದರ್ಶನ ಕಂಡಿದ್ದು, ನಗರದಲ್ಲಿ ಚೊಚ್ಚಲ ಪ್ರದರ್ಶನವಾಗಿದೆ ಎಂದರು. ಹಿರಿಯ ರಂಗಕರ್ಮಿ ಮಂಡ್ಯ ರಮೇಶ್, ಸುನಿಲ್, ಪ್ರಮೋದ್ ಶೆಟ್ಟಿ, ಎ. ಪದ್ಮನಾಭ್ ಇದ್ದರು.

ಮನಸೂರೆಗೊಂಡ 'ಎಂದೂ ಮರೆಯದ ಹಾಡು'



ಮೈಸೂರು,ಸೆ.25(ಪಿಎಂ)– ಖ್ಯಾತ ಗಾಯಕರಾದ ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್ ಅವರ ಸ್ಮರಣಾರ್ಥ ನಡೆದ 'ಗಾನ ನಮನ ; ಎಂದೂ ಮರೆಯದ ಹಾಡು' ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಈ ಇಬ್ಬರು ದಿಗ್ಗಜರ ಹಾಡುಗಳ ಗಾಯನದ ಮಾಧುರ್ಯ ಶ್ರೋತೃಗಳ ಮನಸೂರೆಗೊಂಡಿತು.

ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಸಭಾಂಗಣದಲ್ಲಿ ಶನಿವಾರ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಐಎ) ಮೈಸೂರು ಘಟಕ ಹಾಗೂ ವಿದ್ಯುಲಹರಿ ಸಂಸ್ಥೆ ಜಂಟಿ ಆಶ್ರಯದಲ್ಲಿ ನಡೆದ ಈ ಸಂಗೀತ ಕಾರ್ಯಕ್ರಮವು ಸಭಿಕರನ್ನು ಸಂಗೀತದ ಅಲೆಯಲ್ಲಿ ತೇಲಿಸಿತು.

ದೂರದರ್ಶನ ಕಲಾವಿದ ಎ.ಡಿ.ಶ್ರೀನಿವಾಸನ್ ಸಾರಥ್ಯದಲ್ಲಿ ಗಾಯಕರಾದ ಡಾ.ಕೆ.ಎಸ್.ಮಂಜುನಾಥ್, ಹಂಸಿನಿ ಕುಮಾರ್ ಸೇರಿದಂತೆ ಇನ್ನಿತರ ಗಾಯಕರು ಇಬ್ಬರು ದಿಗ್ಗಜ ಗಾಯಕರ ಹಾಡುಗಳನ್ನು ಸಾದರಪಡಿಸಿದರು.

ಬಿಐಎ ಮೈಸೂರು ಘಟಕ ಹಾಗೂ ಇದರ ಸ್ಫೂರ್ತಿ ಮಹಿಳಾ ಘಟಕದ ಸದಸ್ಯರು ಸೇರಿದಂತೆ ಸಾರ್ವಜನಿಕರು ಸಭಾಂಗಣದಲ್ಲಿ ಕಿಕ್ಕಿರಿದು ನೆರೆದು ಸಂಗೀತದ ಸಡಗರದ ಸಂಭ್ರಮದಲ್ಲಿ ತೇಲಿದರು. ಬಿಐಎ ಮೈಸೂರು ಘಟಕದ ಅಧ್ಯಕ್ಷ ನಾಗರಾಜ್ ಬೈರಿ ಎಲ್ಲರನ್ನು ಸ್ವಾಗತಿಸಿದರು. ಬಿಐಎ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಉಮೇಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಮಂಗಳವಾರ 26 ಸೆಪ್ಟೆಂಬರ್ 2023

ಪಿಎಸ್ಐ ನೇಮಕಾತಿ ಹಗರಣ: ಐಪಿಎಸ್ ಅಧಿಕಾರಿ ಅಮೃತ್ ಪಾಲ್‌ಗೆ ಷರತ್ತು ಬದ್ಧ ಜಾಮೀನು



ಬೆಂಗಳೂರು: ಪಿಎಸ್ಐ ನೇಮಕಾತಿ ಹಗರಣ ಸಂಬಂಧ ಹಿರಿಯ ಐಪಿಎಸ್ ಅಧಿಕಾರಿ ಅಮೃತ್ ಪಾಲ್ ಅವರಿಗೆ ಕರ್ನಾಟಕ ಹೈಕೋರ್ಟ್ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ.

ಕೋರ್ಟ್ ಅನುಮತಿ ಯಿಲ್ಲದೇ ವಿದೇಶಕ್ಕೆ ಪ್ರಯಾಣಿಸುವಂತಿಲ್ಲ, ಸಾಕ್ಷಿಗಳ ಮೇಲೆ ಪ್ರಭಾವ ಬೀರ ಬಾರದು. 5 ಲಕ್ಷ ಮೌಲ್ಯದ ಬಾಂಡ್ ಇಬ್ಬರು ಶ್ಯೂರಿಟಿ ಒದಗಿಸುವಂತೆ ಕೋರ್ಟ್ ಸೂಚಿಸಿದೆ. ಇನ್ನು ಬಂಧನ ವಾಗಿ ಒಂದು ವರ್ಷ ಎರಡು ತಿಂಗಳ ಬಳಿಕ ಅಮೃತ್ ಪೌಲ್‌ಗೆ ಜಾಮೀನು ಸಿಕ್ಕಿದೆ.

2021ರ ಅಕ್ಟೋಬರ್ 3ರಂದು 545 ಪಿಎಸ್ಐಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆಯು 92 ಕೇಂದ್ರಗಳಲ್ಲಿ ನಡೆಯಿತು. ಪಿಎಸ್ಐ ನೇಮ ಕಾತಿ ಹಗರಣ ಹೊರಬಂದ ಬಳಿಕ ಪರೀಕ್ಷೆ ಬರೆದ 52 ಅಭ್ಯರ್ಥಿಗಳು ಸೇರಿದಂತೆ 110 ಜನರನ್ನು ಬಂಧಿಸಲಾಗಿದೆ ಅಮೃತ್ ಪೌಲ್ ಪಿಎಸ್ಐ ಹುದ್ದೆಯ ಆಕಾಂಕ್ಷಿಗಳಿಂದ 1.35 ಕೋಟಿ ರೂಪಾಯಿ ಹಣವನ್ನು ಪಡೆದಿ ದ್ದಾರೆ ಎಂಬ ಆರೋಪವಿದೆ. ತನಿಖೆ ವೇಳೆ ಈ ಹಣ ತಮ್ಮ ಸಹಾಯಕ ಹಾಗೂ ಬೇನಾಮಿ ಶಂಭುಲಿಂಗ ಸ್ವಾಮಿಗೆ ನೀಡಿದ್ದು ಬೆಳಕಿಗೆ ಬಂದಿತ್ತು. ಈತನಿಂದ 41 ಲಕ್ಷ ರೂ.ಗಳನ್ನು ಸಿಐಡಿ ವಶಪಡಿಸಿಕೊಂಡಿತ್ತು.

ಒಂದನೇ ಪುಟದಿಂದ

ಬಂದ್‌ಗೆ ಅನುಮತಿ ನೀಡಿಲ್ಲ

ಪ್ರತಿಭಟನೆ, ಮೆರವಣಿಗೆಗೆ ನಿರ್ಬಂಧ ವಿದೆ. ಸುಪ್ರಿಂಕೋರ್ಟ್ ಆದೇಶದಂತೆ ಯಾವುದೇ ಬಂದ್‌ಗೆ ಅನುಮತಿ ನೀಡಿಲ್ಲ. ಬಂದ್‌ನಲ್ಲಿ ಆಸ್ತಿ ಪಾಸ್ತಿ ನಷ್ಟವಾದರೆ ಆಯೋಜಕರೇ ಹೊಣೆ ಎಂಬ ಸೂಚನೆ ಯಿದೆ. ನಾಳೆ ಬಂದ್‌ಗೆ ಅವಕಾಶವಿಲ್ಲ, ಅನುಮತಿ ಕೊಡುವುದಿಲ್ಲ. ಒತ್ತಾಯ ಪೂರ್ವಕವಾಗಿ ಬಂದ್ ಮಾಡಿಸುವಂತಿಲ್ಲ ಎಂದು ದಯಾನಂದ ಹೇಳಿದರು.

ಬಲವಂತವಾಗಿ ಮುಚ್ಚಿಸುವಂತಿಲ್ಲ: ನಾಳೆ ಇಡೀ ಬೆಂಗಳೂರು ಪೊಲೀಸ್ ಬಂದೋಬಸ್ತ್ ಇರುತ್ತದೆ. ಹೊಯ್ಸಳ ಸಿಬ್ಬಂದಿ ಸುತ್ತುತ್ತಿರುತ್ತಾರೆ. ಸಿಐಡಿ ಹಾಗೂ ಐಎಸ್‌ಡಿ ಅಧಿಕಾರಿಗಳನ್ನು ಭದ್ರತೆಗೆ ನಿಯೋಜಿಸಲಾಗುತ್ತದೆ. ಒತ್ತಾಯ ಪೂರ್ವಕವಾಗಿ ಯಾರೂ ವಾಹನ ಗಳನ್ನು ನಿಲ್ಲಿಸುವಂತಿಲ್ಲ. ವಾಹನಗಳು ತಡೆಯುವುದು, ಅಂಗಡಿ ಮುಚ್ಚಿಸುವುದು ಮಾಡಿದರೆ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಆಯುಕ್ತರು ಎಚ್ಚರಿಸಿದರು.

ನಿಷೇಧಾಜ್ಞೆ ಜಾರಿ: ಬಂದ್ ಹಿನ್ನೆಲೆಯಲ್ಲಿ ಸೋಮವಾರ ಮಧ್ಯರಾತ್ರಿ 12 ಗಂಟೆಯಿಂದ ನಾಳೆ ರಾತ್ರಿ 12 ಗಂಟೆ ವರೆಗೂ ನಿಷೇಧಾಜ್ಞೆ ಜಾರಿಯಲ್ಲಿರಲಿದೆ. 60 ಕೆಎಸ್‌ಆರ್‌ಪಿ ಮತ್ತು 40 ಸಿಎಆರ್ ತುಕಡಿಗಳ ನಿಯೋಜನೆಯಾಗಲಿದೆ. 2016ರಲ್ಲಿ ನಡೆದ ಘಟನೆ ಮತ್ತೆ ನಡೆಯ ದಂತೆ ಎಚ್ಚರಿಕೆ ವಹಿಸಲಾಗಿದೆ. ಬಸ್‌ಗಳಿಗೆ ಎಸ್ಕಾರ್ಟ್ ನೀಡುವ ಬಗ್ಗೆಯೂ ಚರ್ಚೆ ಮಾಡಲಾಗುತ್ತಿದೆ. ಸುಮಾರು 20 ಸಾವಿರ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ ಎಂದರು.

ಎರಡನೇ ತಂಡದ ಐವರು ಸದಸ್ಯರು

ಭೀಮ, ಮಹೇಂದ್ರ, ಧನಂಜಯ, ವಿಜಯ, ವರಲಕ್ಷ್ಮೀ, ಗೋಪಿ, ಕಂಜನ್ ಅರಮನೆ ಆವರಣದಲ್ಲಿ ಠಿಕಾಣಿ ಹೂಡಿವೆ. ಮೈಸೂರಿಗೆ ಬಂದು, ನಂತರ ಹುಲಿ ಸೆರೆ ಕಾರ್ಯಾಚರಣೆಗೆ ತೆರಳಿದ್ದ ಗಜಪಡೆಯ ಮಾಜಿ ನಾಯಕ ಅರ್ಜುನ ಸಹ ಈಗ ಗಜಪಡೆ ಸೇರಿಕೊಂಡಿದ್ದಾನೆ. ಈ ಎಲ್ಲಾ 9 ಆನೆಗಳು ಈಗಾಗಲೇ ತಾಲೀಮು ನಿರತವಾಗಿವೆ.

ನೀರಿಗೆ ಮೈಯೊಡ್ಡಿದ ಆನೆಗಳು: ವಿವಿಧ ಕ್ಯಾಂಪ್‌ನಿಂದ ಅರಮನೆಗೆ ಆಗಮಿಸಿದ 2ನೇ ತಂಡದ ರೋಹಿತ, ಹಿರಣ್ಯ, ಲಕ್ಷ್ಮೀ, ಪ್ರಶಾಂತ, ಸುಗ್ರೀವ ಅರಮನೆ ಆವರಣದಲ್ಲಿ ಮಿಂದೆದ್ದವು. ಈ ಮೂಲಕ ಪ್ರಯಾಣದ ಆಯಾಸದಿಂದ ಹೊರ ಬಂದವು.

ಸಾಂಪ್ರದಾಯಿಕ ಪೂಜೆ: ಅರಮನೆಗೆ ಆಗಮಿಸಿದ ಆನೆಗಳಿಗೆ ಅರಮನೆ ಅಂಗಳದಲ್ಲಿರುವ ಕೋಡಿಭೈರವ ದೇವಾಲಯದ ಬಳಿ ಪೂಜೆ ಸಲ್ಲಿಸಿ ಸಾಂಪ್ರದಾಯಿಕವಾಗಿ ಸ್ವಾಗತ ಕೋರಲಾಯಿತು. ಬೆಲ್ಲ, ಕಬ್ಬು ತಿಂದ ಆನೆಗಳು ಬಳಿಕ ಉಳಿದ ಆನೆಗಳೊಂದಿಗೆ ಸೇರಿಕೊಂಡು ಹರ್ಷಚಿತ್ತರಾದವು.

ಹೊಸ ಆನೆಗಳಿಗೂ ತಾಲೀಮು: ಈ ವೇಳೆ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್ ಕುಮಾರ್ ಮಾತನಾಡಿ, ದಸರಾ ಮಹೋತ್ಸವ ಗಜಪಡೆಯ ಎಲ್ಲ ಆನೆಗಳು ಅರಮನೆಗೆ ಆಗಮಿಸಿವೆ. ಹೊಸ ಆನೆಗಳನ್ನು ಮೊದಲ ತಂಡದ ಆನೆಗಳೊಂದಿಗೆ ಕರೆದೊಯ್ಯುತ್ತೇವೆ. ದಸರಾ ಆನೆಗಳ ಉಸ್ತುವಾರಿ ವಹಿಸಿರುವ ಪಶುವೈದ್ಯಾಧಿಕಾರಿ ಡಾ.ಮಜೀದ್ ಅವರ ಪರಿಶೀಲನೆ, ಶಿಫಾರಸಿನ ಮೇಲೆ 2ನೇ ತಂಡದ ಆನೆಗಳಿಗೂ ವಿಶೇಷ ಆಹಾರವನ್ನು ಮಂಗಳವಾರದಿಂದಲೇ ನೀಡಲಾಗುವುದು. ಈ ತಂಡದಲ್ಲಿರುವ ಮೂರು ಆನೆಗಳು ಮೊದಲ ಬಾರಿಗೆ ದಸರಾದಲ್ಲಿ ಭಾಗಿಯಾಗುತ್ತಿರುವುದು ವಿಶೇಷ. ಮೊದಲ ತಂಡದಲ್ಲಿ ಬಂದಿರುವ ಕಂಜನ್ ಕೂಡ ಇದೇ ಮೊದಲು ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದಾನೆ.

ಆನೆಗಳ ಸಿಬ್ಬಂದಿ, ಅವರ ಕುಟುಂಬ ವರ್ಗದವರಿಗೆ ಈಗಾಗಲೇ ಶೆಡ್ಡುಗಳನ್ನು ನಿರ್ಮಾಣ ಮಾಡಲಾಗಿದ್ದು, ಅವರ ನಿತ್ಯದ ಅಗತ್ಯ ಸಾಮಗ್ರಿಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

750 ಕೆಜಿ ಭಾರ ಹೊತ್ತು ಸಾಗಿದ ಅಭಿಮನ್ಯು: ಕಳೆದ ಒಂದು ವಾರದಿಂದ ಭಾರ ಹೊರುವ ತಾಲೀಮು ನಡೆಸಲಾಗುತ್ತಿದ್ದು, ಇಂದು ಬೆಳಗ್ಗೆ ಅಂಬಾರಿ ಅಭಿಮನ್ಯುಗೆ 750 ಕೆಜಿ ಭಾರವನ್ನು ಹೊರಿಸಿ ತಾಲೀಮು ನಡೆಸಲಾಯಿತು. ಅರಮನೆಯಿಂದ ಇತರೆ ಆನೆಗಳೊಂದಿಗೆ ಭಾರ ಹೊತ್ತು ಸಾಗಿದ ಅಭಿಮನ್ಯು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಅನಾಯಾಸವಾಗಿ ಸಾಗಿ ಗಮನ ಸೆಳೆದ. ನಂತರ ಮಹೇಂದ್ರ ಆನೆಗೂ ಇದರಲ್ಲಿ ಶೇ.75ರಷ್ಟು ಭಾರವನ್ನು ಹೊರಿಸಲಾಗುವುದು. ಆಯ್ದ ಆನೆಗಳಿಗೆ ಹಂತ ಹಂತವಾಗಿ ನೂರರಷ್ಟು ಭಾರವನ್ನು ಹೊರಿಸಿ ಅಭ್ಯಾಸ ಮಾಡಲಾಗುವುದು. ಈವರೆಗೂ ತಾಲೀಮು ಯೋಜನಾಬದ್ಧವಾಗಿ ನಡೆಯುತ್ತಿದೆ. ಎಲ್ಲ ಆನೆಗಳು ಆರೋಗ್ಯದಿಂದಿವೆ ಎಂದರು.

ಸಚಿವರಿಂದ ಶಾಲೆ ಉದ್ಘಾಟನೆ: ದಸರಾ ಗಜಪಡೆಯೊಂದಿಗೆ ಆಗಮಿಸಿರುವ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಅರಮನೆ ಆವರಣದಲ್ಲಿ ತಾತ್ಕಾಲಿಕ ಶಾಲೆ ತೆರೆಯಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರಿಂದ ಉದ್ಘಾಟಿಸಲಾಗುವುದು ಎಂದು ತಿಳಿಸಿದರು.

ಈ ಲಕ್ಷ್ಮೀ ಬೇರೆ: ಕಳೆದ ಬಾರಿ ಬಂದಿದ್ದ 'ಲಕ್ಷ್ಮಿ' ಆನೆಯೇ ಬೇರೆ. ಈ ಸಲ ಬಂದಿರುವ 'ಲಕ್ಷ್ಮಿ'ಯೇ ಬೇರೆ. ಕಳೆದ ಸಲ ಬಂಡೀಪುರದ ರಾಮಪುರ ಕ್ಯಾಂಪ್‌ನಿಂದ ಕರೆತರಲಾಗಿದ್ದ ಲಕ್ಷ್ಮೀ ಆನೆಯು ಅರಮನೆ ಆವರಣದಲ್ಲಿ ಗಂಡು (ದತ್ತಾತ್ರೇಯ) ಮರಿಗೆ ಜನ್ಮ ನೀಡಿತ್ತು. ಈ ಸಲ ಆ ಆನೆಯನ್ನು ಕರೆತಂದಿಲ್ಲ. ಅದರ ಬದಲಿಗೆ ದೊಡ್ಡಹರವೆ ಶಿಬಿರದಿಂದ 52 ವರ್ಷದ ಲಕ್ಷ್ಮಿಯನ್ನು ಕರೆತರಲಾಗಿದೆ ಎಂದು ತಿ–ಳಿಸಿದರು ಈ ಸಂದರ್ಭದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯರಾದ ಡಾ.ಮುಜೀಬ್ ರೆಹಮಾನ್, ಡಾ.ಮಿರ್ಜಾ ವಾಸಿಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

ಕಾಯಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದ ಅವರು, ಒಂದು ವೇಳೆ ನೀರು ಬಿಡುವುದನ್ನು ಮುಂದುವರಿಸಿದಲ್ಲಿ ಮೈಸೂರು, ಮಂಡ್ಯ ಸೇರಿದಂತೆ ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪಶ್ಚಿಮ ಘಟ್ಟಗಳಲ್ಲೇ ಮಳೆಯಾಗದೆ ಕಾವೇರಿ, ಕಬಿನಿ, ಲಕ್ಷ್ಮಣತೀರ್ಥ, ಹೇಮಾವತಿ ನದಿಗಳಲ್ಲಿ ನೀರಿನ ಹರಿವು ಕುಂಠಿತಗೊಂಡಿದೆ. ಕನ್ನಂಬಾಡಿ ಕಟ್ಟೆಯು ಬರಿದಾಗಿದ್ದು, ವಸ್ತುಸ್ಥಿತಿ ಅರಿಯದೇ ಪ್ರಾಧಿಕಾರ ಹಾಗೂ ಉಚ್ಚ ನ್ಯಾಯಾಲಯವು ಪ್ರತಿದಿನ 5,000 ಕ್ಯುಸೆಕ್ ನೀರು ಬಿಡುವಂತೆ ಆದೇಶಿಸಿರುವುದು ದುರದೃಷ್ಟಕರ ಸಂಗತಿ. ಕರ್ನಾಟಕ ಮತ್ತು ತಮಿಳುನಾಡಿನ ವಸ್ತುಸ್ಥಿತಿಯನ್ನು ಪ್ರಧಾನಮಂತ್ರಿಗಳಿಗೆ ಮನವರಿಕೆ ಮಾಡಿ ತಕ್ಷಣದಿಂದಲೇ ನೀರು ಬಿಡುವುದನ್ನು ತಪ್ಪಿಸಬೇಕೆಂದು ಒತ್ತಾಯಿಸಿ ಮನವಿ ಪತ್ರ ನೀಡಿದರು.

ರೈತ ಮುಖಂಡರಾದ ಪಿ. ಮರಂಕಯ್ಯ, ವಿಜಯೇಂದ್ರ, ಪ್ರಭಾಕರ, ಮಹೇಶ, ಚಂದ್ರಶೇಖರ್, ರಾಘವೇಂದ್ರ, ಬಸವನಾಯಕ, ಶಿವಯೋಗಿ ಸೇರಿದಂತೆ ಹಲವರು ಪ್ರತಿಭಟನಾ ಧರಣಿಯಲ್ಲಿ ಭಾಗವಹಿಸಿದ್ದರು.

ಕಾವೇರಿ ಕ್ರಿಯಾ ಸಮಿತಿ: ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಉಪಾಧ್ಯಕ್ಷರಾದ ಮೂಗೂರು ನಂಜುಂಡಸ್ವಾಮಿ, ಮೆಲ್ಲಹಳ್ಳಿ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ. ಮೋಹನ್ ಕುಮಾರ್‌ಗೌಡ ನೇತೃತ್ವದಲ್ಲಿ ಇಂದು ಪದಾಧಿಕಾರಿಗಳು ಹಾಗೂ ಸದಸ್ಯರು ಕೆಆರ್ ಸರ್ಕಲ್‌ನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕಾವೇರಿ ಹೋರಾಟಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದರು.


ಕಾವೇರಿ ನೀರಿಗಾಗಿ ಹೋರಾಡುವ ಸಲುವಾಗಿ ನಿಗದಿತ ಸ್ಥಳದಲ್ಲಿ ಅನುಮತಿ ನೀಡುವಂತೆ ನಜರ್‌ಬಾದ್‌ನ ನಗರ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿ ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ ಹೋರಾಟಗಾರರು, ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಇಲ್ಲವೇ ದೇವರಾಜ ಮಾರುಕಟ್ಟೆ ಮುಂದಿನ ಚಿಕ್ಕ ಗಡಿಯಾರ ಬಳಿ ಅಥವಾ ಕೆಆರ್ ಸರ್ಕಲ್‌ನಲ್ಲಿ ಧರಣಿಗೆ ಅನುಮತಿ ನೀಡಿ ಎಂದು ಕೋರಿಕೊಂಡರು.

ಮನವಿ ಪತ್ರ ಸ್ವೀಕರಿಸಿದ ಪೊಲೀಸ್ ಆಯುಕ್ತರು, ನಾನು ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಾರ್ವಜನಿಕರು, ಸಂಚಾರಕ್ಕೆ ತೊಂದರೆಯಾಗದ ಸ್ಥಳದಲ್ಲಿ ಅನುಮತಿ ನೀಡುತ್ತೇವೆ ಎಂದು ತಿಳಿಸಿದರು. ಈ ಮಧ್ಯೆ ಕೆಆರ್ ಸರ್ಕಲ್‌ನಲ್ಲಿ ಈಗಾಗಲೇ ಪ್ರತಿಭಟನೆ ಆರಂಭಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಎಂ.ಜೆ. ಸುರೇಶ್‌ಗೌಡ, ಸಿದ್ದಲಿಂಗಪ್ಪ ಆರ್.ಲಿಂಗಪ್ಪ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು. ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ವ್ಯಾಪಕ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಚಾಮರಾಜ ಕ್ಷೇತ್ರದ ಅಭಿವೃದ್ಧಿ ಸಂಬಂಧ ತಜ್ಞರ ಸಲಹಾ ಸಮಿತಿ ರಚನೆ; ಶಾಸಕ ಕೆ.ಹರೀಶ್‌ಗೌಡ

● ಮೈಗ್ರಾಪ ಸದಸ್ಯರೊಂದಿಗೆ ಶಾಸಕರು ಸಂವಾದ ● ಚಾಮರಾಜ ಕ್ಷೇತ್ರದ ಅಭಿವೃದ್ಧಿ ಸಂಬಂಧ ತಜ್ಞರ ಸಮಿತಿಯ ಸಲಹೆ ಅನುಸಾರ ಅಭಿವೃದ್ಧಿ ಕಾಮಗಾರಿ ನಿರ್ಧಾರ



ಮೈಸೂರು, ಸೆ.25(ಎಸ್‌ಪಿಎನ್)– ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿರುವ ಉದ್ಯಾನವನ, ಕ್ರೀಡಾಂಗಣ, ಒಳಚರಂಡಿ ಸಮಸ್ಯೆ ಹಾಗೂ ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ ಸೇರಿದಂತೆ ಇತರೆ ಯಾವುದೇ ಸಮಸ್ಯೆಗಳ ಪರಿಹಾರಕ್ಕೆ ಬದ್ಧನಾಗಿದ್ದೇನೆ ಎಂದಿರುವ ಶಾಸಕ ಕೆ.ಹರೀಶ್‌ಗೌಡ, ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ತಜ್ಞರ ಸಮಿತಿಯೊಂದನ್ನು ರಚಿಸುವ ಕುರಿತು ಇಂಗಿತ ವ್ಯಕ್ತಪಡಿಸಿದರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ ಕಚೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮೈಸೂರು ಉದ್ಯಾನವನ, ಫುಟ್‌ಪಾತ್ ಒತ್ತುವರಿ ಪ್ರಕರಣ ಹಾಗೂ ಇತರೆ ಸಮಸ್ಯೆಗಳ ಬಗ್ಗೆ ಮೈಗ್ರಾಪ ಸದಸ್ಯರೊಂದಿಗೆ ಸಂವಾದ ಸಂದರ್ಭದಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತು ಮಾತನಾಡುವವರೇ ಇಲ್ಲದಾಗಿದೆ. ಹಾಗಾಗಿ ಇಂತಹ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ಇಚ್ಛಾಸಕ್ತಿ ಹೊಂದಿರುವ ತಜ್ಞರ ಸಮಿತಿಯೊಂದನ್ನು ಚಾಮರಾಜ ಕ್ಷೇತ್ರದ ವ್ಯಾಪ್ತಿಗೆ ಸೀಮಿತಗೊಳಿಸಿ ರಚಿಸಲು ಬದ್ಧನಾಗಿದ್ದೇನೆ. ಮೈಸೂರು ನಗರ ವ್ಯಾಪ್ತಿಯ ಉದ್ಯಾನವನ, ಫುಟ್‌ಪಾತ್, ರಾಜಕಾಲುವೆ, ನೀರು ಪೂರೈಕೆ ಸೇರಿದಂತೆ ನಾನಾ ಸಮಸ್ಯೆಗಳು ಪ್ರತಿನಿತ್ಯ ಕೇಳಿಬರುತ್ತಿವೆ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ನಗರದ ಸೌಂದರ್ಯಕ್ಕೆ ಧಕ್ಕೆ ಬಾರದ ರೀತಿ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಆಶ್ವಾಸನೆ ನೀಡಿದರು.

1,200 ಪಾರ್ಕ್‌ಗಳಿವೆ: ಮೈಸೂರು ನಗರ ಪಾಲಿಕೆ ಮತ್ತು ಮುಡಾ ವ್ಯಾಪ್ತಿಯಲ್ಲಿ 1,200ಕ್ಕೂ ಹೆಚ್ಚು ಪಾರ್ಕ್‌ಗಳಿವೆ ಅದರಲ್ಲಿ ಕೇವಲ 300 ಪಾರ್ಕ್‌ಗಳು ಮಾತ್ರ ಅಭಿವೃದ್ಧಿಗೊಂಡಿವೆ. ಇನ್ನು ಕೆಲವು ನಿರ್ವಹಣೆಯಿಲ್ಲದೆ ಸೊರಗುತ್ತಿವೆ. ಈ ಸಮಸ್ಯೆ ಪರಿಹರಿಸಲು ಟಾಸ್ಕ್ ಫೋರ್ಸ್ ಅವಶ್ಯಕತೆ ಇದೆ ಎಂದು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕೆ ಮೈಗ್ರಾಪ ಸದಸ್ಯರೊಬ್ಬರು ಆಕ್ಷೇಪ ವ್ಯಕ್ತಪಡಿಸಿ, ಈಗಾಗಲೇ ಹೈಕೋರ್ಟ್ ನಿರ್ದೇಶನದಂತೆ ವಾರ್ಡ್ ಮಟ್ಟದಲ್ಲಿ ಪಾಲಿಕೆ ಸದಸ್ಯರ ನೇತೃತ್ವದ ವಾರ್ಡ್ ಸಮಿತಿ ರಚಿಸಿದೆ. ಅದು ಕ್ರಿಯಾಶೀಲ ವಾಗಿಲ್ಲ. ಇದರ ಬಗ್ಗೆ ಗಮನಹರಿಸುವಂತೆ ಶಾಸಕರಿಗೆ ಸಲಹೆ ನೀಡಿದರಲ್ಲದೆ, ಸಿದ್ಧಿಖಿ ಪಾರ್ಕ್‌ನಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಸಂಬಂಧ ಲೋಕಾಯುಕ್ತಕ್ಕೆ ಮೈಗ್ರಾಪ ವತಿಯಿಂದ ದೂರು ಸಲ್ಲಿಸಿದ ಪ್ರಸಂಗವನ್ನು ಇಲ್ಲಿ ವಿವರಿಸಿದರು.

ಏಕಾಏಕಿ ತೆರವು ಅಸಾಧ್ಯ: ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಧಾರ್ಮಿಕ ಕೇಂದ್ರಗಳನ್ನು ಜನರ ಭಾವನೆಗಳನ್ನು ಘಾಸಿಗೊಳಿಸಿ, ತೆರವುಗೊಳಿಸುವುದು ಸುಲಭದ ಮಾತಲ್ಲ. ಇದು ಸೂಕ್ಷ್ಮ ವಿಷಯ. ಅದರಲ್ಲೂ ಪಾರ್ಕ್ ಹಾಗೂ ಫುಟ್‌ಪಾತ್‌ಗಳ ಮೇಲೆ ನಿರ್ಮಾಣಗೊಂಡಿರುವ ಅನಧಿಕೃತ ದೇವಸ್ಥಾನಗಳ ತೆರವಿಗೆ ನಾನು ಮುಂದಾದರೆ, ಇದನ್ನೇ ಬಂಡವಾಳ ಮಾಡಿಕೊಂಡಿರುವ ಬಿಜೆಪಿ ಮುಖಂಡರು, ನನ್ನ ವಿರುದ್ಧ ಕ್ಷೇತ್ರದಲ್ಲಿ ಅಪಪ್ರಚಾರದಲ್ಲಿ ತೊಡಗುತ್ತಾರೆ. ಇದರಿಂದ ಮುಂದಿನ ಚುನಾವಣೆಯಲ್ಲಿ ಜನ ನನ್ನನ್ನು ಕೈಬಿಡುತ್ತಾರೆ. ಈ ವಿಷಯದಲ್ಲಿ ನಾನು ಏಕಾಏಕಿ ನಿರ್ಧಾರ ಸಾಧ್ಯವಿಲ್ಲ ಎಂದು ಮಹಿಳಾ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ರಾಜೀ ಇಲ್ಲ: ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ ವಿಚಾರದಲ್ಲಿ ಜಿಲ್ಲಾಡಳಿತದೊಂದಿಗೆ ಯಾವುದೇ ರಾಜೀ ಇಲ್ಲ. ಈಗಾಗಲೇ ಕೆರೆ ಅಭಿವೃದ್ಧಿ ಕುರಿತು ಹಲವು ವರ್ಷಗಳಿಂದ ಪರ–ವಿರೋಧ ಚರ್ಚೆಗಳು ನಡೆಯುತ್ತಿದ್ದು, ಈ ಸಮಸ್ಯೆ ನನಗೂ ಅರಿವಿದೆ. ಇದರ ಸಮಗ್ರ ಅಭಿವೃದ್ಧಿಗೆ ಈಗಾಗಲೇ ಜಿಲ್ಲಾಡಳಿತದಿಂದ ಅಂದಾಜು 60 ಲಕ್ಷ ವೆಚ್ಚದಲ್ಲಿ ಡಿಪಿಆರ್ ತಯಾರಿಸಲು ಸರ್ಕಾರದಿಂದ ಆದೇಶವಾಗಿದೆ. ಈ ಪ್ರಕ್ರಿಯೆ ಅಂತಿಮವಾದ ತಕ್ಷಣ ತಜ್ಞರೊಂದಿಗೆ ಚರ್ಚಿಸಿ, ಮುಂದಿನ ಕ್ರಮ ಕೈಗೊಳ್ಳುತ್ತೇನೆ. ಇದರ ಬಗ್ಗೆ ಈಗಿನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಗತ್ಯ ನೆರವು ನೀಡುವ ಭರವಸೆ ನೀಡಿರುವ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ತೆರವಿಗೆ ಚಿಂತನೆ: ವಿಜಯನಗರ ಬಡಾವಣೆಯಲ್ಲಿ ಸುಮಾರು 45ಕ್ಕೂ ಹೆಚ್ಚು ಪಾರ್ಕ್‌ಗಳಿವೆ. ಇದರಲ್ಲಿ ಒಂದು ಅಥವಾ ಎರಡು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದ ಪಾರ್ಕ್‌ಗಳ ಅಭಿವೃದ್ಧಿಗೆ ತಾಂತ್ರಿಕ ಸಮಸ್ಯೆ ಎದುರಾಗಿದೆ. ಫುಟ್‌ಪಾತ್ ವ್ಯಾಪಾರಿಗಳನ್ನು ಏಕಾಏಕಿ ತೆರವುಗೊಳಿಸುವುದು ಸ್ವಲ್ಪ ಕಷ್ಟದ ಕೆಲಸ. ಅವರಿಗೆ ಪರ್ಯಾಯ ಸ್ಥಳ ಗುರುತಿಸಿ, ನಂತರ ತೆರವಿಗೆ ಹಂತಹಂತವಾಗಿ ಕ್ರಮಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಪಾರ್ಕ್‌ನಲ್ಲಿ ಏನನ್ನೂ ಕಟ್ಟುವಂತಿಲ್ಲ: ಮೂರು ಎಕರೆಗಿಂತ ಕಡಿಮೆ ವಿಸ್ತೀರ್ಣ ಇರುವ ಪಾರ್ಕ್‌ಗಳಲ್ಲಿ ಯಾವುದೇ ರೀತಿಯ ಕಟ್ಟಡ ನಿರ್ಮಿಸುವಂತಿಲ್ಲ. ಇನ್ನು ಮೂರು ಎಕರೆ ಗಿಂತ ಜಾಸ್ತಿ ವಿಸ್ತೀರ್ಣ ಇರುವ ಉದ್ಯಾನವನಗಳಲ್ಲೂ ಕೋಟಿಗಟ್ಟಲೆ ವ್ಯಯ ಮಾಡಿ, ಕಾಂಕ್ರೀಟೀಕರಣ ಮಾಡುವಂತಿಲ್ಲ ಎಂಬ ನಿಯಮ ಇದೆ. ಇದನ್ನು ಅಧಿಕಾರಿಗಳು ಪಾಲಿಸುತ್ತಿಲ್ಲ ಎಂಬ ಸದಸ್ಯರೊಬ್ಬರ ಸಲಹೆಗೆ ಉತ್ತರಿಸಿದ ಶಾಸಕರು, ಹಿಂದೆ ಆಗಿರುವ ಅಭಿವೃದ್ಧಿ ಕಾರ್ಯಗಳ ತಡೆಗೆ ನನ್ನಿಂದ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಚಾಮರಾಜ ಕ್ಷೇತ್ರದ ವ್ಯಾಪ್ತಿಯ ಪಾರ್ಕ್‌ಗಳಲ್ಲಿ ಅಭಿವೃದ್ಧಿ ವಿಷಯವಾಗಿ ತಜ್ಞರ ಸಲಹಾ ಸಮಿತಿ ರಚನೆ ಮಾಡಿ, ಆ ತಂಡ ನೀಡುವ ಸಲಹೆ –ಸೂಚನೆ ಯನ್ನು ಪರಿಗಣಿಸುತ್ತೇನೆ. ಇಂತಹ ಸಭೆಗಳನ್ನು ಮೈಗ್ರಾಪ ವತಿಯಿಂದ 2–3 ತಿಂಗಳಿಗೊಮ್ಮೆ ನಡೆಸಿ, ನನ್ನನ್ನು ಆಹ್ವಾನಿಸಿದರೆ, ಸಂತೋಷದಿಂದ ಭಾಗವಹಿಸುತ್ತೇನೆ ಎಂದು ಸದಸ್ಯರಿಗೆ ಭರವಸೆ ನೀಡಿದರು. ಈ ವೇಳೆ ಬಾಮಿ ವಿ.ಶೆಣೈ, ಪ್ರಭಾ ನಂದೀಶ್, ವೇಲುಮಣಿ, ವೆಂಕಟೇಶ್, ಶಂಕರ, ಅರುಣ್‌ಕುಮಾರ್ ಶೆಟ್ಟರ್, ಕಿರಣ್, ಶೋಭಾನಾ ಸಾಂಬಶಿವ, ರಾಘವೇಂದ್ರ, ಹರೀಶ್ ಇದ್ದರು.

ಮಿನಿ ಭಾರತ ಇದ್ದಂತೆ

ನನ್ನ ಕ್ಷೇತ್ರ ವ್ಯಾಪ್ತಿಯ ಸರಸ್ವತಿಪುರಂ, ಚಾಮರಾಜಪುರಂ, ಯಾದವಗಿರಿ, ಕುಂಬಾರಕೊಪ್ಪಲು, ಪಡುವಾರಹಳ್ಳಿ, ಮಂಚೇಗೌಡನಕೊಪ್ಪಲು, ದೇವರಾಜ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಮಂಡಿ ಮೊಹಲ್ಲಾ ಸೇರಿದಂತೆ ಒಂದೊಂದು ಬಡಾವಣೆಯಲ್ಲಿ ಒಂದೊಂದು ರೀತಿಯ ಸಮಸ್ಯೆಗಳಿವೆ. ಒಂದು ರೀತಿಯಲ್ಲಿ ಚಾಮರಾಜ ಕ್ಷೇತ್ರ ಮಿನಿ ಭಾರತ ವಿದ್ದಂತೆ. ಇಲ್ಲಿ ಸಮಸ್ಯೆಗಳ ಸ್ವರೂಪ ಬದಲಾಗುತ್ತವೆ. ನಿಮಗೆ ಬೇಡವಾಗಿದ್ದು, ಅವರಿಗೆ ಬೇಕು, ಅವರಿಗೆ ಬೇಡವಾಗಿದ್ದು ನಿಮಗೆ ಬೇಕು. ಇಬ್ಬರಿಗೂ ಬೇಡವಾದುದು. ಮತ್ತೊಬ್ಬರಿಗೆ ಬೇಕಾಗುತ್ತದೆ. ನಾನು ಶಾಸಕನಾಗಿ ಬರೀ ಮೂರೂವರೆ ತಿಂಗಳು ಮಾತ್ರ ಕಳೆದಿದೆ. ಉಳಿದ ಅವಧಿಯಲ್ಲಿ ಕ್ಷೇತ್ರದ ಎಲ್ಲಾ ವರ್ಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

- ಕೆ.ಹರೀಶ್‌ಗೌಡ, ಶಾಸಕರು

ಮೆಚ್ಚುಗೆ ಪಾತ್ರರಾದ ಶಾಸಕರು

ಮೈಗ್ರಾಪ ಸದಸ್ಯರು ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಶಾಸಕ ಕೆ.ಹರೀಶ್‌ಗೌಡ, ಸರಿಯಾದ ಸಮಯ(ಸಂಜೆ 4ಕ್ಕೆ)ಕ್ಕೆ ಬಂದಿದ್ದಕ್ಕೆ ಮೈಗ್ರಾಪ ಸದಸ್ಯರು, ಅವರ ಸಮಯ ಪರಿಪಾಲನೆ ಮಾಡುವವರಲ್ಲಿ ಕೆ.ಹರೀಶ್‌ಗೌಡ ಮೊದಲಿಗರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತೀಯ ವಾಯುಸೇನೆಗೆ ಮೊದಲ ಸಿ–295 ವಿಮಾನ ಸೇರ್ಪಡೆ




ನವದೆಹಲಿ: ಭಾರತೀಯ ವಾಯುಪಡೆಯ ಬಲ ದ್ವಿಗುಣಗೊಂಡಿದೆ. ಇಂದು ಅ–295 ಸಾರಿಗೆ ವಿಮಾನವನ್ನು ಔಪಚಾರಿಕವಾಗಿ ವಾಯುಪಡೆಗೆ ಸೇರಿಸಲಾಯಿತು. ಘಾಜಿಯಾಬಾದ್‌ನ ಹಿಂಡನ್ ಏರ್‌ಬೇಸ್‌ನಲ್ಲಿ ನಡೆದ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ವಿಮಾನವನ್ನು ವಾಯುಪಡೆಗೆ ಹಸ್ತಾಂತರಿಸಿದರು.

ಈ ವಿಮಾನವು ಸ್ಪೇನ್‌ನಿಂದ 6 ಸಾವಿರದ 854 ಕಿಲೋಮೀಟರ್ ದೂರವನ್ನು ಕ್ರಮಿಸಿದ ನಂತರ ಸೆಪ್ಟೆಂಬರ್ 20ರಂದು ವಡೋದರಾ ತಲುಪಿತು. ಇಂದು ಈ ವಿಮಾನವು ವಡೋದರಾದಿಂದ ಹೊರಟು ಹಿಂಡನ್ ವಾಯುನೆಲೆಯನ್ನು ತಲುಪಿತು. ಈ ವಿಮಾನದ ಅತ್ಯಂತ ವಿಶೇಷವೆಂದರೆ ಈ ವಿಮಾನವು ಒಂದು ಕಿಲೋಮೀಟರ್‌ಗಿಂತ ಕಡಿಮೆ ರನ್‌ವೇಯಿಂದ ಟೇಕ್ ಆಫ್ ಮಾಡಬಹುದಾಗಿದ್ದರೆ, ಲ್ಯಾಂಡಿಂಗ್‌ಗೆ ಕೇವಲ 420 ಮೀಟರ್ ರನ್‌ವೇ ಸಾಕಾಗುತ್ತದೆ. ಇದರರ್ಥ ಪ್ರಸ್ತುತ ವಾಯುಪಡೆಯು ಪ್ರವೇಶಿಸಲಾಗದ ಗುಡ್ಡಗಾಡು ಪ್ರದೇಶಗಳು ಮತ್ತು ದ್ವೀಪಗಳಲ್ಲಿಯೂ ಸೈನ್ಯವನ್ನು ನೇರವಾಗಿ ಇಳಿಸಲು ಸಾಧ್ಯವಾಗುತ್ತದೆ.

ಭಾರತದ ವಿಮಾನಯಾನ ಉದ್ಯಮದಲ್ಲಿ ದೊಡ್ಡ ಬದಲಾವಣೆ: ಈ ವಿಮಾನ ಸ್ವಾವಲಂಬಿ ಭಾರತದ ಗುರುತಾಗಲಿದೆ. ಇಲ್ಲಿಯವರೆಗೆ ಈ ವಿಮಾನವನ್ನು ಏರ್‌ಬಸ್ ಕಂಪನಿ ತಯಾರಿಸುತ್ತಿತ್ತು ಆದರೆ ಈಗ ಇದನ್ನು ಭಾರತದಲ್ಲಿ ಮಾತ್ರ ತಯಾರಿಸಲಾಗುವುದು. ಎರಡು ವರ್ಷಗಳ ಹಿಂದೆ ಏರ್‌ಬಸ್ ಸ್ಪೇಸ್ ಮತ್ತು ಡಿಫೆನ್ಸ್ ಕಂಪನಿಯೊಂದಿಗೆ 56 ಸಿ–295 ವಿಮಾನಗಳನ್ನು 21,935 ಕೋಟಿ ರೂ.ಗೆ ಖರೀದಿಸಲು ಸರ್ಕಾರ ಒಪ್ಪಂದ ಮಾಡಿಕೊಂಡಿತ್ತು. ಈ ಪೈಕಿ 16 ವಿಮಾನಗಳು ಸ್ಪೇನ್‌ನಿಂದ ಬರಬೇಕಿದ್ದರೆ, 17ನೇ ವಿಮಾನವನ್ನು ದೇಶದಲ್ಲೇ ತಯಾರಿಸಲಾಗುವುದು. ಈ ವಿಮಾನವನ್ನು ಭಾರತದಲ್ಲಿ ತಯಾರಿಸಲು ಏರ್‌ಬಸ್ ಮತ್ತು ಟಾಟಾ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಕಳೆದ ವರ್ಷ ಅಕ್ಟೋಬರ್ 31ರಂದು ಪ್ರಧಾನಿ ನರೇಂದ್ರ ಮೋದಿ ಅವರು ವಡೋದರಾಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಯೋಜನೆಗೆ ಶಂಕುಸ್ಥಾಪನೆ ಮಾಡಿದ್ದರು. ವಡೋದರದಲ್ಲಿ ಏರ್‌ಬಸ್‌ನ ಸಹಭಾಗಿತ್ವದಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಸಿದ್ಧಪಡಿಸಿದ ಸೆಟಪ್‌ನಲ್ಲಿ 40 ವಿಮಾನಗಳನ್ನು ತಯಾರಿಸಲಾಗುವುದು. ಆದರೆ ಏರ್‌ಬಸ್ ಸ್ಪೇನ್‌ನಲ್ಲಿ ತನ್ನ ಸ್ಥಾಪನೆಯಿಂದ ಭಾರತಕ್ಕೆ 16 ಸಿದ್ಧ ವಿಮಾನಗಳನ್ನು ಪೂರೈಸುತ್ತದೆ. 2026 ರ ವೇಳೆಗೆ ಎಲ್ಲಾ 56 ವಿಮಾನಗಳನ್ನು ವಾಯುಪಡೆಗೆ ತಲುಪಿಸಲಾಗುವುದು ಎಂದು ನಿರೀಕ್ಷಿಸಲಾಗಿದೆ ಈ ಯೋಜನೆಯು ಭಾರತದ ವಾಯುಯಾನ ಉದ್ಯಮದಲ್ಲಿ ದೊಡ್ಡಬದಲಾವಣೆಯನ್ನು ತರಲಿದೆ ಎಂದು ತಜ್ಞರು ನಂಬಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಡಾ. ಟಿ.ಆರ್.ಚಂದ್ರಶೇಖರ್ ಅವರು ಸೋಮವಾರ ಕುಲಪತಿ ಪ್ರೊ ಲೋಕನಾಥ್ ಅವರನ್ನು ಭೇಟಿಯಾಗಿ, ನೇಮಕಾತಿ ಪತ್ರವನ್ನು ಸಲ್ಲಿಸುವ ಮೂಲಕ ಪದಗ್ರಹಣ ಮಾಡಿದರು.




ಸೋಮವಾರ ಮೈಸೂರಿಗೆ ಆಗಮಿಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಬಿಜೆಪಿ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್.ಶ್ರೀವತ್ಸ ಸ್ವಾಗತಿಸಿ, ಅಭಿನಂದಿಸಿದರು. ಈ ವೇಳೆ ನಗರ ಪಾಲಿಕೆ ಸದಸ್ಯ ಸತೀಶ್, ಬಿಜೆಪಿ ಮುಖಂಡ ಮೈ.ವಿ.ರವಿಶಂಕರ್, ಬಿಜೆಪಿ ಮಾಧ್ಯಮ ವಕ್ತಾರ ಮೋಹನ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಸೋಮಸುಂದರ್, ವಾಣೀಶ್‌ಕುಮಾರ್, ಮುಖಂಡರಾದ ಕೇಬಲ್ ಮಹೇಶ್, ಜಯರಾಮ್, ರಘು ನಂದನ್, ಮಂಜುನಾಥ್, ಶಿವರಾಜ್, ಕಿಶೋರ್ ಇತರರು ಉಪಸ್ಥಿತರಿದ್ದಾರೆ.

ಗೃಹಜ್ಯೋತಿ ಯೋಜನೆ ಪೂರ್ವದ

ಬಾಕಿ ವಿದ್ಯುತ್ ಶುಲ್ಕ ಪಾವತಿಗೆ ಸೆ.30 ಕಡೇ ದಿನ

ಮೈಸೂರು,ಸೆ.25(ಪಿಎಂ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ಎನ್‌ಆರ್ ಮೊಹಲ್ಲಾ ವಿಭಾಗ ವ್ಯಾಪ್ತಿಯ ಗೃಹ ವಿದ್ಯುತ್ ಬಳಕೆ ಗ್ರಾಹಕರಿಗೆ ಸಂಬಂಧಿಸಿದಂತೆ ಗೃಹಜ್ಯೋತಿ ಯೋಜನೆ ಪೂರ್ವದ ವಿದ್ಯುತ್ ಬಾಕಿ ಶುಲ್ಕ ಪಾವತಿಸಲು ಸೆ.30 ಕಡೆ ದಿನವಾಗಿದೆ ಎಂದು ಸೆಸ್ಕ್‌ನ ಪ್ರಕಟಣೆ ತಿಳಿಸಿದೆ.

ಬಾಕಿ ಶುಲ್ಕ ಪಾವತಿಗೆ ಈಗಾಗಲೇ ಸೆ.30ರ ಗಡುವು ನೀಡಲಾಗಿತ್ತು. ಅದರಂತೆ ಹಲವು ಗ್ರಾಹಕರು ಬಾಕಿ ಶುಲ್ಕ ಪಾವತಿಸಿದ್ದಾರೆ. ಬಾಕಿ ಪಾವತಿಸದ ಗ್ರಾಹಕರಿಗೆ ಕೊನೆ ಐದು ದಿನಗಳ ಕಾಲಾವಕಾಶವಿದೆ. ತಪ್ಪಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೇ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು ಅನಿವಾರ್ಯ ಎಂದು ಸೆಸ್ಕ್‌ನ ಎನ್‌ಆರ್ ಮೊಹಲ್ಲಾ ವಿಭಾಗದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತ

ಫಾರ್ಚ್ಯೂನರ್ ಅಡ್ಡಾದಿಡ್ಡಿ ನುಗ್ಗಿ ಆರು ಕಾರಿಗೆ ಡಿಕ್ಕಿ: ಇಬ್ಬರು ಮಹಿಳೆಯರು ಸೇರಿ ಮೂವರು ಸಾವು



ಚನ್ನಪಟ್ಟಣ, ಸೆ.25– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ 6 ಕಾರುಗಳ ನಡುವೆ ಸರಣಿ ಅಪಘಾತ ಸಂಭವಿಸಿ ಸ್ಥಳದಲ್ಲೇ ಇಬ್ಬರು ಮಹಿಳೆಯರು ಸೇರಿದಂತೆ ಮೂವರು ಸಾವನ್ನಪ್ಪಿ, ಇನ್ನೂ ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ದೇವರಹೊಸಹಳ್ಳಿ ಬಳಿ ಸೋಮವಾರ ಸಂಜೆ ನಡೆದಿದೆ.

ಹಾಸನ ಮೂಲದ ರೇಣುಕಮ್ಮ, ಮಂಜುಳಾ ಹಾಗೂ ಸುಧೀರ್ ಸಾವನ್ನಪ್ಪಿದ್ದು, ಮಹೇಶ್ ಕುಮಾರ್, ಪ್ರಸನ್ನ ಹಾಗೂ ಕಲ್ಲೇಶ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದ ಫಾರ್ಚ್ಯೂನರ್ ಕಾರು, ತುಂತುರು ಮಳೆ ಹಿನ್ನೆಲೆಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕ ಹಾರಿ ಮತ್ತೆ ತದ್ವಿರುದ್ಧ ಪಥದಲ್ಲಿ ಬೆಂಗಳೂರಿನತ್ತ ನುಗ್ಗಿ ಸ್ಯಾಂಟ್ರೊ, ಇನ್ನೋವಾ, ಸ್ಕಾರ್ಪಿಯೋ ಇನ್ನಿತರ ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಸ್ಯಾಂಟ್ರೊ ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಮತ್ತೊಬ್ಬ ಮಹಿಳೆ ಆಸ್ಪತ್ರೆಗೆ ಸಾಗಿಸುವಾಗ ಕೊನೆಯುಸಿರೆಳೆದಿದ್ದಾರೆ. ಅಲ್ಲದೇ ಇದೇ ವೇಳೆ ಗಂಭೀರವಾಗಿ ಗಾಯಗೊಂಡ ಮೂವರನ್ನು ಚನ್ನಪಟ್ಟಣ ಆಸ್ಪತ್ರೆಗೆ ದಾಖಲಿಸಿ, ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ರಾಮನಗರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಏರ್‌ಬ್ಯಾಗ್ ತೆರೆದುಕೊಂಡಿದ್ದರಿಂದ ಫಾರ್ಚ್ಯೂನರ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚನ್ನಪಟ್ಟಣ ಸಂಚಾರಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿದರು. ಘಟನೆಯಲ್ಲಿ ಎರಡೂ ಕಾರುಗಳ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಇತರ ವಾಹನಗಳಿಗೆ ಭಾಗಶಃ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ. ಸುರೇಶ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಟ್ಟೆಮಳಲವಾಡಿಯಲ್ಲಿ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ

ಮಳೆಯಿಲ್ಲದೆ ಸಂಕಷ್ಟದಲ್ಲಿರುವ ರೈತರ ಕೈ ಹಿಡಿಯಲಿ ತಂಬಾಕು : ಸಂಸದ ಪ್ರತಾಪ್ ಸಿಂಹ



ಹುಣಸೂರು.ಸೆ.25– ತಾಲೂಕಿನ ಕಟ್ಟೆ ಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯ ಪ್ಲಾಟ್‌ಫಾರ್ಮ್‌2ರಲ್ಲಿ ಇಂದು ಬೆಳಿಗ್ಗೆ ಸಂಸದ ಪ್ರತಾಪ್‌ಸಿಂಹ 2023–24ನೇ ಸಾಲಿನ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು,ಕಳೆದ ಬಾರಿ ತಂಬಾಕು ಕೆಜಿ.ಗೆ 200 ರೂ. ಬೆಲೆ ಸಿಕ್ಕಿತ್ತು. ನಂತರ ಸರಾಸರಿ 228 ರೂ. ದೊರೆತಿತ್ತು. ಆದರೆ ಈ ಬಾರಿ ಪ್ರಾರಂಭದಲ್ಲಾಗಿಯೇ 230 ರೂ. ದೊರೆತ್ತಿದೆ. ಮುಂದಿನ ದಿನಗಳಲ್ಲಿ ಯಾವುದೇ ರೀತಿಯಲ್ಲೂ ಕಡಿಮೆಯಾಗದೆ ರೈತರಿಗೆ ಒಳ್ಳೆಯ ಬೆಲೆ ಸಿಗಲಿದೆ ಎಂದರು.

ಈ ಬಾರಿ ಮಳೆ ಇಲ್ಲದೆ ರೈತರ ಬೆಳೆಗಳಾದ ರಾಗಿ, ಬತ್ತ, ಅವರೆ ಎಲ್ಲ ಬೆಳೆಗಳು ಕೈಗೆ ಸಿಗದೆ ಕಂಗಲಾಗಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರಿಗೆ ಉಳಿದಿರುವ ತಂಬಾಕು ಒಂದೇ ರೈತರ ಬದುಕನ್ನು ಸುಧಾರಿಸಲು ಸಾಧ್ಯ. ಈ ಬೆಳೆಯಿಂದಲಾದರೂ ರೈತರು ತಮ್ಮ ತಮ್ಮ ಪ್ರಾಣ ಉಳಿಸಿಕೊಂಡು ಕಷ್ಟದ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದಾಗಿದೆ ಎಂದರು. ಈ ಬಾರಿ ಐ.ಟಿ.ಸಿ ಸೇರಿದಂತೆ 15 ರಿಂದ 29 ಕಂಪನಿಗಳು ತಂಬಾಕು ಖರೀದಿಯಲ್ಲಿ ಭಾಗವಹಿಸಲಿವೆ. ಅದರಲ್ಲೂ ಹೆಚ್ಚಾಗಿ ಐಟಿಸಿ ರೈತರ ತಂಬಾಕು ಖರೀದಿಸಲಿದೆ. ಈವರೆಗೆ ರೈತರಿಗೆ ವಿಧಿಸುತ್ತಿದ್ದ ದಂಡ ಹಾಗೂ ಹೆಚ್ಚುವರಿ ತಂಬಾಕಿಗೆ ವಿಧಿಸುತ್ತಿದ್ದ ದಂಡವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಈ ಕಾರಣ ಅನಧಿಕೃತ ತಂಬಾಕು ಬೆಳೆಗಾರರು ತಮ್ಮ ತಂಬಾಕನ್ನು ತಕ್ಷಣದಿಂದಲೇ ಮಾರಾಟ ಮಾಡಬಹುದು ಎಂದರು.

ನೀರಿನ ವಿಚಾರ ಬಿಟ್ಟು ಡಿಸಿಎಂ ಸ್ಥಾನದ ಬಗ್ಗೆ ಕಸರತ್ತು ನಡೆಸುತ್ತಿರುವ ಸರ್ಕಾರ

ರಾಜ್ಯ ಸರ್ಕಾರದ ವಿರುದ್ಧ ಸಂಸದ ಪ್ರತಾಪ್‌ಸಿಂಹ ವಾಗ್ದಾಳಿ

ಹುಣಸೂರು: ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ ನೀರಿಲ್ಲದೆ ಜನ ಮತ್ತು ರೈತರು ತತ್ತರಿಸುವ ಪರಿಸ್ಥಿತಿ ನಿರ್ಮಾಣವಾಗಿದ್ದರೂ ತಲೆ ಕೆಡಿಸಿಕೊಳ್ಳದ ಕಾಂಗ್ರೆಸ್ ಸರ್ಕಾರ ಡಿಸಿಎಂ ಸ್ಥಾನಗಳ ಅಧಿಕಾರಕ್ಕಾಗಿ ಕಸರತ್ತು ನಡೆಸುತ್ತಿರುವುದು ನಾಚಿಕೆಗೇಡಿನ ವಿಚಾರವಾಗಿದೆ ಎಂದು ಸಂಸದ ಪ್ರತಾಪ್‌ಸಿಂಹ ಕಿಡಿಕಾರಿದ್ದಾರೆ.

ತಾಲೂಕಿನ ಕಟ್ಟೆಮಳಲವಾಡಿಯ ತಂಬಾಕು ಮಾರು ಕಟ್ಟೆಯಲ್ಲಿ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಮೇ 20 ರಂದು ಅಧಿಕಾರ ವಹಿಸಿಕೊಳ್ಳುವಾಗ ಹೇಳಿದ್ದೇ ಕಾಂಗ್ರೆಸ್ ಪಕ್ಷದ ಆಡಳಿತ ವೈಖರಿ ಕುರಿತು ಎಂದರು.

ನಾನು ಕೊಡಗಿನ ಸಂಸದ, ಕೊಡಗಿನಲ್ಲಿ ಮಳೆ ಬರ್ತಾ ಇದೆಯಾ ಇಲ್ವಾ ಎಂದು ನನಗೆ ಗೊತ್ತಿರುತ್ತದೆ. ಲಕ್ಷ್ಮಣತೀರ್ಥ ಉಕ್ಕಿ ಹರಿಯಬೇಕಾದರೆ ಕೊಡಗಿನ ಇರ್ಪುನಲ್ಲಿ ಮಳೆಯಾಗಬೇಕು. ಹಾಗೆ ಕೇರಳದಲ್ಲಿ ಮಳೆಯಾದರೆ ಕಬಿನಿ ತುಂಬಿ ಹರಿಯುತ್ತದೆ. ಹತ್ತಿ ಹೊಳೆ, ಕಟ್ಟೆ ಹೊಳೆ ತುಂಬಿ ಹರಿದರೆ ಹಾರಂಗಿ ತುಂಬಿದೆ ಎಂದು ಅರ್ಥ. ಹಾಗೆ ಕಾವೇರಿ ಜಲಾನಯನ ಪ್ರದೇಶಗಳ ಉಪನದಿಗಳಾದ ಲಕ್ಷ್ಮಣತೀರ್ಥ, ಕಬಿನಿ, ಹಾರಂಗಿ, ಹೇಮಾವತಿ, ಕಣ್ವ ಮತ್ತಿತರೆ ನದಿಗಳು ತುಂಬಿ ಹರಿದರೆ ಕಾವೇರಿಯಲ್ಲಿ ನೀರಿರುತ್ತದೆ. ಈಗ ಎಲ್ಲಾ ಜಲಾಶಯಗಳ ಮಟ್ಟ ಕುಸಿದು ಹೋಗಿದ್ದು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಬಹುದು. ಈ ಬಗ್ಗೆ ನಾನು ರಾಜ್ಯ ಸರ್ಕಾರಕ್ಕೆ ಆಗಲೇ ಹೇಳಿದ್ದೆ ಯಾರೂ ಗಮನ ಹರಿಸಲಿಲ್ಲ ಎಂದರು.

ಕಾವೇರಿ ಬಗ್ಗೆ ಚಿಂತಿಸದ ಸರ್ಕಾರ ಗೃಹಲಕ್ಷ್ಮಿ, ಭಾಗ್ಯಲಕ್ಷ್ಮಿ ಎಂದು ಬೋರ್ಡ್‌ಗಳನ್ನು ಬಸ್‌ಗಳ ಮೇಲೆ ಹಾಕಿಕೊಂಡು ಮೈಸೂರಿನಲ್ಲಿ ಕಾರ್ಯಕ್ರಮ ಮಾಡಿತು. ಬೇರೆ ಯಾವುದನ್ನೂ ತಲೆ ಕೆಡಿಸಿಕೊಳ್ಳಲಿಲ್ಲ. ಸುಪ್ರೀಂಕೋರ್ಟ್‌ಗೆ, ಸಿ.ಡಬ್ಲ್ಯು.ಆರ್.ಸಿ, ಸಿ.ಡಬ್ಲ್ಯು.ಎಂ.ಎ ಸರಿಯಾಗಿ ನೀರಿನ ಸ್ಥಿತಿಗತಿ ತಿಳಿಸಲು ಸರ್ಕಾರ ವಿಫಲವಾಗಿದೆ ಎಂದರು.

ನಮಗೆ 99 ಮಿ.ಮೀ. ಟನ್ ತಂಬಾಕು ಬೆಳೆಯಲು ಅವಕಾಶವಿದ್ದರೂ ನಾವು ಕೇವಲ 80 ಮಿ.ಮೀ. ಟನ್ ಬೆಳೆಯುತ್ತಿದ್ದೇವೆ ಸುಮಾರು 15 ರಿಂದ 29 ಮಿ.ಮೀ ಟನ್ ಕಡಿಮೆ ಬೆಳೆಯುತ್ತಿದ್ದೇವೆ. ತಂಬಾಕು ರೈತರಿಗೆ ನಿಗದಿ ಮಾಡಿರುವ ಕೋಟಾ 1057 ಕೆಜಿ ತಂಬಾಕನ್ನು ಸ್ವಲ್ಪ ಹೆಚ್ಚಿಸಿ ಮತ್ತು 49 ಸಾವಿರ ಅನಧಿಕೃತ ತಂಬಾಕು ಬೆಳೆಗಾರರಿಗೂ ಅವಕಾಶ ಕಲ್ಪಿಸಿದರೆ ನಮ್ಮ ನಿಗದಿತ ಮಟ್ಟ 99 ಮಿ.ಮೀ. ಟನ್‌ಗೆ ತಲುಪುತ್ತದೆ. ಇದರಿಂದಲಾದರೂ ರೈತರ ಸಮಸ್ಯೆ ಸುಧಾರಿಸಲಿದೆ. ಈ ಬಗ್ಗೆ ಕೇಂದ್ರ ವಾಣಿಜ್ಯ ಮಂತ್ರಿ ಮತ್ತು ತಂಬಾಕು ಮಂಡಳಿಯವರ ಹತ್ತಿರ ಮಾತನಾಡಿದ್ದೇನೆ ಹಾಗೂ ಈ ಬಗ್ಗೆ ಸಭೆ ಕರೆದಿದ್ದಾರೆ. ಅಲ್ಲಿಯೂ ಸಹ ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ರೈತ ಪರವಾಗಿ ಮಾತನಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ರೈತ ಸಂಘದ ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ನಂಜುಂಡೇಗೌಡ, ಪರಿಕಾರರ ಮೂರ್ತಿ, ಚಂದ್ರೇಗೌಡ, ಶಿವಣ್ಣ ನಾಗಣ್ಣಗೌಡ, ನಾಗರಾಜ್ ಮಲ್ಲಾಡಿ, ಮಾರುಕಟ್ಟೆಯ ಅಧೀಕ್ಷಕ ಧನರಾಜ್, ಚಂದ್ರಶೇಖರ್, ಸಿದ್ದರಾವ್ ಡಾಂಗೆ ಹಾಗೂ ನೂರಾರು ರೈತರು, ರೈತ ಮುಖಂಡರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ (ದೂ: 2521923)
ಹನಿಮೂನ್ ಬ್ಯಾಂಕಾಕ್ (ಕ) 2 ಪ್ರದರ್ಶನಗಳು — ಧಂಧ್ವ (ಕ) 2 ಪ್ರದರ್ಶನಗಳು

ವುಡ್‌ಲ್ಯಾಂಡ್ಸ್ ಚಿತ್ರಮಂದಿರ (ದೂ: 2422871)
ತತ್ಸಮ ತದ್ಭವ(ಕ) 2 ಪ್ರದರ್ಶನಗಳು — ಎಕ್ಸ್‌ಪೆಂಡಬ್(ಇ) 2 ಪ್ರದರ್ಶನಗಳು

ಬಾಲಾಜಿ ಚಿತ್ರಮಂದಿರ (ದೂ: 2497199)
ಜವಾನ್ (ಹಿ) 4 ಪ್ರದರ್ಶನಗಳು

ಮಹದೇಶ್ವರ ಚಿತ್ರಮಂದಿರ (ಮೊ:9900820093)
ಟೋಬಿ (ಕ) 4 ಪ್ರದರ್ಶನಗಳು

ಗಾಯಿತ್ರಿ
ಸಪ್ತಸಾಗರದಾಚೆ ಎಲ್ಲೋ (ಕ) 4 ಪ್ರದರ್ಶನಗಳು

ರಾಕ್‌ಕಮಲ್
ಮಾರ್ಕ್ ಆಂಟೋನಿ (ತ) 4 ಪ್ರದರ್ಶನಗಳು

ಸಂಗಂ
ಜವಾನ್ (ಹಿ) 4 ಪ್ರದರ್ಶನಗಳು

ಲಿಡೋ
ಒಲವೇ ಮಂದಾರ–2 (ಕ) 4 ಪ್ರದರ್ಶನಗಳು

ತಿಬ್ಬಾದೇವಿ
ಜೈಲರ್ (ತ) 4 ಪ್ರದರ್ಶನಗಳು

ಪ್ರಭಾ
13 ಪಾರ್ಟ್–1(ಕ) 2 ಪ್ರದರ್ಶನಗಳು — ಪರಿಶುದ್ಧಂ(ಕ) 2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE — ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್** (ಕ): ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2** (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2** (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ** (ಕ): ರಾ.9.45ಕ್ಕೆ, **ಆಚಾರ್ & ಕೋ** (ಕ): ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ** (ಕ): ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ** (ಕ): ಬೆ.11.55ಕ್ಕೆ, **ರಾಖಿ ಔರ್ ರಾಣಿ** (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್** (ಇಂ): ಸಂ.6.35ಕ್ಕೆ, **ಭೋಳಾ ಶಂಕರ್** (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2** (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಣಸೂರಲ್ಲಿ ಮತ್ತೆ ಸರಗಳ್ಳನ ಕೈಚಳಕ

ಮೂರು ಕಡೆ ಚಿನ್ನದ ಸರ, ಓಲೆ ಕಿತ್ತುಕೊಂಡು ಪರಾರಿ

ಹುಣಸೂರು.ಸೆ.25– ಕಳೆದ ಕೆಲವು ತಿಂಗಳುಗಳಿಂದ ಸೈಲೆಂಟಾಗಿದ್ದ ಸರಗಳ್ಳರು ಮತ್ತೆ ತಮ್ಮ ಕೈಚಳಕ ಆರಂಭಿಸಿದ್ದಾರೆ. ತಾಲೂಕಿನ ಮೂರು ಕಡೆ ಸರಣಿ ಸರಕಳ್ಳತನ ಮತ್ತು ಬಂಗಾರದ ಒಡವೆ ಕಳ್ಳತನ ನಡೆಸಿದ್ದು, ಜನರು ಆತಂಕಗೊಂಡಿದ್ದಾರೆ.

ತಾಲೂಕಿನ ಮೋದೂರಿನ ವೃದ್ಧೆ ಶಿವಮ್ಮ (70), ಅರಸು ಕಲ್ಲಹಳ್ಳಿಯ ವೃದ್ಧೆ ಪುಟ್ಟಮ್ಮ (68) ಹಾಗೂ ವಡೇರಹೊಸಹಳ್ಳಿಯ ಅಂಬುಜಾ(25) ಎಂಬವರೇ ಒಡವೆಗಳನ್ನು ಕಳೆದುಕೊಂಡವರು.

ಬೈಕಿನಲ್ಲಿ ಬಂದ ಸುಮಾರು 25–30 ವರ್ಷದ ಅಪರಿಚಿತ ವ್ಯಕ್ತಿಯೊರ್ವ ಎಲ್ಲೆಡೆ ವಿಳಾಸ ಕೇಳುವ ನೆಪದಲ್ಲಿ ಮಹಿಳೆಯರನ್ನು ಹತ್ತಿರ ಕರೆದಿದ್ದಾನೆ. ಈತನ ಕರಾಮತ್ತು ತಿಳಿಯದೆ ಮಹಿಳೆಯರು ಹತ್ತಿರ ಬರುತ್ತಿದ್ದಂತೆ ಸರ ಮತ್ತು ಆಭರಣ ಕೀಳಲು ಮುಂದಾಗಿದ್ದಾನೆ. ಇದರಿಂದ ಹೆದರಿ ಓಡುತ್ತಿದ್ದ ಇಬ್ಬರು ವೃದ್ಧೆಯರ ಕಣ್ಣಿಗೆ ಕಾರದಪುಡಿ ಎರಚಿ ಕುತ್ತಿಗೆಯಲ್ಲಿದ್ದ ಸರ ಕಿತ್ತುಕೊಂಡಿದ್ದಾನೆ. ಪುಟ್ಟಮ್ಮ ಅವರ ಕಿವಿಯಲ್ಲಿದ್ದ ಓಲೆಯನ್ನು ಕಿತ್ತುಕೊಂಡು ಪರಾರಿಯಾಗಿದ್ದಾನೆ. ಪುಟ್ಟಮ್ಮ ಅವರ ಕಿವಿ ಗಾಯವಾಗಿದ್ದು, ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಡೆಯರ ಹೊಸಹಳ್ಳಿಯ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಅಂಬುಜಾರ ಹತ್ತಿರ ಬಂದು ಸ್ವಾಮಿಗೌಡರ ಜಮೀನು ಯಾವುದೆಂದು ಕೇಳಿ ಹತ್ತಿರ ಬರುತ್ತಿದ್ದಂತೆ ಹೆದರಿದ ಅಂಬುಜಾ ಓಡಿಹೋದರೂ ಬೆನ್ನಟ್ಟಿ ಕುತ್ತಿಗೆಯಲ್ಲಿದ್ದ ಮಾಂಗಲ್ಯದ ಸರ ಕೀಳಲು ನಡೆಸಿದ ಪ್ರಯತ್ನ ವಿಫಲವಾಗಿ ತಾಳಿ, ಗುಂಡು ಮಾತ್ರ ಕೀಳಲು ಸಫಲನಾಗಿದ್ದಾನೆ. ಕೂಗಾಟ ಕೇಳಿ ಪಕ್ಕದ ಜಮೀನಿನಲ್ಲಿದ್ದ ರೈತರೊಬ್ಬರು ಓಡಿ ಬರುವಷ್ಟರಲ್ಲಾಗಲೇ ಬೈಕ್ ಏರಿ ಪರಾರಿಯಾಗಿದ್ದಾನೆ.

ಮೋದೂರು ಮತ್ತು ಕೊತ್ತೆಗಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮಾಂತರ ಠಾಣೆಯಲ್ಲೂ ಹಾಗೂ ವಡೆಯರಹೊಸಹಳ್ಳಿಯ ಪ್ರಕರಣ ಬಿಳಿಕೆರೆ ಠಾಣೆಯಲ್ಲೂ ದಾಖಲಾಗಿದ್ದು, ಸ್ಥಳಕ್ಕೆ ಇನ್ಸ್‌ಪೆಕ್ಟರ್‌ಗಳಾದ ಸಿ.ವಿ.ರವಿ ಹಾಗೂ ಲೋಲಾಕ್ಷಿ ಭೇಟಿ ನೀಡಿ, ಪರಿಶೀಲಿಸಿದ್ದಾರೆ.

ತಮಿಳುನಾಡಿಗೆ ನೀರು: ಕೋಟೆಯಲ್ಲಿ ರೈತರ ಪ್ರತಿಭಟನೆ



ಹೆಚ್.ಡಿ.ಕೋಟೆ, ಸೆ.25– ತಮಿಳುನಾಡಿಗೆ ನೀರು ಬಿಟ್ಟಿರುವುದನ್ನು ಖಂಡಿಸಿ ಹೆಚ್.ಡಿ.ಕೋಟೆ ತಾಲೂಕು ರೈತ ಸಂಘಟನೆಗಳು ತಾಲೂಕು ಆಡಳಿತ ಸೌಧದ ಎದುರು ಪ್ರತಿಭಟನೆ ನಡೆಸಿವೆ. ಪ್ರತಿಭಟನಾಕಾರರನ್ನು ಕುರಿತು ರೈತ ಸಂಘಟನೆಯ ತಾಲೂಕು ಅಧ್ಯಕ್ಷ ಮಾದೇವ ನಾಯಕ ಮಾತನಾಡಿ, ರಾಜ್ಯದ ಜನತೆಗೆ ಕುಡಿಯಲು ನೀರು ಇಲ್ಲದಿದ್ದರೂ ರಾಜ್ಯ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಳ್ಳದೆ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಇದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

ಮೇಕೆದಾಟು ಬಳಿ ಸೇತುವೆ ನಿರ್ಮಿಸಿ ಹೆಚ್ಚಿನ ನೀರು ಸಂಗ್ರಹ ಮಾಡುತ್ತೇವೆ ಎನ್ನುವ ಹೋರಾಟವನ್ನು ಆರಂಭಿಸಿದ ಇವರು ಅಧಿಕಾರಕ್ಕೆ ಬಂದ ಕೂಡಲೇ ಇರುವ ಕಬಿನಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿ ರೈತರ ಕಣ್ಣೀರು ಹರಿಸುವಂತೆ ಮಾಡಿದ ಇಂತಹ ಸರ್ಕಾರವನ್ನು ಕಿತ್ತೊಗೆಯಬೇಕು ಎಂದರು.

ರಾಜ್ಯದಲ್ಲಿ ಮುಂಗಾರು ಮಳೆ ಕೊರತೆ ಇದ್ದರೂ ಸರಿಯಾದ ಅಂಕಿ ಅಂಶವನ್ನು ನ್ಯಾಯಾಲಯಕ್ಕೆ ಕೊಡದೆ, ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬರುತ್ತದೆ ಎಂದು ತಿಳಿದಿದ್ದರೂ, ಸರ್ಕಾರ ರಾಜ್ಯದ ಜನತೆಯ ಸಂಕಷ್ಟದಲ್ಲಿ ಸಿಲುಕಿಸಲು ಮುಂದಾಗುತ್ತಿದೆ. ಇಂತಹ ಭ್ರಷ್ಟ ಸರ್ಕಾರವನ್ನು ಕಿತ್ತಾಕಬೇಕು. ರಾಜ್ಯದ ಜನತೆ ಎಚ್ಚೆತ್ತುಕೊಳ್ಳಬೇಕು ಎಂದರು.

ಚುನಾವಣೆಯಲ್ಲಿ ಗೆಲ್ಲುವ ತನಕ ಮುಖ್ಯಮಂತ್ರಿಗಳಿಗೆ ಹಾಗೂ ಉಪಮುಖ್ಯಮಂತ್ರಿಯಾದಿಯಾಗಿ ರೈತ ಸಂಘಟನೆಗಳು ಬೇಕಾಗಿದ್ದವು. ಆದರೆ ಈಗ ರೈತ ಸಂಘಟನೆಗಳು ಹಾಗೂ ರಾಜ್ಯದ ಅನ್ನದಾತನ ಮರೆತು, ತಮಿಳುನಾಡಿಗೆ ನೀರು ಹರಿಸುತ್ತಿರುವುದು ಖಂಡಿಸುತ್ತೇವೆ. ಮುಂದಿನ ದಿನಗಳಲ್ಲಿ ನೀರನ್ನು ನಿಲ್ಲಿಸದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ರೈತರು ಕಂದಾಯ ಇಲಾಖೆ ಅಧಿಕಾರಿ ಸಿದ್ದರಾಜು ಅವರಿಗೆ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ನೀಡಿದರು. ಇದೇ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಟೌನ್ ಅಧ್ಯಕ್ಷ ಪ್ರಸಾದಿ, ಯುವ ಘಟಕದ ಅಧ್ಯಕ್ಷ ನಂದೀಶ್, ಪ್ರಧಾನ ಕಾರ್ಯದರ್ಶಿ ಮನೋಜ್, ಸಂಘಟನಾ ಕಾರ್ಯದರ್ಶಿ ಮಂಜುನಾಥ್, ಇನ್ನು ವಿವಿಧ ರೈತ ಮುಖಂಡರುಗಳು, ರೈತ ಮಹಿಳೆಯರು ಹಾಜರಿದ್ದರು. ಡಿವೈಎಸ್‌ಪಿ ಮಹೇಶ್, ವೃತ್ತ ನಿರೀಕ್ಷಕ ಶಬೀರ್ ಹುಸೇನ್, ಎಸ್‌ಐ ಪ್ರ ಪ್ರಕಾಶ್, ಸಿಬ್ಬಂದಿಗಳಾದ ಯೋಗೇಶ್, ಮಾದೇವಸ್ವಾಮಿ, ಇದ್ದರು.

ರಂಗಸಮುದ್ರ ಕೃಷಿ ಪತ್ತಿನ ಸಹಕಾರ ಸಂಘಕ್ಕೂ ನನಗೂ ಅವಿನಾಭಾವ ಸಂಬಂಧವಿದೆ



ತಿ.ನರಸೀಪುರ.ಸೆ.25– ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದೊಂದಿಗೆ ನನಗೆ ಅವಿನಾಭಾವ ಸಂಬಂಧವಿದ್ದು ಸಹಕಾರ ಸಂಘ ಸ್ಥಾಪನೆಯಾಗಲು ಮೂಲ ಕಾರಣ ನಾನೇ ಎಂಬ ಹೆಮ್ಮೆ ನನಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಹೇಳಿದರು.

ತಾಲೂಕಿನ ರಂಗಸಮುದ್ರ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಸಂಘದ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮದಲ್ಲಿ ಸಹಕಾರ ಸಂಘವು ಸ್ಥಾಪನೆಯಾಗಲು ತಮ್ಮ ಪರಿಶ್ರಮ ಇದ್ದು, ಸಂಘದೊಂದಿಗೆ ತಮಗೆ ಅವಿನಾಭಾವ ಸಂಬಂಧ ಇದ್ದು ಬೇರೆ ಸಹಕಾರ ಸಂಘಕ್ಕೆ ಸೇರ್ಪಡೆ ಯಾಗದೇ ಇಲ್ಲೇ ಮುಂದುವರೆದಿದ್ದೇನೆ ಎಂದರು.

ಸಂಘದ ಅಭಿವೃದ್ಧಿಗೆ ನಾನು ಯಾವಾಗಲೂ ಸಹಕಾರ ನೀಡಲು ಸಿದ್ಧನಿದ್ದೇನೆ. ಹಾಗಾಗಿ ಬೀಜ ಮಾರಾಟ ಸೇರಿದಂತೆ ಇನ್ನಿತರೆ ಆರ್ಥಿಕಾಭಿವೃದ್ಧಿ ಸಾಧಿಸಲು ಸಂಘದ ಆವರಣದಲ್ಲಿ ಮೂರು ಕೊಠಡಿಗಳನ್ನು ನಿರ್ಮಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು. ಇದೇ ವೇಳೆ ಬಸವೇಗೌಡರ ಮಾತಿನಿಂದ ಪ್ರೇರಿತರಾದ ಸಂಘದ ಅಧ್ಯಕ್ಷ ಆರ್.ಜಿ.ರಮೇಶ್ ಹಾಗೂ ನಿರ್ದೇಶಕ ಟಿ.ವಾಸುದೇವ್ ತಾವೂ ಸಹ ತಲಾ ಒಂದೊಂದು ಕೊಠಡಿ ನಿರ್ಮಿಸಲು ಆರ್ಥಿಕ ಸಹಕಾರ ನೀಡುವುದಾಗಿ ಪ್ರಕಟಿಸಿದರು.

ಸಂಘದ ಅಧ್ಯಕ್ಷ ಆರ್.ಜಿ.ರಮೇಶ್ ಮಾತನಾಡಿ, ಸಾಲ ಪಡೆದ ರೈತರು ಸಕಾಲಕ್ಕೆ ಸಾಲದ ಹಣ ಹಿಂದುರಿಗಿಸುವ ಮೂಲಕ ಸಂಘ ಆರ್ಥಿಕವಾಗಿ ತನ್ನ ಗುರಿ ಮುಟ್ಟಲು ಸಹಕರಿಸಬೇಕೆಂದು ಮನವಿ ಮಾಡಿದರು. ಉಪಾಧ್ಯಕ್ಷ ರಂಗಸಮುದ್ರ ವೆಂಕಟೇಶ್ ಮಾತನಾಡಿ, ಸ್ತ್ರೀ ಶಕ್ತಿ ಸ್ವಸಹಾಯ ಸಂಘದವರು ಖಾಸಗಿಯಾಗಿ ಸಾಲ ಪಡೆಯುತ್ತಿರುವ ಬಗ್ಗೆ ಮಾಹಿತಿ ಇದೆ. ಹೊರಗೆ ಬಡ್ಡಿ ದರ ಹೆಚ್ಚಿರುವುದರಿಂದ ಸಂಘದ ಸದಸ್ಯರು ಸಹಕಾರ ಸಂಘದಲ್ಲೇ ದೊರಕುವ ಕಡಿಮೆ ಬಡ್ಡಿ ದರದ ಸಾಲ ಪಡೆದು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುವಂತೆ ಕರೆ ನೀಡಿದರು.

ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ ಮಾತನಾಡಿ, ಸಂಘವು ಪ್ರಸಕ್ತ ಸಾಲಿನಲ್ಲಿ 3.50 ಲಕ್ಷ ರೂ.ಗಳ ನಿವ್ವಳ ಲಾಭಗಳಿಸಿದೆ. ರೈತರಿಗೆ 6,75, 55000 ರೂ. ಗಳನ್ನು ಕೆಸಿಸಿ ಸಾಲವಾಗಿ ನೀಡಲಾಗಿದೆ. ಸ್ವಸಹಾಯ ಸಂಘಗಳಿಗೆ ಸಾಲವಿತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.

ಸಂಘದ ನಿರ್ದೇಶಕರಾದ ಟಿ.ವಾಸುದೇವ, ಎಸ್. ರಮೇಶ್, ರೇಣುಕಾ, ಎಸ್. ವಸಂತ, ಮಂಜುನಾಥ ಹೆಗ್ಡೆ, ಕಲ್ಯಾಣಮ್ಮ, ಜೋಗಯ್ಯ,ಸಣ್ಣ ಮಾದಯ್ಯ, ಎಸ್.ಹೆಚ್. ಮಹದೇವ್, ಮಾರಾಟ ಗುಮಾಸ್ತ ಆರ್.ಸಿ. ರಾಧಾಕೃಷ್ಣ ಹಾಜರಿದ್ದರು.

ಪ್ರತಿ ಸೋಮವಾರ ನಂ.ಗೂಡಲ್ಲಿ ಜನತಾದರ್ಶನ

ಮೂಲ ಸೌಕರ್ಯ, ಕಾಡು ಪ್ರಾಣಿಗಳ ಹಾವಳಿ ತಡೆ, ಸ್ಮಶಾಣ ಅಭಿವೃದ್ಧಿ ಮನವಿ



ನಂಜನಗೂಡು, ಸೆ.25– ಸಾರ್ವಜನಿಕರ ಸ್ಥಳೀಯ ಸಮಸ್ಯೆಗಳಿಗೆ ಸ್ಥಳದಲ್ಲಿ ಪರಿಹಾರ ನೀಡುವ ಸಲುವಾಗಿ ಪ್ರತಿ ಸೋಮವಾರ ನಗರದ ತಾಲೂಕು ಪಂಚಾಯಿತಿ ಕಟ್ಟಡದಲ್ಲಿರುವ ಶಾಸಕರ ಕಚೇರಿಯಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ಸೋಮವಾರ ತಾಲೂಕು ಆಡಳಿತ ಏರ್ಪಸಿದ್ಧ ಜನತಾದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಸಾರ್ವಜನಿಕರು ತಮ್ಮ ಗ್ರಾಮಗಳ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಶಾಸಕರನ್ನು ಹುಡುಕಿ ಮೈಸೂರಿಗೆ ಅಲೆಯುವುದನ್ನು ತಪ್ಪಿಸುವ ಸಲುವಾಗಿ, ಅಲ್ಲದೆ ಜನಸಾಮಾನ್ಯರ ಸ್ಥಳೀಯ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುವ ಸಲುವಾಗಿ ಈ ಜನತಾದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸಾರ್ವಜನಿಕರು ಪ್ರತಿ ಸೋಮವಾರ ಶಾಸಕರ ಕಚೇರಿಯಲ್ಲಿ ನನ್ನನ್ನು ಭೇಟಿಯಾಗಬಹುದು, ಜೊತೆಗೆ ಕಚೇರಿಗೆ ಬರಲು ಸಾಧ್ಯವಾಗದವರು ನನ್ನ ದೂರವಾಣಿ ಸಂಖ್ಯೆಗೆ ಅಥವಾ ಕಚೇರಿಯ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಸಮಸ್ಯೆಯನ್ನು ತಿಳಿಸಿ ಬಗೆಹರಿಸಿಕೊಳ್ಳಲು ಮುಂದಾಗಬೇಕು ಎಂದರು.

ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯವನ್ನು ಒದಗಿಸುವಂತೆ, ರಸ್ತೆ ಚರಂಡಿ ನಿರ್ಮಾಣ, ಸಮುದಾಯ ಭವನ ನಿರ್ಮಿಸಿ ಕೊಡುವಂತೆ ಅಹವಾಲು ಸಲ್ಲಿಸಿದ್ದಾರೆ. ಕೆಲ ಗ್ರಾಮಗಳಲ್ಲಿ ಚರಂಡಿ ಸ್ವಚ್ಛತೆ ಇಲ್ಲದೆ ಇರುವ ಬಗ್ಗೆ, ಸ್ಮಶಾನ ಅಭಿವೃದ್ಧಿಪಡಿಸುವಂತೆ ದೂರು ಕೇಳಿ ಬಂದಿದೆ, ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸುವಂತೆ ಹೆಚ್ಚಾಗಿ ದೂರು ಕೇಳಿ ಬಂದಿದೆ ತಾಲೂಕು ಮಟ್ಟದ ಅಧಿಕಾರಿಗಳ ಮಟ್ಟದಲ್ಲಿ ಪರಿಹಾರವಾಗುವಂತಹ ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಾಗಿದೆ ಎಂದರು.

ಹಳ್ಳಿಕಾರ್ ತಳಿಗಳ ವಿತರಣೆ ಕಾರ್ಯಕ್ರಮ



ಬನ್ನೂರು, ಸೆ25– ಪಟ್ಟಣದಲ್ಲಿ ಗಂಗಸೇನೆ ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಅಶ್ವಿನಿ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ರಾಹುಲ್‌ಗೌಡ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ನೈಸರ್ಗಿಕ ಕೃಷಿಕರಿಗೆ 100 ಹಳ್ಳಿಕಾರ್ ತಳಿಗಳ ವಿತರಣಾ ಕಾರ್ಯಕ್ರಮದಲ್ಲಿ ನಟ ದರ್ಶನ್ ತೂಗುದೀಪ್ ಭಾಗವಹಿಸಿ ರಾಸುಗಳನ್ನು ವಿತರಿಸಿ, ಕಾವೇರಿ ನೀರಿಗಾಗಿ ಹೋರಾಟ ನಡೆಸಲೇ ಬೇಕಾಗಿರುವ ಅನಿವಾರ್ಯತೆ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ನಂತರ ಚಿತ್ರನಟ ಅಭಿಷೇಕ್ ಅಂಬರೀಶ್ ಮಾತನಾಡಿ,ರಾಸುಗಳನ್ನು ನೀಡುವ ಇಂಥ ಕಾರ್ಯ ಬಹಳಷ್ಟು ಸಂತಸವನ್ನುಂಟು ಮಾಡಿದೆ ಎಂದರು.

ಶಾಸಕ ದರ್ಶನ್‌ಪುಟ್ಟಣಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ, ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಬನ್ನೂರು ಕೃಷ್ಣಪ್ಪ, ಚಿತ್ರನಟ ಸೂರ್ಯಚೇತನ್, ಸಚ್ಚಿದಾನಂದ, ರಾಜಾನಂದ, ಪದ್ಮನಾಭ, ಎಸಿಸಿ ರಮೇಶ್, ಸಮಾಜ ಸೇವಕ ಮಹೇಂದ್ರಸಿಂಗ್ ಕಾಳಪ್ಪ, ಚಾಮರಸಮಾಲೀ ಪಾಟೀಲ್, ಜೆ.ಎಂ. ವೀರಸಂಗಯ್ಯ, ಕೆ. ಮಲ್ಲಯ್ಯ, ದರ್ಶನ್ ಅಭಿಮಾನಿಗಳು, ಮುಖಂಡರು ಇದ್ದರು.

ಲಕ್ಷ್ಮೀ ಮಹಿಳಾ ಬ್ಯಾಂಕಿನಿಂದ ಚಿನ್ನ, ಗೃಹ ಸಾಲ ನೀಡಲು ಚಿಂತನೆ

15ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಅಧ್ಯಕ್ಷೆ ಶ್ರೀಮತಿ ಲಲಿತಾ ಜಿಟಿಡಿ

ಹುಣಸೂರು.ಸೆ.25– ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕಿನಿಂದ ಮುಂದಿನ ದಿನಗಳಲ್ಲಿ ಗೃಹ, ಚಿನ್ನ ಸೇರಿದಂತೆ ವಿವಿಧ ಯೋಜನೆಯಡಿ ಸಾಲ ವಿತರಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ರಾಜ್ಯ ವಿವಿಧೋದ್ದೇಶ ಸಹಕಾರ ಸಂಘಗಳ ಪತ್ತಿನ ಮಹಾಮಂಡಳದ ಅಧ್ಯಕ್ಷರು ಮತ್ತು ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ಶ್ರೀಮತಿ ಕೆ. ಲಲಿತಾ ಜಿ.ಟಿ. ದೇವೇಗೌಡ ತಿಳಿಸಿದ್ದಾರೆ.



ನಗರದ ಪರಸಯ್ಯನ ಕಲ್ಯಾಣ ಮಂಟಪದಲ್ಲಿ ನಡೆದ ಸಂಘದ 15ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದಿನ ಕಾಲ ದಲ್ಲಿ ಮಹಿಳೆಯರು ಅಡಿಗೆ ಮನೆಗೆ ಸೀಮಿತ ಎನ್ನುವ ಮಾತು ದೂರವಾಗಿದೆ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಕೆಲಸ ಮಾಡಬಹುದು ಎಂಬುದನ್ನು ತೋರಿಸಿದ್ದಾರೆ ಎಂದರು.

ಮಹಿಳೆಯರು ಅಬಲೆಯರಲ್ಲ. ಮನಸ್ಸು ಮಾಡಿ ನಿಂತರೆ ಸಾಧನೆ ಮಾಡಬಹುದು. ಮಹಿಳೆಯರು ಸಬಲೆಯರು ಎನ್ನುವುದಕ್ಕೆ ಈಗಾಗಲೇ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಪಾತ್ರ ಅನಿವಾರ್ಯವಾಗಿರುವುದೇ ಸಾಕ್ಷಿ. ಈ ನಿಟ್ಟಿನಲ್ಲಿ ನಮ್ಮ ಬ್ಯಾಂಕು ಕೂಡ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸುತ್ತಿದೆ ಎಂದು ತಿಳಿಸಿದರು.

ನಾವು ಲಕ್ಷ್ಮೀ ಮಹಿಳೆ ಹೆಸರಿನಲ್ಲಿ ಹುಣಸೂರಿನಲ್ಲಿ ಸಂಘ ಕಟ್ಟುವಾಗ ಬಹಳಷ್ಟು ಮಾತುಗಳು ಕೇಳಿ ಬಂದವು. ಸವಾಲುಗಳು ಕೂಡ ಇದ್ದವು, ಆದರೆ ಇಂದಿಗೆ 15 ವರ್ಷ ಕಳೆದಿವೆ, ಸ್ವಂತ ಕಟ್ಟಡವಿದೆ, ತಾಲೂಕು ಕೇಂದ್ರದಿಂದ ಜಿಲ್ಲಾ ಮಟ್ಟಕ್ಕೆ ವಿಸ್ತರಣೆಗೊಂಡಿದೆ. ಮೂರು ಕೋಟಿಗೂ ಹೆಚ್ಚು ವಹಿವಾಟು ನಡೆಸಿ ಜಿಲ್ಲಾಮಟ್ಟದಲ್ಲಿ ಮಹಿಳೆಯರ ಆರ್ಥಿಕ ಅಭಿವೃದ್ಧಿ ಸಲಹಾ ಕೇಂದ್ರವಾಗಿ ನಿಂತಿದೆ ಹಾಗೂ ರಾಜ್ಯ ಮಟ್ಟದ ಪತ್ತಿನ ಮಹಾಮಂಡಳದ ರಾಜ್ಯಾಧ್ಯಕ್ಷೆಯಾಗಿ ಕೂಡ ಬೆಂಗಳೂರಿನಲ್ಲೂ ಸ್ವಂತ ಕಟ್ಟಡ ನಿರ್ಮಿಸಿ ಇವತ್ತು ರಾಜ್ಯ ಮಟ್ಟದ ಸಂಘಗಳ ಪ್ರತಿನಿಧಿಯಾಗಿ ಕೆಲಸ ಮಾಡಿರುವ ಹೆಮ್ಮೆ ನನಗಿದೆ ಎಂದು ಅವರು ನುಡಿದರು.

ಮುಂದಿನ ದಿನಗಳಲ್ಲಿ ನಮ್ಮ ಬ್ಯಾಂಕಿನಿಂದ ಗೃಹ, ಚಿನ್ನ ಸೇರಿದಂತೆ ವಿವಿಧ ಯೋಜನೆಯಡಿ ಸಾಲ ಸೌಲಭ್ಯಗಳನ್ನು ನೀಡುವ ಚಿಂತನೆ ನಡೆಸುತ್ತಿದ್ದೇನೆ. ಸದಸ್ಯರಿಗೆ ಅನುಕೂಲವಾಗುವಂತೆ ಸಾಲ ಸೌಲಭ್ಯ ವಿತರಣೆ ಮಾಡಲಾಗುತ್ತದೆ ಎಂದರು.

ಬ್ಯಾಂಕಿನ ಸಿ.ಇ.ಓ ಶಶಿಕಲಾ ಬಸವಲಿಂಗಯ್ಯ, ಆಯವ್ಯಯ ಮತ್ತು ಜಮಾ ಖರ್ಚು ಮಂಡನೆ ಮಾಡಿ ಅನುಮೋದನೆ ಪಡೆದುಕೊಂಡರು. ಬ್ಯಾಂಕಿನ ಅಭಿವೃದ್ಧಿಗೆ ಸದಸ್ಯರ ಸಹಕಾರ ಅಗತ್ಯವಾಗಿ ಬೇಕಾಗಿದೆ ಎಂದರು. ಸಭೆಯಲ್ಲಿ ಉಪಾಧ್ಯಕ್ಷೆ ಜಯಮ್ಮ ಮಹದೇವ್, ನಿರ್ದೇಶಕರಾದ ರಾಜೇಶ್ವರಿ ಮಹದೇವ್, ಶಕುಂತಲಾ ವೆಂಕಟೇಶ್, ಕೆ. ಆರ್. ಶಶಿಕಲಾ ನಾಗಣ್ಣ ಮಾಣಾಕ್ಷಿ ನಾಗರಾಜ್, ಕೆ.ಎನ್.ಕಲ್ಪನಾ ಬೊಮ್ಮೇಗೌಡ, ನಳಿನಾಕ್ಷಿ ಜಯರಾಮೇಗೌಡ, ಶಾಂತಕುಮಾರಿ ಪುಟ್ಟಸ್ವಾಮಪ್ಪ, ಗೀತಾ ನಿಂಗರಾಜ್, ಎಸ್. ಸುಮಾ ಪರಮೇಶ್, ವಿ.ಸೌಭಾಗ್ಯ ಗುಣಶೇಖರ್, ನಳಿನಾಕ್ಷಿ ನರಸಿಂಹರಾಜು, ಕೆ.ವಿ. ನೇತ್ರಾವತಿ ಮುದ್ದಣ್ಣ, ಪುಷ್ಪಲತಾ ಪ್ರಭಾಕರ್ ಹಾಗೂ ಬ್ಯಾಂಕಿನ ನೌಕರ ಕೆ.ಎಂ.ಆಶಾ ಮಂಜು, ಆಶಾ, ಸುನೀಲ್‌ಕುಮಾರ್, ವಿನೋದ ಕುಮಾರ್ ಹಾಜರಿದ್ದರು. ಸರ್ವ ಸದಸ್ಯರು ಕೂಡ ಉಪಸ್ಥಿತರಿದ್ದರು. ಶಶಿಕಲಾ ಸ್ವಾಗತಿಸಿ, ಸೌಭಾಗ್ಯ ಪ್ರಾರ್ಥಿಸಿದರು.

ಬಿಎಎಂಎಸ್ ಆಯುರ್ವೇದಿಕ್ ಪರೀಕ್ಷೆಯಲ್ಲಿ ಕಟ್ಟೆಮಳಲವಾಡಿಯ ವಿದ್ಯಾರ್ಥಿನಿಗೆ ಉನ್ನತ ಶ್ರೇಣಿ



ಹಿರೀಕ್ಯಾತನಹಳ್ಳಿ, ಸೆ.25– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಕಟ್ಟೆಮಳಲವಾಡಿ ಗ್ರಾಮದ ಭಾವನಾಶ್ರೀ, ಬಿಎಎಂಎಸ್ ಆಯುರ್ವೇದಿಕ್ ಅಂತಿಮ ವರ್ಷದ ಫಲಿತಾಂಶದಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಗ್ರಾಮದ ಅಸಿಸ್ಟೆಂಟ್ ಇಂಟಲಿಜೆನ್ಸ್ ಆಫೀಸ್ (AIO) ಸ್ಟೇಟ್ ಇಂಟಲಿಜೆನ್ಸ್ ಮೈಸೂರು ವಿಭಾಗದ ಅಧಿಕಾರಿ ಕೆ.ಎಸ್.ರಾಜಣ್ಣ, ಶ್ಯಾಮಲ ದಂಪತಿಯ ಪುತ್ರಿಯಾದ ಈಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಬಾಪೂಜಿ ಆಯುರ್ವೇದಿಕ್ ವಿಜ್ಞಾನ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅಂತಿಮ ವರ್ಷದ ಫಲಿತಾಂಶದಲ್ಲಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದು ಶೇ.82.ರಷ್ಟು ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಮಗಳ ಸಾಧನೆಯನ್ನು ಕಂಡು ಪೋಷಕರು ಹರ್ಷವ್ಯಕ್ತಪಡಿಸಿದರು.

ಮುಕ್ತ ವಿವಿ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣ
ಚಾ.ನಗರ ಪ್ರಾದೇಶಿಕ ಕೇಂದ್ರದ ಇಬ್ಬರು ಹಂಗಾಮಿ ನೌಕರರು ವಶಕ್ಕೆ



ಮೈಸೂರು, ಸೆ. 25(ಆರ್‌ಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿಕಾಂ ಅಂತಿಮ ವರ್ಷದ ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪರೀಕ್ಷಾ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣ ಸಂಬಂಧ ಚಾಮರಾಜನಗರ ಪ್ರಾದೇಶಿಕ ಕೇಂದ್ರದ ಇಬ್ಬರು ಹಂಗಾಮಿ ನೌಕರರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಮಹದೇವ ಎಂಬುವರು ಪ್ರಾದೇಶಿಕ ನಿರ್ದೇಶಕರಾಗಿರುವ ಕೇಂದ್ರದಿಂದ ಮೊಟ್ಟ ಮೊದಲು ಪ್ರಶ್ನೆ ಪತ್ರಿಕೆ ವಾಟ್ಸಾಪ್ ಮೂಲಕ ಮಂಗಳೂರು ವಿದ್ಯಾರ್ಥಿಗಳಿಗೆ ರವಾನೆಯಾಗಿದೆ ಎಂಬ ಸುಳಿವಿನ ಮೇರೆಗೆ ಸಿಸಿಬಿ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳನ್ನೊಳಗೊಂಡ ತನಿಖಾ ತಂಡವು ಚಾಮರಾಜನಗರದ ಪ್ರಾದೇಶಿಕ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಹಂಗಾಮಿ ನೌಕರರಿಬ್ಬರು ಅಂತಿಮ ಬಿಕಾಂ ಪದವಿಯ ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪ್ರಶ್ನೆ ಪತ್ರಿಕೆಯನ್ನು ಪರೀಕ್ಷಾ ದಿನಾಂಕದ ಎರಡು ದಿನ ಮುನ್ನವೇ ಮಾರಾಟ ಮಾಡಿ ಹಣವನ್ನು ಬೇರೆಯವರ ಮೊಬೈಲ್‌ಗೆ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡಿದ್ದರು ಎಂಬುದು ಮೇಲ್ನೋಟಕ್ಕೆ ಕಂಡುಬಂತು.

ಕಾಲ್ ಡಿಟೇಲ್ ಮೂಲಕ ದೃಢಪಡಿಸಿಕೊಂಡ ನಂತರ ಮುಕ್ತ ವಿಶ್ವವಿದ್ಯಾನಿಲಯದ ಚಾಮರಾಜನಗರ ಪ್ರಾದೇಶಿಕ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಇಬ್ಬರು ಹಂಗಾಮಿ ನೌಕರರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ. ಪ್ರಶ್ನೆ ಪತ್ರಿಕೆ ಬಂಡಲ್ ಅವರ ಕೈಗೆ ಸಿಕ್ಕಿದ್ದೇಗೆ, ಸೀಲ್ ಆಗಿರುವ ಬಂಡಲ್‌ಗಳಿದ್ದ ಪೆಟ್ಟಿಗೆಗಳ ಕೀಲಿ ಯಾರು ಕೊಟ್ಟಿದ್ದು ಎಂಬುದರ ಬಗ್ಗೆ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಪ್ರಕರಣದ ಹಿಂದೆ ಯಾರ್‍ಯಾರು ಭಾಗಿಯಾಗಿದ್ದಾರೆ ಎಂಬ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಕೇಂದ್ರದ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದ ಪ್ರಾದೇಶಿಕ ನಿರ್ದೇಶಕರ ಗಮನಕ್ಕೆ ಬಾರದೇ ಹಂಗಾಮಿ ನೌಕರರು ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಲು ಧೈರ್ಯ ಮಾಡಿದ್ದೇಗೆ? ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರು ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಕ್ಕೆ ರವಾನಿಸುವಾಗ ಗೌಪ್ಯತೆ ಕಾಪಾಡುವಲ್ಲಿ ನಿರ್ಲಕ್ಷ್ಯ ವಹಿಸಿದ್ದರೆ ಎಂಬಿತ್ಯಾದಿ ಪ್ರಶ್ನೆಗಳು ಎದುರಾಗಿದ್ದು, ತನಿಖಾಧಿಕಾರಿಗಳಿಗೆ ಈ ಪ್ರಕರಣ ಸವಾಲಾಗಿ ಪರಿಣಮಿಸಿದೆ. ಪರೀಕ್ಷೆ ದಿನವೇ ಪ್ರಶ್ನೆ ಪತ್ರಿಕೆ ಮಾರಾಟ ಮಾಡಿದ್ದ ಇಬ್ಬರು ವಿದ್ಯಾರ್ಥಿಗಳನ್ನು ವಿಜ್ಞಾನ ಭವನದ ಪರೀಕ್ಷಾ ಕೇಂದ್ರದಲ್ಲೇ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ನಾಳೆ ಇಡೀ ಬೆಂಗಳೂರು ಬಂದ್ ಆಗ್ಬೇಕು; ಆದಾಗ್ಯೂ ವ್ಯಾಪಾರ ಮಾಡಿದ್ರೆ ಮುಂದಾಗುವ ತೊಂದರೆಗೆ ನೀವೇ ಹೊಣೆ



ಬೆಂಗಳೂರು: ಕಾವೇರಿ ನದಿ ನೀರು ವಿಚಾರವಾಗಿ ಮಂಗಳವಾರ ನಡೆಯಲಿರುವ ಬೆಂಗಳೂರು ಬಂದ್ ಯಶಸ್ವಿಯಾಗಬೇಕು, ಇಡೀ ಬೆಂಗಳೂರು ಸಂಪೂರ್ಣ ಬಂದ್ ಆಗಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಬೆಂಗಳೂರು ಬಂದ್ ವಿಚಾರವಾಗಿ ಇಂದು ಸುದ್ದಿಗಾರರ ಜತೆ ಮಾತನಾಡಿದ ಅವರು, ಹೋಟೆಲ್ ಮತ್ತಿತರ ವ್ಯಾಪಾರಸ್ಥರು ಅಂಗಡಿಗಳನ್ನು ಮುಚ್ಚಿ ಬೆಂಗಳೂರಿನ ಜ್ವಲಂತ ಸಮಸ್ಯೆಗಳಿಗೆ ಬೆಂಬಲ ನೀಡಬೇಕು. ಯಾರಾದರೂ ಹೋಟೆಲ್ ತೆರೆದು ವ್ಯಾಪಾರ ಮಾಡಲು ಮುಂದಾದರೆ ಮುಂದೆ ಆಗುವ ತೊಂದರೆಗಳಿಗೆ ನೀವೇ ಹೊಣೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್ ಸರ್ಕಾರದ ವೈಫಲ್ಯದಿಂದ ಈ ಸಮಸ್ಯೆ ತಲೆದೋರಿದೆ. ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳಲ್ಲಿ ಇರುವುದು ಕೇವಲ 59 ಟಿಎಂಸಿ ನೀರು ಮಾತ್ರ ಎಂದಿರುವ ಬಿಎಸ್‌ವೈ, ವಿಧಾನ ಸೌಧದ ಗಾಂಧಿ ಪ್ರತಿಮೆ ಬಳಿ ಸೆ. 27ರಂದು ಬಿಜೆಪಿ ಶಾಸಕರು, ಸಂಸದರು ಧರಣಿ ಮಾಡುತ್ತಾರೆ ಎಂದೂ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ಮಧ್ಯ ಪ್ರವೇಶಿಸಬೇಕೆಂಬ ದೇವೇಗೌಡರ ಮನವಿ ವಿಚಾರವಾಗಿ ಪ್ರತಿಕ್ರಿಯೆ ನೀಡಿರುವ ಬಿಎಸ್‌ವೈ, ಪತ್ರ ಬರೆದಿರುವುದು ಗೊತ್ತಿದೆ. ಆದರೆ ಈಗ ಅದರ ಬಗ್ಗೆ ಏನು ಮಾತನಾಡುವುದಿಲ್ಲ ಎಂದಿದ್ದಾರೆ. ಅಲ್ಲದೆ, ಸಿಎಂ–ಡಿಸಿಎಂ ತಮಿಳುನಾಡಿನ ಏಜೆಂಟರಂತೆ ವರ್ತಿಸುವುದನ್ನು ನಿಲ್ಲಿಸಿ, ನೀರು ಬಿಡುವುದನ್ನು ನಿಲ್ಲಿಸಬೇಕು ಎಂದು ಹೇಳಿದ್ದಾರೆ.

ಈಜಲು ತೆರಳಿದ್ದ ಕೃಷಿ ಅಧಿಕಾರಿ ಸೇರಿ ಇಬ್ಬರು ನೀರುಪಾಲು

ಶಿವಮೊಗ್ಗ: ಸಾಗರ ತಾಲೂಕಿನ ಜೋಗ ಜಲಪಾತ ವೀಕ್ಷಣೆಗೆ ಬಂದಿದ್ದಾಗ ಜಲಪಾತದಲ್ಲಿ ಈಜಲು ತೆರಳಿದ್ದ ಇಬ್ಬರು ಯುವಕರು ನೀರು ಪಾಲಾಗಿದ್ದಾರೆ. ಮೃತರನ್ನು ಕೃಷಿ ಅಧಿಕಾರಿ ಕೆ.ಟಿ ಕುಮಾರ್ ಹಾಗೂ ಖಾಸಗಿ ಕಂಪನಿ ಉದ್ಯೋಗಿ ಅರುಣ್ ಎಂದು ಗುರುತಿಸಲಾಗಿದೆ. ಯುವಕರು ಕುಟುಂಬಸ್ಥರ ಜೊತೆಗೆ ಜೋಗ ಜಲಪಾತ ವೀಕ್ಷಣೆಗೆ ಆಗಮಿಸಿದ್ದಾಗ ಈ ಘಟನೆ ಸಂಭವಿಸಿದೆ.

ಶಕ್ತಿ ಯೋಜನೆ: ದೇವಸ್ಥಾನಗಳ ಆದಾಯ ಹೆಚ್ಚಳ



ಬೆಂಗಳೂರು: ರಾಜ್ಯದಲ್ಲಿ ಮಹಿಳೆಯರ ಉಚಿತ ಪ್ರಯಾಣಕ್ಕಾಗಿ ಜಾರಿಗೊಳಿಸಿದ ಶಕ್ತಿ ಯೋಜನೆಯಿಂದ ದೇವಸ್ಥಾನಗಳ ಆದಾಯ ಹೆಚ್ಚಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಹೇಳಿದ್ದಾರೆ.

ಪ್ರವಾಸೋದ್ಯಮ ಮತ್ತು ಪುರಾತತ್ವ ವಸ್ತುಸಂಗ್ರಹಾಲಯ ಇಲಾಖೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ 'ನಮ್ಮ ಸ್ಮಾರಕ: ನಮ್ಮ ಪರಂಪರೆ, ನಮ್ಮ ಗುರುತು, ನಮ್ಮ ಹೆಮ್ಮೆ' ಅಭಿಯಾನದ ಸಂವಾದ ಮತ್ತು ಡಿಜಿಟಲ್ ವೇದಿಕೆಯನ್ನು ಉದ್ಘಾಟಿಸಿ ಸಿಎಂ ಮಾತನಾಡಿದರು. ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಅವಕಾಶಗಳಿವೆ. ಶಕ್ತಿ ಯೋಜನೆಯ ಹಿಂದಿನ ಕಾಳಜಿ ಏನೆಂದರೆ, ಬಡವರೂ ಆಧ್ಯಾತ್ಮಿಕ ಮತ್ತು ಪರಿಸರ ಪ್ರವಾಸೋದ್ಯಮ ಕೇಂದ್ರಗಳು ಹಾಗೂ ದೇವಾಲಯಗಳಿಗೆ ಹೋಗಲು ಅವಕಾಶ ನೀಡಬೇಕು. 60 ಲಕ್ಷ ಮಹಿಳೆಯರು ಇದರ ಲಾಭ ಪಡೆದಿದ್ದಾರೆ ಮತ್ತು ದೇವಾಲಯಗಳ ಆದಾಯ ಹೆಚ್ಚಳವಾಗಿದೆ ಎಂದರು.

ಆರ್ಥಿಕತೆಯು ವೇಗ ಪಡೆಯುತ್ತಿದೆ ಮತ್ತು ವ್ಯಾಪಾರ ಹಾಗೂ ವಹಿವಾಟುಗಳು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತಿವೆ. ಈ ಎಲ್ಲಾ ಕಾಳಜಿ ಶಕ್ತಿ ಯೋಜನೆಯ ಹಿಂದೆ ಕೆಲಸ ಮಾಡಿದೆ ಎಂದು ಸಿಎಂ ಹೇಳಿದರು. ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳೆದರೆ ದೇಶದ ಸಾಂಸ್ಕೃತಿಕ ಹೆಮ್ಮೆ ಹೆಚ್ಚುತ್ತದೆ ಮತ್ತು ಆರ್ಥಿಕತೆಗೆ ಉತ್ತೇಜನ ಸಿಗುತ್ತದೆ ಎಂದರು.

ಇತಿಹಾಸದ ಅರಿವಿಲ್ಲದವರು ಭವಿಷ್ಯ ರೂಪಿಸಿಕೊಳ್ಳಲಾರರು ಎಂಬ ಡಾ. ಬಿ.ಆರ್.ಅಂಬೇಡ್ಕರ್ ಅವರ ಮಾತನ್ನು ಯಾರೂ ಮರೆಯಬಾರದು. ಇಂದಿನ ಪೀಳಿಗೆಗೆ ನಮ್ಮ ಇತಿಹಾಸ ಅರ್ಥವಾಗುವಂತೆ ಹಾಗೂ ನಮ್ಮ ಪರಂಪರೆಯ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಲು ಸ್ಮಾರಕಗಳ ರಕ್ಷಣೆ ಅತ್ಯಗತ್ಯ ಎಂದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ನಂಬರ್ 233, ನೀತಿ ಮಾರ್ಗ, ಸಿದ್ಧಾರ್ಥ ನಗರ, ಮೈಸೂರು, ಇಲ್ಲಿ ವಾಸವಾಗಿರುವ ಎಂ. ಮಹಾವೀರ್ ಚಂದ್ ಬಿನ್ ಲೇ. ಅನುಪ್ ಚಂದ್ ಮಿಶ್ರಿಮಲ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (5) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಕೆ.ಸಿ. ಲೇಔಟ್ (ಕೆಂಪು ಚೆಲುವಜಮ್ಮಣಿ ನಗರ), ಇಲ್ಲಿರುವ ಪೂರ್ವ–ಪಶ್ಚಿಮ: 12 ಮೀಟರ್, ಉತ್ತರ–ದಕ್ಷಿಣ: 18 ಮೀಟರ್, ಒಟ್ಟು ವಿಸ್ತೀರ್ಣ: 216 ಚದರ ಮೀಟರ್ ಅಳತೆಯ ಸ್ವತ್ತಿನ ಸಂಖ್ಯೆ: 451 ಮತ್ತು ಇದಕ್ಕೆ ಚಕ್ಕುಬಂದಿ – ಪೂರ್ವಕ್ಕೆ: ನಿವೇಶನ ಸಂಖ್ಯೆ 452 ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 450 ; ಉತ್ತರಕ್ಕೆ: ನಿವೇಶನ ಸಂಖ್ಯೆ 449 ; ದಕ್ಷಿಣಕ್ಕೆ: ರಸ್ತೆ.

Sd/- M.N. Prakash Kalappa, KAR-1996-2000, Advocate & Legal Consultant, #2-3, First Floor, PRI Complex, 67/7A, New Sayyaji Rao Road, Fort Mohalla, Mysore-570 004. Mob: 93431-12535. Email: mnprakashkalappa@gmail.com
ಮೈಸೂರು: 23–09–2023

ಕೊಡಗು ಜಿಲ್ಲಾ ಪಂಚಾಯತ್
ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ
ಅಲ್ಪಾವಧಿ ಟೆಂಡರ್ ಪ್ರಕಟಣೆ 01/2023–24

ಕ್ರ.ಸಂ.ಉನಿಕೊ/ಔಷಧ/ದ್ರಸಾರ/2023–24 ಮಡಿಕೇರಿ ದಿನಾಂಕ: 25–9–2023

ಜಿಲ್ಲೆಯ 73 ಪಶು ವೈದ್ಯ ಸಂಸ್ಥೆಗಳಿಗೆ **M/s. Gadag Oxygen Private Ltd., Gadag** ಇವರಿಂದ ದ್ರವಸಾರಜನಕ ಸರಬರಾಜಾಗುತ್ತಿರುವ ಪುತ್ತೂರು ತಾಲ್ಲೂಕು ಕೋಳ್ತಿಗೆ ಸೈಲೋ ಕೇಂದ್ರದಿಂದ ಅಕ್ಟೋಬರ್ 2023 ಮಾಹೆಯಿಂದ ಸೆಪ್ಟೆಂಬರ್ 2024ರ ಮಾಹೆಯವರೆಗೆ ಪ್ರತಿ ತಿಂಗಳು ದ್ರವಸಾರಜನಕವನ್ನು ವಾಹನದಲ್ಲಿ ಸಾಗಾಣಿಕೆ ಕೆಲಸಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

1) ದ್ರವಸಾರಜನಕ ಸಾಗಾಣಿಕೆ ಇಟ್ಟ ಅಂದಾಜು ಮೊತ್ತ ರೂ. 4.90 ಲಕ್ಷ. **EMD** ರೂ. 10,000.
2) ಟೆಂಡರ್ ನಮೂನೆ ಪಡೆಯಲು ಕೊನೆಯ ದಿನಾಂಕ 05–10–2023 ಅಪರಾಹ್ನ 12–00 ಗಂಟೆವರೆಗೆ ಖುಲ್ಲಾ ಟೆಂಡರ್ ಪ್ರತಿಗಳ ಬೆಲೆ ರೂ. 500 ಮಾತ್ರ.
3) ಭರ್ತಿ ಮಾಡಿದ ಟೆಂಡರ್ ನಮೂನೆ ಸಲ್ಲಿಸಲು ಕೊನೆಯ ದಿನಾಂಕ 5–10–2023 ಅಪರಾಹ್ನ 1–00 ಗಂಟೆ.
4) ಟೆಂಡರ್ ತೆರೆಯುವ ದಿನಾಂಕ 5–10–2023 ಅಪರಾಹ್ನ 3 ಗಂಟೆಗೆ.
5) ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– (ಡಾ. ಲಿಂಗರಾಜ್ ಹೆಚ್ ದೊಡ್ಡಮನಿ)
ಉಪ ನಿರ್ದೇಶಕರು, ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ

